# ಅಪರಂಜಿ

ತಿಳಿನಗೆಯ ಕಾರಂಜಿ

ಮೇ 2021




ಬಿಡಿ ಪ್ರತಿ: ರೂ. 10/-

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 38**

**ಸಂಚಿಕೆ - 8**

**ಮೇ - 2021**

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಪ್ರೊ. ಜಿ. ವೆಂಕಟಸುಬ್ಬಯ್ಯ | ಶ್ರೀನಿವಾಸ ವೈದ್ಯ | 3 |
| ಎಲ್ಲರ ಮನೆ ದೋಸೇನೂ... | ಸಿ.ಆರ್.ಸತ್ಯ | 7 |
| ಬಾಲಿ ದಶಾಸನ ಪ್ರಸಂಗ | ವತ್ಸಲ | 8 |
| ಕೊರೊನ ಅಟ್ ಕ್ರೋಸ್ ರೋಡ್ಸ್ | ಇ.ಆರ್. ರಾಮಚಂದ್ರನ್ | 14 |
| ಕಾಗೆ ಸ್ವಗತ | ಗುಂಡುರಾವ್ ದೇಸಾಯಿ | 17 |
| ಕೊ-ಬ್ರೊ-ಸಿಸ್‌ನ ಮಾತುಗಳು | ಪ್ರಕಾಶ್ ಆರ್. | 21 |
| ತುಂತುರು | ದಂಡಳ | 24 |
| ಆಸ್ಪತ್ರೆಯಲ್ಲಿ ... | ಓಂ ಪ್ರಕಾಶ್ | 25 |
| ಕುಟುಂಬ ಯೋಜನೆ... | ಕೆ.ಎಸ್.ಸೋಮೇಶ್ವರ | 26 |
| ಕ್ಲೋಸ್ಪೇಟೆ ಅಯ್ಯನವರ ಇಂಗ್ಲಿಷ್... | ಕೆ. ಸತ್ಯನಾರಾಯಣ | 28 |
| ನಿದ್ರಾಪಹರಣ | ಗಾಯತ್ರಿ ಮೂರ್ತಿ | 33 |
| ಈ ನರಮನುಷ್ಯರ ಸ್ವಭಾವವೇ ... | ಶಂಸ ಐತಾಳ | 38 |

ಮುಖಪುಟ ವ್ಯಂಗ್ಯಚಿತ್ರ :
**ಇಂಟರ್‌ನೆಟ್ ಕೃಪೆ**

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram

Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

**●ಪ್ರಕಾಶ್**

200 ಕೋಟಿ ಆಸ್ತಿಗಾಗಿ ಖಾಲಿ ನಿವೇಶನದ ವಿಳಾಸ

– ಶೀರ್ಷಿಕೆ

**ನಿರ್ಭೀತ ಭಾರತ ಎಂದರೆ ಇದೇ ಇರಬೇಕು !!**

***

ಕ್ರಿಕೆಟ್ ಬೆಟ್ಟಿಂಗ್ ಹಗರಣ; ಬೇಡವೇ ಮೂಗು ದಾರ? –ಪತ್ರಿಕೆ

**ಹೂ ವಿಲ್ ಬೆಲ್ ದಿ ಪ್ಲೇಯರ್ಸ್ ಅಂತ ಅಪರಂಜಿ ನಕ್ಕಳಂತೆ!!**

***

ಮಾರಾಟದ ಸರಕಾದ ವೈಯಕ್ತಿಕ ಮಾಹಿತಿ – ಶೀರ್ಷಿಕೆ

**ಹಣದ ದಾಹದ ಮಹಾಪೂರದಲ್ಲಿ ಸೋರಿಕೆಯೂ ಸೇರಿತೇ ?**

***

ಎಂ ಐ ಟಿ ವಿಚಾರ ಸಂಕಿರಣ; ರಾಹುಲ್ ದ್ರಾವಿಡ್ ಆಮಂತ್ರಿತ
– ಅಮೇರಿಕಾ ಸುದ್ದಿ

**ಕ್ರಿಕೆಟ್ ಮಾತ್ರವಲ್ಲ, ಜೀವನಯಾತ್ರೆಯಲ್ಲೂ ಸಾತ್ವಿಕತೆಯನ್ನು**

**ಮೆರೆಯುತ್ತಿರುವ ದ್ರಾವಿಡ್ ಅವರಿಗೆ ನಮ್ಮ ಶುಭಾಶಯಗಳು !!**

***

ಅಂಬಾನಿ, ಅದಾನಿ ನಮ್ಮ ಆದ್ಯತೆ ಅಲ್ಲ – ಬಿ.ಜೆ.ಪಿ. ವಕ್ತಾರರು

**"ಅಮ್ಮ, ನಾನು ಚಾಕಲೇಟ್ ತಿನ್ನಲೇ ಇಲ್ಲ" ಅಂತ ಮಗು ಹೇಳಿತಂತೆ !!!**

***

ಹೆಬ್ಬಾಳ ಮೇಲ್ಸೇತುವೆ ಬಿಡಿಎ – ಮೆಟ್ರೋ ಭಿನ್ನಾಭಿಪ್ರಾಯ

– ಪತ್ರಿಕೆ


**ಈ ಘಟಾನುಘಟಿಗಳ ಕದನದಲ್ಲಿ ನಾಗರಿಕರು ಬಡವಾದರು!!**

***

ಕಾಶ್ಮೀರದಲ್ಲಿ ಅತಿ ಎತ್ತರದ ರೈಲ್ವೆ ಮೇಲ್ಸೇತುವೆ – ಪತ್ರಿಕೆ

**ಇದರಿಂದಾದರೂ ಆ ರಾಜ್ಯದಲ್ಲಿ ಸಂಪರ್ಕ ಶಾಂತಿ ಹೊರಹೊಮ್ಮಲಿ!!**

# ಶ್ರದ್ಧಾಂಜಲಿ



**ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯ**

ಪ್ರೊಫೆಸರ್ ಜಿ.ವೆಂಕಟಸುಬ್ಬಯ್ಯನವರ ನಿಧನದಲ್ಲಿ ನಾವು ಕನ್ನಡದ ಆತ್ಮವನ್ನೇ ಕಳೆದುಕೊಂಡಿದ್ದೇವೆಂದು ನನಗೆ ಅನ್ನಿಸುತ್ತಿದೆ. ನಿಘಂಟುವಿನ ಕರ್ತೃ ಎಂದೇ ಹೆಸರಾಗಿದ್ದ ಅವರು, ಅದರ ಆಚೆಯ ಇಡೀ ಬದುಕಿಗೆ ಒಂದು ಮಾದರಿಯನ್ನು ಬಿಟ್ಟು ಹೋದರು. ನನ್ನ ಪೂರ್ವಜನ್ಮ ಪುಣ್ಯವೋ ಏನೋ ಇಪ್ಪತ್ತೈದು ವರ್ಷಗಳು ಅವರೊಂದಿಗೆ ಪ್ರತಿದಿನ ಬೆಳಗ್ಗೆ ವಾಕಿಂಗ್ ಹೋಗುವ ಸೌಭಾಗ್ಯ ನನ್ನದಾಗಿತ್ತು. ಶಂಕರರಾಯರು, ದೇಶಪಾಂಡೆ ಡಾಕ್ಟರು, ನಾಗೇಶರಾಯರು, ಕೃಷ್ಣಯ್ಯ  ಇವರುಗಳ ಜೊತೆಗೆ ಜೀವಿ ಮತ್ತು ನಾನು ಈ ವಾಕಿಂಗ್ ಗೆಳೆಯರ ಗುಂಪು. ಜೀವಿಯವರೊಂದಿಗಿನ ಮಾತುಕತೆಗಳಲ್ಲಿ ಅದೇನು ನಗುವಿನ ಹೊನಲು. ಆ ದಿನಗಳಲ್ಲಿ ನಾವು ನಕ್ಕಷ್ಟು ನಾನು ಇನ್ನೆಂದಿಗೂ ನಕ್ಕಿಲ್ಲ. ಅವರು "ನಗು" ಬಲ್ಲವರಾಗಿದ್ದರು. ನಗಬಲ್ಲವರೂ ಆಗಿದ್ದರು. ಅವರ ಹಾಸ್ಯಪ್ರಜ್ಞೆ ಅತ್ಯಂತ ನವಿರಾದದ್ದು. ನಮ್ಮ ನಗುವಿನ ಕೋಲಾಹಲ ನೋಡಿ ಇತರ ವಾಕಿಂಗ್ ಸಹಚರರು ನಮ್ಮ ಬಳಿ ಬಂದು ನಿಂತು ಜೀವಿಯುವರ ವಾಗ್ಝರಿಯುಲ್ಲಿ ಮಿಂದು ಹೋಗುತ್ತಿದ್ದದ್ದೂ ಉಂಟು.

ನಾನು ನನ್ನ ಗಂಡಭೇರುಂಡ ಕೃತಿ ಬರೆದಾಗ ಅದರಲ್ಲಿ ಬರುವ ಎಲ್ಲ ಹಳೆಯ ಮೈಸೂರಿನ ಆಚಾರ ಸಂಪ್ರದಾಯಗಳ ವಿವರಗಳನ್ನು ಜೀವಿಯವರೇ ನನಗೆ ಒದಗಿಸಿದ್ದು.

ನಮ್ಮ ಸಂವಾದ ಸಂಸ್ಥೆಗೆ ಅವರು ಅತ್ಯುತ್ತಮ ಪ್ರಚೋದಕರಾಗಿದ್ದರು. ಅವರ ಪ್ರಭಾವಶಾಲಿ ವ್ಯಕ್ತಿತ್ವ ಈ ಸಂಸ್ಥೆಗೆ ಅನೇಕ ಗಣ್ಯರ ನೆರವನ್ನು ತಂದಿತು. ಷಡಾಕ್ಷರಸ್ವಾಮಿ, ಡಾ. ಚಿನ್ನಯ್ಯ, ಕೆ. ಚೆಲುವರಾಜು ಇವರೆಲ್ಲಾ ಜೀವಿಯವರ ಆಪ್ತವರ್ಗದವರಾಗಿದ್ದರಿಂದ ಸಂವಾದದ ಚಟುವಟಿಕೆಗಳು ಪ್ರವರ್ಧಮಾನಕ್ಕೆ ಬಂದವು.

ರಾ.ಶಿ.ಯವರ ನಿಕಟವರ್ತಿಗಳಾಗಿದ್ದ ಜೀವಿ, ಅಂದಿನ ಕೊರವಂಜಿ ಮತ್ತು ಇಂದಿನ ಅಪರಂಜಿ ಪತ್ರಿಕೆಗಳ ಮೇಲೆ ತುಂಬ ಅಭಿಮಾನವನ್ನು ಹೊಂದಿದ್ದರು.

ಜೀವಿಯವರು ಹಲವು ಕಾಲ ರಾಮಕೃಷ್ಣ ವಿದ್ಯಾರ್ಥಿನಿಲಯಕ್ಕೆ ಸಂಚಾಲಕರಾಗಿದ್ದರು. ಆಗ ಅವರು ಸಲ್ಲಿಸಿದ ಸೇವೆ ಅನಾದೃಶವಾದದ್ದು. ಇಂದಿಗೂ ಅಲ್ಲಿನ ಹಳೆಯ ವಿದ್ಯಾರ್ಥಿಗಳು ಜೀವಿಯವರನ್ನು ಬಹು ಆಪ್ತವಾಗಿ ಸ್ಮರಿಸಿಕೊಳ್ಳುತ್ತಾರೆ.

ಅಗಲಿದ ಗೆಳೆಯ ಜೀವಿಯವರಿಗೆ ಇದೋ ನಮ್ಮೆಲ್ಲರ ಆತ್ಮೀಯ ವಿದಾಯ.

**– ಶ್ರೀನಿವಾಸ ವೈದ್ಯ.**

## ಜೀವಿಯವರ ಅಭಿರುಚಿ

ಬಿಟಿಎಂ ಬಡಾವಣೆಯಲ್ಲಿ ಮಯ್ಯ ಗ್ರೂಪ್ ಹೊಸ ಹೋಟೆಲ್ ಪ್ರಾರಂಭವಾಗಿತ್ತು. ಶುಚಿ, ರುಚಿಯ ಊಟ ತಿಂಡಿಗಳೆಂದು ಎಲ್ಲರೂ ಪ್ರಶಂಶಿಸುತ್ತಿದ್ದರು. ಸದಾ ಜನ ತುಂಬಿರುತ್ತಿದ್ದರು. ಹಿರಿಯ ಪರ್ತಕರ್ತರಾದ ಗರುಡನಗಿರಿ ನಾಗರಾಜ್ ಅವರು ಜಿವಿಯವರನ್ನು ಭೇಟಿ ಮಾಡಿದಾಗ ಹೇಳಿದ್ದರು 'ಸರ್, ಬಿಟಿಎಂ ಬಡಾವಣೆಯಲ್ಲಿ ಮಯ್ಯ ಅವರ ಹೊಸ ಹೋಟೆಲ್ ಪ್ರಾರಂಭವಾಗಿದೆ. ಊಟ ತಿಂಡಿ ಎಲ್ಲ ತುಂಬಾ ಚನ್ನಾಗಿದೆ' ಅಂದರು. ಕೂಡಲೇ ಜಿವಿಯವರು 'ಓ ನಾನಾಗಲೇ ಹೋಗಿ ಬಂದಾಯ್ತು' ಅಂದರು. ಯಾವುದೇ ಬಡಾವಣೆಯಲ್ಲಿ ಒಳ್ಳೆಯ ಹೋಟೆಲ್ ಇದೆಯೆಂದು ತಿಳಿದರೆ ಆತ್ಮೀಯರೊಂದಿಗೆ ಅಲ್ಲಿಗೆ ಭೇಟಿಯಿತ್ತು ಅಲ್ಲಿನ ಪಾಕವೈವಿಧ್ಯವನ್ನು ಆಸ್ವಾದಿಸುತ್ತಿದ್ದರೆಂದು ಅವರ ಮಿತ್ರವರ್ಗಕ್ಕೆಲ್ಲ ತಿಳಿದದ್ದೇ. ಕಿರಿಯ ಮಿತ್ರರೊಡನೆ ಬೆಳಗಿನ ವಾಕಿಂಗ್ ಆಗಾಗ ವಿದ್ಯಾರ್ಥಿ ಭವನದಲ್ಲಿ ತಿನ್ನುವ ಮಸಾಲೆ ದೋಸೆ ಎರಡೂ ಅವರಿಗೆ ತುಂಬಾ ಪ್ರಿಯವಾದ ಕಾರ್ಯಕ್ರಮಗಳು.

*(ಜಿವಿಯವರ ಅಭಿನಂದನ ಗ್ರಂಥ – ಶತನಮನ)*

# ಎಲ್ಲರ ಮನೆ ದೋಸೆನೂ..........

**– ಸಿ.ಆರ್.ಸತ್ಯ**

"ರೀ, ಜಯಾ, ಜಯಾ......"

"ಏನ್ರೀ ಸೀತಮ್ಮ, ಬೆಳಗಾಗಿಲ್ಲ , ಆಗಲೇ ಫೋನ್ ಮಾಡ್ತಾ ಇದೀರ? ಅದೂ ಗಾಬರಿಯಿಂದ. ಯಾಕೆ, ಯಜಮಾನ್ರು......"

" ಅವರಿಗೇನಾಗಿದೆ ಜಯಾ, ಕಲ್ಗುಂಡು ಇದ್ದ ಹಾಗೆ ಇದಾರೆ. ನಾನೂ ಅಷ್ಟೆ. ಪ್ರಾಬ್ಲಮ್ಮು ಅವರದಲ್ಲ. ನಂದೇ!"

"ಯಾಕೆ ಸೀತಮ್ಮ , ಏನಾಯ್ತು?"

"ಯಾಕೋ ಕಳೆದ ಸ್ವಲ್ಪ ದಿನಗಳಿಂದ ಅನಾಹುತ ನಡೆದು ಹೋಗ್ತಾಇದೆ. ಹರ ಸಾಹಸ ಪಡ್ತಾ ಇದೀನಿ. ಸರಿ ಹೋಗ್ತಾ ಇಲ್ಲ"

"ಅನಾಹುತವೇ? ಎಲ್ಲಿ?"

"ನಮ್ಮನೆ ಅಡುಗೆ ಮನೇಲೇ ಜಯಾ. ದೋಸೆ ಕಾವಲಿ ಮೇಲೆ."

"ಯಾಕೆ, ಕಾವಲಿ ತಾಕಿಸ್ಕೊಂಡು ಕೈ ಸುಟ್ಟುಕೋತಿದೀರಾ?"

"ಅದಾದರೂ ಆಗಿದ್ರೆ ಏನೋ ಆಯಿಂಟ್ಮೆಂಟ್ ಹಚ್ಚಿಕೊಂಡು ಹುಷಾರಾಗ್ತಾ ಇದ್ದೆ. ಈ ಅನಾಹುತಕ್ಕೆ ಯಾವ ಆಯಿಂಟ್ಮೆಂಟ್  ತರಲಿ?"

"ಸ್ವಲ್ಪ  ವಿವರಿಸಿ ಸೀತಮ್ಮ, ನನಗೆ ಅರ್ಥ ಆಗ್ತಾ ಇಲ್ಲ"

"ಜಯಾ, ನಾನು ನಮ್ಮ ಮನೆ ಕಾವಲಿ ಮೇಲೆ ದೋಸೆ ಹುಯ್ಯೋ ವಿಷಯ ಹೇಳ್ತಿರೋದು. ಕಳೆದು ಮೂರು ನಾಲ್ಕು ತಿಂಗಳಿಂದ ನಾನು ಯಾವಾಗ ದೋಸೆ ಹುಯ್ದ್ರೆ, ನಮ್ಮ ಮನೆ ದೋಸೇಲಿ ತೂತುಗಳೇ ಕಾಣಿಸ್ತಾ ಇಲ್ಲ! ತೂತುಗಳಿಲ್ಲದ ದೋಸೆನ ಎಲ್ಲಾದರೂ ತಿನ್ನೋದು ಉಂಟೆ?. ನಾನೂ 60 ವರುಷಗಳಿಂದ ಅದೆಷ್ಟು ದೋಸೆಗಳನ್ನು ಹುಯ್ದಿದೀನೋ? ಈ ತರಹ ತೂತಿಲ್ಲದ ದೋಸೆಗಳು ನನ್ನ ಕೈಯಿಂದ ಬರಬೇಕೆ? "

"ಅಯ್ಯೊ  ದೇವರೇ! ಏನು ಕಾಲ ಬಂತಮ್ಮ? ಅಲ್ಲಾ, ಸರಿಯಾಗಿ ದೋಸೆ ಹಿಟ್ಟು ನೆನೆ ಹಾಕ್ತೀದಿರಾ?  ಗ್ರೈಂಡರ್ ಸರಿಯಾಗಿದ್ಯೆ? ನಿಮ್ಮ ಕಾವಲಿ ಸರಿಯಾಗಿ ಕಾಯುತ್ಯೆ? ಮೊದಲನೇ ದೋಸೆಗೆ ಕಾವಲಿಗೆ ಎಣ್ಣೆ ಸವರಿಕೊಂಡು ತೆಳ್ಳಗೆ ಬಿಡ್ತೀರಿ ತಾನೆ?"

"ಅಯ್ಯೋ, ಅದೆಲ್ಲಾ ನನಗೆ ಗೊತ್ತಿಲ್ವೇ ಜಯ?. ಏನೇ ಮಾಡಿದರೂ, ತೂತುಗಳೇ ಬರ್ತಿಲ್ಲ"

" ಇದು ತುಂಬಾ ಸೀರಿಯಸ್ ವಿಷಯ ಸೀತಮ್ಮ. ಯಾವ ದೇವರ ಶಾಪವೋ ಏನೋ? ನಿಮ್ಮ ಯಜಮಾನರಿಗೆ ಇದರ ಬಗ್ಗೆ ತಿಳಿಸಿದ್ರಾ?"

"ಅವರೆಲ್ಲಿ ಇದನ್ನೆಲ್ಲಾ ಕಿವಿ ಮೇಲೆ ಹಾಕ್ಕೋತಾರೆ ಜಯಾ? ದೋಸೆ ಚೆನ್ನಾಗಿದೆ, ಇನ್ನೊಂದೆರಡು ಹಾಕು ಅಂತ ಚಪ್ಪರಿಸಿಕೊಂಡು ತಿಂತಾರೆ ಹೊರತು, ತೂತುಗಳ ವಿಷಯ ಅವರ ತಲೆಗೆ ಹೋಗಲ್ಲ."

"ತುಂಬಾ ಅನ್ಯಾಯ ಸೀತಮ್ಮ. ಮನೆ ಕಷ್ಟದಲ್ಲಿ ಗಂಡ ಹೆಂಡತಿ ಇಬ್ಬರೂ ಸಮವಾಗೇ ಹಂಚಿಕೋಬೇಕು. ಅದೂ ನಾಳೆ ನಿಮ್ಮ ಮನೆಗೆ ಯಾರಾದರೂ ಗೆಸ್ಟ್‌ಗಳು ಬಂದರೆ, ತೂತಿಲ್ಲದ ದೋಸೆ ಕೊಡೋದು ಸರಿಯೆ?"

" ಸರಿಯಲ್ಲ, ಸರಿಯಲ್ಲ ಜಯ. ಅದಕ್ಕೆ ನಾನು ಏನು ಮಾಡ್ತೀನಿ ಗೊತ್ತೆ? ದೋಸೆಗಳ ಮೇಲೆ ಕೆಂಪು ಚಟ್ನೀನ ಚೆನ್ನಾಗಿ ಹರಡಿ ಬಿಟ್ಟು ಗೆಸ್ಟ್‌ಗಳಿಗೆ ಕೊಡ್ತೀನಿ. ತೂತುಗಳು ಇದೆಯೋ ಇಲ್ಲವೋ ಅಂತ ಯಾರಿಗೂ ಗೊತ್ತಾಗಬಾರದೂ ಅಂತ. ಆದರೂ ಅ ಚಾಣಾಕ್ಷಿ ಗಿರಿಜ ಮೊನ್ನೆ ನಮ್ಮ ಮನೆಗೆ ಬಂದಿದ್ದಾಗ, ಹೀಗೆ ದೋಸೆ ಕೊಟ್ಟೆ. ಅವಳು ಪದರ ಪದರವಾಗಿ ಮೇಲೆ ಕೆಳಗೆ ನೋಡಿ, ಇದೇನು ಸೀತಮ್ಮ, ತೂತುಗಳೇ ಕಾಣಸ್ತಿಲ್ವೆ? ಅಂತ ಕೇಳೇ ಬಿಟ್ಟಳು. ದೇವರ ದಯದಿಂದ ಅವಳ ಗಂಡ ನನ್ನ ಸಹಾಯಕ್ಕೆ ಬಂದ. ಲೇ ಗಿರಿಜ ನಿನಗೆ ತೂತುಗಳು ಮುಖ್ಯಾನೋ, ದೋಸೇ ಮುಖ್ಯಾನೋ, ಪಾಪ ಬಿಸಿ ಬಿಸಿ ಯಾಗಿ ಮಾಡಿ ಕೊಟ್ಟಿದ್ದಾರಲ್ಲ, ಸುಮ್ಮನೆ ತಿನ್ನು ಅಂತ ಬೈದ್ರು.

ತೆಪ್ಪಗೆ ತಿಂದ್ಲು. ಆದರೂ ಜಯಾ, ಗಂಡಂದಿರ ಸಹಕಾರ ಇಲ್ಲದೆ ಇಂತಹ ಕಷ್ಟಗಳನ್ನು ಅನುಭವಿಸೋದು ತಮಾಷೆಯಂತೂ ಅಲ್ಲ. ನನಗಂತೂ ಈಗ ಏನು ಮಾಡಬೇಕು ಅಂತ ಅರ್ಥವಾಗ್ತಾಇಲ್ಲ"

"ನನಗೂ ನಿಮ್ಮ ತೊಂದರೆಗೆ ಏನೂ ಪರಿಹಾರ ಕಾಣ್ತಾ ಇಲ್ಲ ಸೀತಮ್ಮ. ನೋಡೋಣ. ಇನ್ನು ಸ್ವಲ್ಪ ದಿವಸ ಹುಷಾರಾಗಿ ದೋಸೆ ಬಿಟ್ಟು ನೋಡಿ. ಪಾಪ, ನಮ್ಮ ಕ್ಲಬ್‌ನಲ್ಲಿ ನೀವು ದೋಸೆ ಸೀತಮ್ಮ ಅಂತ ಪ್ರಸಿದ್ಧರಾಗಿದ್ರಿ, ಈಗ ನಿಮ್ಮ ಗತಿ ಹೀಗಾಗಿ ಹೋಯ್ತಲ್ಲಾ ಅಂತ ನನಗೂ ತುಂಬಾ ದು:ಖ ಆಗ್ತಿದೆ. ತುಂಬಾ ಟೆನ್ಶನ್ ಮಾಡ್ಕೋಬೇಡಿ. ದೋಸೆ ಬಿಟ್ಟ ದಿನದಲ್ಲಿ ಒಂದೊಂದು ಪ್ಯಾರಾಸೆಟಮಾಲ್ ತೊಗೊಳ್ಳಿ. ನಾನು ಫೋನ್ ಇಡ್ಲೇ? ಹಾಲು ಕಾಯ್ತಾ ಇದೆ. ಇನ್ಯಾವಾಗಲಾದರೂ ಮಾತನಾಡೋಣ"

***

"ರೀ ಜಯಾ. ಜಯಾ.."

"ಏನು ಸೀತಮ್ಮ, ಸುಮಾರು ದಿನಗಳಾಯ್ತು ನಿಮ್ಮ ಮಾತು ಕೇಳಿ. ಹೇಗಿದ್ದೀರಿ? ನಿಮ್ಮನೇ ದೋಸೆ ಕತೆ ಏನಾಯ್ತು?"

"ಅದನ್ನ ಹೇಳೋದಕ್ಕೆ ಈಗ ನಿಮಗೆ ಫೋನ್ ಮಾಡಿದೆ ಜಯ. ಸ್ವಲ್ಪ ದಿನಗಳ ಹಿಂದೆ ದೊಸೇಲಿ ತೂತು ಕಾಣಿಸ್ದೆ ಇದ್ದಾಗ ನಮ್ಮ ಯಜಮಾನರ ಮೇಲೆ ನನಗೆ ರೇಗಿ ಹೋಯ್ತು. ನನ್ನ ತೊಂದರೆ ಏನು ಅಂತ ಯಾವಾಗಲಾದರೂ ಒಂದು ಸಲವಾದರೂ ವಿಚಾರಿಸಿದೀರಾ?. ಒಂದು ನಿಮಿಷ ಅಡುಗೆ ಮನೆಗೆ ಬನ್ನಿ, ಏನಾಗ್ತಾ ಇದೆ ಅಂತ ನೋಡಿ, ನಿಮ್ಮ ಪೇಪರ್‌ನ ಆಮೇಲೆ ಓದಿ ಅಂತ ಕೂಗಾಡಿದೆ. ಎದ್ದು ಬಂದ್ರು, ತೂತಿಲ್ಲದ ದೋಸೆ ಕಡೆ ಕಣ್ಣು ಹಾಯಿಸಿದ್ರು. ಇದು ಡಾಕ್ಟರ್ ಗೆ ತೋರಿಸೊ ಕೇಸು. ನಡಿ ಹೋಗೋಣ ಅಂತ ನಮ್ಮ ಫ್ಯಾಮಿಲಿ ಡಾಕ್ಟರ್ ಹತ್ರ ಕರ್ಕೊಂಡು ಹೋದ್ರು. ಅವರು ನನ್ನ ಕಥೇನೆಲ್ಲಾ ನಿಧಾನವಾಗಿ ಕೇಳಿದ್ರು. ನನ್ನ ವಯಸ್ಸೆಷ್ಟು ಅಂತ ಕೇಳಿದ್ರು. ಎಪ್ಪತ್ತು ವರುಷಗಳು ಅಂದೆ. 'ನನ್ನ ಶಾಪ್ ಪಕ್ಕದಲ್ಲೇ ಡಾ. ಸಂತೋಷ್ ಅಂತ ಇದಾರೆ. ಅವರಿಗೆ ತೋರಿಸಿ. ಅವರು ನಿಮಗೆ ಪರಿಹಾರ

ಕೊಡ್ತಾರೆ' ಅಂತ  ಅಂದ್ರು.

ಅವರ ಹತ್ತಿರ ಹೋದ್ವಿ. ಒಳ್ಳೆ ಡಾಕ್ಟರ್ ಪಾಪ. ಅವರೂ ನನ್ನ ಕಥೆನೆಲ್ಲಾ ನಿಧಾನವಾಗಿ ಕೇಳಿದ್ರು. ಒಳಗೆ ಬನ್ನಿಮ್ಮ, ನಿಮ್ಮ ಕಣ್ಣುಗಳನ್ನು ನೋಡೋಣ ಅಂದ್ರು.

ಒಳಗೆ ಹೋದೆ. ಕಣ್ಣುಗಳನ್ನ ಎಕ್ಸಾಮಿನ್ ಮಾಡಿ ನನ್ನ ಯಜಮಾನ್ರನ್ನೂ ಒಳಗೆ ಕರೆದ್ರು. " ನೋಡಿ ಸಾರ್. ನಿಮ್ಮ ಹೆಂಡ್ತಿಗೆ ದೋಸೆನಲ್ಲಿ ತೂತುಗಳು ಕಾಣಿಸ್ದೇ ಇರೋದು ದೋಸೆ ಹಿಟ್ಟಿನ ಪ್ರಾಬ್ಲಮ್ಮೂ ಅಲ್ಲ, ಕಾವಲೀ ಪ್ರಾಬ್ಲಮ್ಮೂ ಅಲ್ಲ. ಅವರ ಎರಡು ಕಣ್ಣುಗಳಲ್ಲೂ ಪೊರೆ ಹಬ್ಬಿಕೊಂಡಿದೆ. ಅದಕ್ಕೇ ಅವರಿಗೆ ತೂತುಗಳು ಕಾಣಿಸ್ತಾ ಇಲ್ಲ. ಕ್ಯಾಟರಾಕ್ಟ್ ಆಪರೇಷನ್ ಈಗಲೇ ಮಾಡಿ ಬಿಡೋದು ವಾಸಿ. ಇಲ್ಲದಿದ್ದರೆ ಇನ್ನು ಸ್ವಲ್ಪ ದಿನಗಳಲ್ಲಿ ಚಕ್ಕಲಿ ಕೋಡುಬಳೆಗಳಲ್ಲೂ ತೂತು ಕಾಣಿಸ್ತಿಲ್ಲಾ ಅಂತ ನಿಮ್ಮ ಮುಂದೆ ಕೂಗಾಡ್ತಾರೆ. ಇದರಲ್ಲಿ ನಿಮ್ಮ ತಪ್ಪೂ ಏನಿಲ್ಲ" ಅಂತ ಹೇಳಿದ್ರು. ಹಾಗೇ ಮಾಡಿದ್ವಿ ಜಯ. ಆಪರೇಶನ್ ಆಯ್ತು. ಒಳ್ಳೇ ಕನ್ನಡಕಾನೂ ಕೊಟ್ರು.

ಅದನ್ನ ಹಾಕಿಕೊಂಡು, ಇವತ್ತು ಬೆಳಿಗ್ಗೆ ದೋಸೆ ಬಿಟ್ಟೆ ನೋಡಿ, ಆಹಾ! ಎಷ್ಟೊಂದು ತೂತುಗಳು ಕಾಣಿಸ್ತೂ ಅಂತೀರಿ! ಅದೂ ಕೆಂಪು ಚಟ್ನಿ ಸವರದೇನೇ!. ನೀವು ಹೇಳಿದ್ರಿ ಅಂತ ಅನಾವಶ್ಯಕವಾಗಿ ಒಂದು ಹೊರೆ ಪ್ಯಾರಾಸೆಟಮಾಲ್ ಮಾತ್ರೆಗಳನ್ನು ಬೇರೆ ನುಂಗಿದ್ದೆ. ಈಗ ಯಾವ ಟೆನ್ಶನ್ನೂ ಇಲ್ಲ ಜಯ."

"ತುಂಬಾ ಸಂತೋಷ ಸೀತಮ್ಮ. ಸಧ್ಯ ದೊಡ್ಡ ಗಂಡಾಂತರದಿಂದ ತಪ್ಪಿಸಿಕೊಂಡ್ರಲ್ಲ. ಇನ್ನು ಮೇಲಿಂದ ಸ್ವಲ್ಪ ಯೋಚನೆ ಮಾಡಿ ನಿಮ್ಮ ಯಜಮಾನರ ಮೇಲೆ ಸಿಟ್ಟು ಮಾಡಿಕೊಳ್ಳಿ. ಪಾಪ."

"ಹೌದು ಕಣ್ರಿ. ಅಂದ ಹಾಗೆ ಇವತ್ತು ಮಧ್ಯಾನ್ಹ ಮನೆಗೆ ಬನ್ನಿ ಜಯ. ಎರಡು ದೋಸೆ ಬಿಟ್ಕೊಡ್ತೀನಿ. ಕಾಫಿನೂ ಕುಡ್ಕೊಂಡು ಹೋಗುವಿರಂತೆ. ಇಲ್ಲಮ್ಮ. ಖಂಡಿತ ಕೆಂಪು ಚಟ್ನಿ ಸವರಲ್ಲ. ಅದೇನಿದ್ರೂ ಮಸಾಲೆ ದೋಸೆ ಮಾಡಿದಾಗಲೇ! ನಾನು ಇಡ್ಲಾ?"

■




**ಶ್ರೀ ರಾಮ *14* ವರ್ಷ ವನವಾಸ ಮಾಡಿರು ವಾಗೆ.. ನೀವು ಬರೀ *14* ದಿನ ಮನೆವಾಸ ಮಾಡೋದಕ್ಕೆ ಆಗಲ್ವ್ ಕಣ್ರೀ....**

# ಬಾಲಿ ದಶಾನನ ಪ್ರಸಂಗ

**– ವತ್ಸನ**

ಹಿಂದೊಮ್ಮೆ ನಾನು ಶರಲೇಖನೊಡನೆ ಸಿಂಗಪುರಕ್ಕೆ ಹೋಗಿದ್ದೆ. ಅಲ್ಲಿನ ಪೋಲೀಸ್ ಅಧಿಕಾರಿ ಝೀಕ್ವಾನ್‌ನ ಕೋರಿಕೆಯ ಮೇರೆಗೆ ಅಲ್ಲಿಗೆ ಹೋಗಿದ್ದು, ಸಮಸ್ಯೆಯನ್ನು ಪರಿಹರಿಸಿ ಊರಿಗೆ ಹಿಂತಿರುಗಿದ ನಂತರವೂ ಝೀಕ್ವಾನ್ ಶರಲೇಖನೊಂದಿಗೆ ಸಂಪರ್ಕದಲ್ಲಿದ್ದ. ಅವರ ನಡುವೆ ಅನೇಕ ಕ್ಲಿಷ್ಟ ಸಂಗತಿಗಳ ಬಗ್ಗೆ ವಿಚಾರ ವಿನಿಮಯ ನಡೆಯುತ್ತಿತ್ತು. ಇದಾದ ನಂತರ ಒಮ್ಮೆ ಝೀಕ್ವಾನ್ ಶರಲೇಖನಿಗೆ ಫೋನ್ ಮಾಡಿ," ಇಂಡೋನೇಷ್ಯಾದ ಬಾಲಿಯಲ್ಲಿನ ಪೋಲೀಸರಿಗೆ ನಿನ್ನ ಸಹಾಯ ಬೇಕಾಗಿದೆಯಂತೆ. ನೀನು ಬರಲು ಒಪ್ಪಿದರೆ ಮಿಕ್ಕೆಲ್ಲ ಸಂಗತಿಗಳನ್ನೂ ನಾನು ಅವರೊಂದಿಗೆ ವ್ಯವಸ್ಥೆ ಮಾಡುವೆ" ಅಂತ ಹೇಳಿ ಶರಲೇಖನ ಸಮ್ಮತಿಯನ್ನು ಗಳಿಸಿದ್ದ.

ಆ ಬೆಳಗ್ಗೆ ನಾವು ಬೆಂಗಳೂರಿನಿಂದ ಹೊರಟು ಬಾಲಿಯ ಡೆನ್‌ಪಸ್ಸಾರ್ ವಿಮಾನ ನಿಲ್ದಾಣ ಸೇರಿದಾಗ ಬೆಳಗ್ಗೆ ಹನ್ನೊಂದಾಗಿತ್ತು. ಸ್ವಾಗತ ಹಜಾರದಲ್ಲಿ ಒಬ್ಬ ಯುವತಿ ಮುಂದೆ ಬಂದು," ನನ್ನ ಹೆಸರು ದೇವಿ. ಪೋಲೀಸ್ ಕಮಿಷನರ್ ಆಫೀಸಿನಿಂದ ಬಂದಿರುವೆ. ನಿಮ್ಮನ್ನು ನಮ್ಮ ಅತಿಥಿಗೃಹಕ್ಕೆ ಕರೆದೊಯ್ಯಲು ನಮ್ಮ ಬಾಸ್ ನನ್ನನ್ನು ಕಳಿಸಿದ್ದಾರೆ. ದಯವಿಟ್ಟು ಬನ್ನಿ " ಎಂದು ಬಹು ವಿನಯದಿಂದ ಸ್ವಾಗತಿಸಿ ನಮ್ಮ ಪಾಸ್‌ಪೋರ್ಟುಗಳನ್ನು ತೆಗೆದು ಕೊಂಡು ಪುಟಪುಟನೆ ಮುಂದೆ ನಡೆದಳು. ಎಷ್ಟು ಚುರುಕು ಅಂತೀರಿ ಆ ತರುಣಿ. ಇಮ್ಮಿಗ್ರೇಷನ್, ಬ್ಯಾಗೇಜ್ ಎಲ್ಲಾ ಮುಗಿಸಿ ಕೇವಲ ಹತ್ತು ನಿಮಿಷಗಳಲ್ಲಿ ಸ್ಕೋಡಾ ಕಾರಿನಲ್ಲಿ ನಾವೆಲ್ಲರೂ ಕುಳಿತು ಸೆಮನ್ಯಾಕ್ ದಾರಿ ಹಿಡಿದಿದ್ದೆವು. ದಾರಿಯುದ್ದಕ್ಕೂ ಹರಡಿದ್ದ ಮರಗಿಡಗಳು , ಹೆಂಚಿನ ಮನೆ ಗಳು ಇವೆಲ್ಲಾ ಕೇರಳದ ದೃಶ್ಯಗಳನ್ನೇ ನೆನಪಿಸುತ್ತಿದ್ದವು. ಹಾದಿ ಪಕ್ಕದ ಯಾವ ಮನೆಯನ್ನು ನೋಡಿದರೂ ಅದರ ಮುಂದೆ ಒಂದು ಪುಟ್ಟ ತುಳಸಿ ಕಟ್ಟೆ ಕಂಗೊಳಿಸುತ್ತಿತ್ತು. ಊರಿನ ಮಧ್ಯೆ ಇದ್ದ ಮಾರ್ಕೆಟ್ ಚೌಕದಲ್ಲಿ ಪ್ರತಿಷ್ಠಾಪನೆಯಾಗಿದ್ದ ಧನುರ್ಧಾರಿ ಶ್ರೀರಾಮ ಚಂದ್ರನ ಪ್ರತಿಮೆ, ಸುತ್ತ ಚಲಿಸುತ್ತಿದ್ದ ವಾಹನ ಚಾಲಕರನ್ನು ಅಪ್ರತಿಮ ಕರುಣೆಯಿಂದ ಅವಲೋಕಿಸುತ್ತಿದ್ದಂತೆ ಕಂಡಿತ್ತು.

ದೇವಿ ನಮ್ಮನ್ನು ಅತಿಥಿಗೃಹದಲ್ಲಿ ಇಳಿಸಿ, " ಅರ್ಧ ಘಂಟೆಯಲ್ಲಿ ನಾನು ಪುನಃ ಬಂದು ನಿಮ್ಮನ್ನು ಆಫೀಸಿಗೆ ಕರೆದೊಯ್ಯುವೆ" ಅಂತ ಹೇಳಿ ಹೊರಟು ಹೋದಳು. ಆ ಅತಿಥಿಗೃಹದ ಹೆಸರು ಉಲಿನ್ ವಿಲ್ಲಾಸ್. ಒಂದು ವಿಶಾಲವಾದ ಆವರಣದಲ್ಲಿ ಮೂರು ಬೇರೆ ಬೇರೆ ಕಾಟೇಜು ಗಳಿದ್ದವು. ಮೊದಲನೆಯದರಲ್ಲಿ ನಮ್ಮ ವಾಸ್ತವ್ಯ. ಕಾಟೇಜುಗಳ ಮಧ್ಯೆ ಒಂದು ಬೃಹತ್ ಈಜುಕೊಳ. ಅಲ್ಲಿನ ಪರಿಸರ ಯಾವ ಪಂಚತಾರಾ ರಿಸಾರ್ಟಿನ ವೈಭವವನ್ನೂ ಮೀರಿಸುವಂತಿತ್ತು. ನಾವು ಕೈಕಾಲು ತೊಳೆದು ಒಂದು ಕಪ್ ಟೀ ಕುಡಿಯುವಷ್ಟರಲ್ಲಿ ದೇವಿ ಬಂದು ನಮ್ಮನ್ನು ಕಮಿಷನರ್ ಆಫೀಸಿಗೆ ಕರೆದೊಯ್ದಳು. ಟ್ರಿಮ್ಮಾಗಿ ಪೋಲೀಸ್ ಯೂನಿಫಾರಮ್ ಧರಿಸಿದ್ದ ನಗುಮುಖದ ತರುಣನೊಬ್ಬ ನಮ್ಮಿಬ್ಬರನ್ನು ಬಹು ಆತ್ಮೀಯತೆಯಿಂದ ಬಾಗಿಲಲ್ಲೇ ಸ್ವಾಗತಿಸಿ ಅವನ ಆಫೀಸಿಗೆ ಬರಮಾಡಿಕೊಂಡು ನೇರವಾಗಿ ವಿಷಯಕ್ಕೆ ಬಂದ.

"ನನ್ನ ಹೆಸರು ಕೆಟುಟ್ ಬೂದಿಸಾಲಿ. ನೀವು ನನ್ನನ್ನು ಬೂದಿ ಅಂತ ಕರೆಯಬಹುದು. ನಾನು ಈ ಪ್ರಾಂತ್ಯದ ಪೋಲೀಸ್ ಕಮಿಷನರ್. ನನ್ನ ಮನವಿಯ ಮೇರೆಗೆ ನೀವುಗಳು ಇಷ್ಟು ದೂರ ಬಂದಿರುವುದಕ್ಕೆ ನಾನು ನಿಮಗೆ ಆಭಾರಿ. ನಮ್ಮ ಈ ಊರಿನಲ್ಲಿ ಒಂದು ಖ್ಯಾತ ಮ್ಯೂಸಿಯಮ್ ಇದೆ. ಸತಿಯ ಧರ್ಮ ಎಂಬ ಹೆಸರಿನ ಈ ಮ್ಯೂಸಿಯಮ್ಮಿನಲ್ಲಿ ಬಹು ಪ್ರಾಚೀನ ಕಲಾಕೃತಿಗಳ ಸಂಗ್ರಹಣೆ ಇದೆ. ಕಳೆದ ಹಲವು ದಿನಗಳ ಹಿಂದೆ ಅಲ್ಲಿಂದ ಒಂದು ಅಮೂಲ್ಯ ಕಲಾಕೃತಿ ಕಾಣೆಯಾಗಿದೆ. ಅದನ್ನು ಕಳವು ಮಾಡಿರುವವರು ಯಾರು ಎಂಬುದರ ಬಗ್ಗೆ ನಮಗೆ ಬಲವಾದ ಸಂದೇಹ ಇದ್ದರೂ ದಸ್ತಗಿರಿ ಮಾಡಲು ಅಗತ್ಯವಾದ ಪುರಾವೆಗಳಿಲ್ಲ. ಆ ಪುರಾವೆಗಳನ್ನು ಸಂಪಾದಿಸಿ ಕದ್ದವನನ್ನು ಮಾಲು ಸಮೇತ ಹಿಡಿಯಲು ನನಗೆ ನಿಮ್ಮ ಸಹಕಾರ ಅಗತ್ಯ. ಅದಕ್ಕೂ ಮೊದಲು ನೀವು ಆ ಮ್ಯೂಸಿಯಮ್ಮನ್ನು ನೋಡಬೇಕು. ಈಗ ಹೇಗೂ ಊಟದ ಸಮಯ. ಊಟ ಮುಗಿಸಿಯೇ ಮ್ಯೂಸಿಯಮ್ಮಿಗೆ ಹೋಗೋಣ. ದಾರಿಯಲ್ಲಿ ಎಲ್ಲ ವಿವರಗಳನ್ನೂ ವಿಷದೀಕರಿಸುವೆ.  ಅಂದಹಾಗೆ ನೀವಿಬ್ಬರೂ ಸಸ್ಯಾಹಾರಿಗಳು ತಾನೆ?" ಎಂದು ಹೇಳಿ ಬೂದಿ ಮೇಜಿನಿಂದ ಎದ್ದ. ನಾವೆಲ್ಲರೂ ಹತ್ತಿರದಲ್ಲೇ ಇದ್ದ ಉಪಹಾರಗೃಹಕ್ಕೆ ನಡೆದೇ ಹೋದೆವು. ನನಗಂತೂ ಊಟದ ಮೇಲೆ ಗಮನವೇ ಇರಲಿಲ್ಲ. ಇಂತಹ ಅಂತರರಾಷ್ಟ್ರೀಯ ಅಪರಾಧ ಪತ್ತೆ ಹಚ್ಚುವ ಸಂಗತಿಯನ್ನು ಈತ ಹಾದಿ ಬೀದಿಗಳಲ್ಲಿ ಮಾತನಾಡುತ್ತಿದ್ದಾನಲ್ಲಾ ಅಂತ ನನಗೆ ಆಶ್ಚರ್ಯ. ಶರಲೇಖ ಯಾವ ಭಾವನೆಯನ್ನೂ ವ್ಯಕ್ತಪಡಿಸದೇ ಮೌನವಾಗಿದ್ದ. ಅಂತೂ ಊಟಮಾಡುವಾಗ ಮತ್ತು ಮ್ಯೂಸಿಯಮ್ಮಿಗೆ ಪಯಣಿಸುವಾಗ ಕೆಟುಟ್‌ನಿಂದ ನಮಗೆ ದೊರಕಿದ ಮಾಹಿತಿ ಇಷ್ಟು.

ಸತಿಯ ದರ್ಮ(ಸತ್ಯ ಧರ್ಮ ಎಂಬುದರ ಅಪಭ್ರಂಶ) ಎಂಬ ಒಬ್ಬ ಜಾವಾ ಮೂಲದವ ಪ್ರಾಚೀನ ಕಲೆಗಳನ್ನು ರಕ್ಷಿಸುವ ಉದ್ದೇಶದಿಂದ ಸ್ಥಾಪಿಸಿದ ಮ್ಯೂಸಿಯಮ್ ಇದು. ಇದರಲ್ಲಿ ನಮ್ಮಲ್ಲಿ ಯಕ್ಷಗಾನಕ್ಕೆ ಬಳಸುವ ಮುಖವಾಡಗಳಂತಿರುವ ಅನೇಕ ವೈವಿಧ್ಯಮಯ ಮುಖವಾಡಗಳನ್ನ, ತೊಗಲು ಬೊಂಬೆ ಹಾಗೂ ಸೂತ್ರದ ಗೊಂಬೆಗಳನ್ನ ಬಹು ಮುತುವರ್ಜಿಯಿಂದ ಜೋಪಾನ ಮಾಡಿದ್ದಾರೆ. ರಾಮಾಯಣ ಈ ಪ್ರದೇಶದ ಅತಿ ಪ್ರಚಲಿತ ಕಾವ್ಯವಾಗಿರುವುದರಿಂದ ರಾಮಾಯಣದ ಪಾತ್ರಗಳೆಲ್ಲಾ ಈ ಮ್ಯೂಸಿಯಮ್ಮಿನಲ್ಲಿ ಜಾಗ ಪಡೆದಿವೆ. ವಾಲಿ, ಸುಗ್ರೀವ ಜಟಾಯು ಇವರೆಲ್ಲಾ ಇಲ್ಲಿ ಜೀವಂತರಾಗಿರುವಂತೆ ಭಾಸವಾಗುತ್ತದೆ.  ರಾವಣನ ಮುಖವಾಡ, ವಿಗ್ರಹ ಇವುಗಳಿಗಂತೂ ಲೆಕ್ಕವೇ ಇಲ್ಲ. ರಾವಣನ ತಂದೆ ತಾತಂದಿರ ಬೊಂಬೆಗಳನ್ನೂ ಇಲ್ಲಿ ನೋಡಬಹುದು. ಈ ಮ್ಯೂಸಿಯಮ್ಮಿನಲ್ಲಿದ್ದ ಹತ್ತು ತಲೆಗಳ ರಾವಣನ ವಿಗ್ರಹವೇ ಈಗ ಕಾಣೆಯಾಗಿರುವ ವಿಗ್ರಹ. ಇದನ್ನು ಕಾಂಬೋಡಿಯಾದಲ್ಲಿ ಮುನ್ನೂರು ವರ್ಷಗಳ ಹಿಂದೆ ತಯಾರಿಸಿದ್ದಂತೆ. ಇಂತಹ ಕಲಾಕೃತಿ ಕಾಣೆಯಾಗುವುದು ಸಾಮಾನ್ಯ ವಿಷಯವೇ.

ಕೆಟುಟ್ ಪ್ರಕಾರ ಇದನ್ನು ಅಪಹರಿಸಿದವ ಶ್ರೀಲಂಕಾದ ಪ್ರಜೆ. ಹೆಸರು ರಣತುಂಗ. ಇವನು ಬಾಲಿಗೆ ಹೊಸಬನೇನೂ ಅಲ್ಲ.

ಆ್ಯಂಟೀಕ್  ವಸ್ತುಗಳ ಮಾರಾಟಗಾರನಾದ ಈತ, ತನ್ನ ವೃತ್ತಿಯ ಕಾರಣದಿಂದ ಅನೇಕ ಬಾರಿ ಬಾಲಿಗೆ ಬಂದು ಹೋದರೂ ಇಲ್ಲಿನವರೆಗೂ ಯಾವ ಅಪರಾಧದಲ್ಲೂ ಸಿಕ್ಕಿಬಿದ್ದಿಲ್ಲ. ಕೆಟುಟ್‌ಗೆ ಇವನ ಮೇಲೇ ಗುಮಾನಿ. ಇವನನ್ನು ಮಾಲು ಸಮೇತ ಹಿಡಿಯಲು ಕೆಟುಟ್ ತಾನು ಮಾಡಿದ ಹಂಚಿಕೆಯನ್ನು ನಮಗೆ ವಿವರಿಸಿದ. ರಣತುಂಗ

ತನ್ನ ಆ್ಯಂಟೀಕ್‌ಗಳ ಬಹುಪಾಲು ಮಾರಾಟವನ್ನು ಭಾರತದಲ್ಲೇ ಮಾಡುತ್ತಾನಂತೆ. ಅವನಿಗೆ ಬಾಲಿಯಲ್ಲೇ ಭಾರತದ ಗಿರಾಕಿಗಳು ಯಾರಾದರೂ ಸಿಕ್ಕಿದರೆ, ರಣತುಂಗ ಅವರಿಗೆ ಆ ವಿಗ್ರಹವನ್ನು ಮಾರಲು ಯತ್ನಿಸಿದರೆ ಆಗ ಅವನನ್ನು ಮಾಲು ಸಮೇತ ಹಿಡಿಯಬಹುದು. ಈ ಕಾರಣದಿಂದಲೇ ಕೆಟುಟ್ ನಮ್ಮ ವಾಸ್ತವ್ಯವನ್ನು ರಣತುಂಗನಿದ್ದ ಉಲಿನ್ ವಿಲ್ಲಾಸ್ ನಲ್ಲೇ ಏರ್ಪಡಿಸಿದ್ದು. ನಮ್ಮ ವಿಲ್ಲಾ ಮ್ಯಾನೇಜರ್ ಅಲೆಡ್ ನ ಸಹಕಾರ ಪಡೆದು, ರಣತುಂಗನಿಗೆ ನಮ್ಮನ್ನು ಬೆಂಗಳೂರಿನಿಂದ ಬಂದ ಆ್ಯಂಟೀಕ್ ಬೇಟೆಗಾರರೆಂದು ನಂಬಿಸಿದರೆ ಆತ ನಮಗೆ ಆ ವಿಗ್ರಹವನ್ನು ಮಾರಲು ಯತ್ನಿಸಿದಾಗ ಅವನನ್ನು ಹಿಡಿಯಬಹುದು ಅಂತ ಕೆಟುಟ್‌ನ ಸ್ಥೂಲ ಅಂದಾಜು.

ಕೆಟುಟ್ ನಮಗೆ ಇಷ್ಟೆಲ್ಲಾ ತಿಳಿಸುವ ಹೊತ್ತಿಗೆ ಮ್ಯೂಸಿಯಮ್ ತಲುಪಿದ್ದೆವು. ಮ್ಯೂಸಿಯಮ್ಮಿನಲ್ಲಿ ಪ್ರದರ್ಶನಕ್ಕಿಟ್ಟಿದ್ದ ವಸ್ತುವಿಶೇಷಗಳು ನಮ್ಮನ್ನು ರಾಮಾಯಣದ ಕಾಲಕ್ಕೇ ಕರೆದೊಯ್ದವು ಅನ್ನಬಹುದು. ಶರಲೇಖ ಎಲ್ಲ ವಸ್ತುಗಳನ್ನು ಬಹು ಕೂಲಂಕುಶವಾಗಿ ಪರಿಶೀಲಿಸುತ್ತಿರುವಾಗ ಅಲ್ಲಿನ ಕ್ಯುರೇಟರ್, ಕಾಣೆಯಾಗಿದ್ದ ರಾವಣನ ವಿಗ್ರಹದ ಫೋಟೋವೊಂದನ್ನು ತಂದು ನಮ್ಮ ಮುಂದಿಟ್ಟ. ಬಲಕ್ಕೆ ನಾಲ್ಕು ತಲೆ, ಎಡಕ್ಕೆ ಐದು ತಲೆ ಇದ್ದ ದಶಾನನನ ವಿಗ್ರಹದ ಫೋಟೋ ಅದು. ಶರಲೇಖ ಜೇಬಿನಿಂದ ಮ್ಯಾಗ್ನಿಫಯಿಂಗ್ ಗ್ಲಾಸ್ ತೆಗೆದು ಫೋಟೋವನ್ನು ಅತಿವಿವರವಾಗಿ ಅಧ್ಯಯನ ಮಾಡಿದ. ಆಮೇಲೆ ಕೆಟುಟ್‌ನನ್ನು ಕುರಿತು, "ಬಲಗಡೆಯ ಕೊನೆಯ ತಲೆಯ ಬಲಗಿವಿ ಮಿಕ್ಕ ಕಿವಿಗಳಿಗಿಂತ ದೊಡ್ಡದಾಗಿದೆ. ಎಡಗಿವಿ ಊನವಾಗಿದೆ. " ಎಂದು ಹೇಳಿದ. ಕೆಟುಟ್," ವಾಹ್ ನಿಮ್ಮ ಕಣ್ಣು ನಿಜಕ್ಕೂ ಸೂಕ್ಷ್ಮ. ಅದೇ ಈ ಬೊಂಬೆಯ ವೈಶಿಷ್ಟ್ಯ . ರಾವಣನ ನಾಲ್ಕನೆಯ ತಲೆ ತನ್ನ ಪ್ರಜೆಗಳ ಕುಂದುಕೊರತೆಗಳನ್ನು ಕೇಳಿಸಿಕೊಳ್ಳುವುದಕ್ಕೆ ಮೀಸಲಾಗಿತ್ತು. ಅದಕ್ಕೇ ಬಲಗಿವಿ ದೊಡ್ಡದು. ಕೇಳಿಸಿಕೊಂಡಿದ್ದು ಇನ್ನೊಂದು ಕಿವಿಯಿಂದ ಹೊರಗೆ ಹೋಗದೇ ತಲೆಯಲ್ಲೇ ನಿಲ್ಲಲೆಂದು ಎಡಗಿವಿ ಇಲ್ಲವಾಗಿದೆ. ಇದನ್ನೆಲ್ಲಾ ಬಹು ವಿವರವಾಗಿ ತಾಳೆಗರಿಗಳಲ್ಲಿ ಬರೆದಿಟ್ಟಿದ್ದಾರೆ. " ಅಂತ ಕೆಟುಟ್ ವಿವರಣೆ ನೀಡಿದ. ಮ್ಯೂಸಿಯಮ್ ಭೇಟಿ ಮುಗಿಸಿ ಹಿಂತಿರುಗುವಾಗ. ಕೆಟುಟ್ ಮತ್ತು ಶರಲೇಖ ತಮ್ಮ ಹಂಚಿಕೆಯ ವಿವರಗಳನ್ನು ಭದ್ರಪಡಿಸಲು ಪುನಃ ಆಫೀಸಿಗೆ ಹೊರಟರು. ಬಾಲಿಯನ್ನು ನೋಡಲು ದೇವಿ ನನ್ನನ್ನು ಆಹ್ವಾನಿಸಿದ್ದರಿಂದ ನಾನು ಅವಳೊಡನೆ ಹೊರಟೆ.

ಸುಮಾರು ಒಂದು ಘಂಟೆಯ ಪಯಣದ ನಂತರ ನಾವು ಪಶ್ಚಿಮ ಬಾಲಿಯಲ್ಲಿರುವ ಥಾನಾ ಲಾಟ್ ದೇವಸ್ಥಾನವನ್ನು ಸೇರಿದೆವು. ಒಂಭತ್ತನೆಯ ಶತಮಾನದ ಈ ದೇವಸ್ಥಾನ ವರುಣ ದೇವನ ಅರ್ಚನೆಗೆ ಮೀಸಲು. ಅಂದಹಾಗೆ ಇಲ್ಲಿನ ದೇವರುಗಳೆಲ್ಲಾ ಇಂದ್ರ, ವರುಣ, ಅಗ್ನಿ, ಬ್ರಹ್ಮ ಅಂತ ಇದ್ದದ್ದನ್ನು ನೋಡಿ ಇಲ್ಲಿನ ಹಿಂದೂ ಸಂಸ್ಕೃತಿಯ ಮೇಲೆ ವೇದಪೂರ್ವದ ಪ್ರಭಾವ ಸಾಕಷ್ಟಿರಬಹುದು ಅನ್ನಿಸಿತು. ಈ ದೇವಸ್ಥಾನ ಸಮುದ್ರತೀರದ ಗುಡ್ಡವೊಂದರ ಮೇಲೆ ಇರುವುದರಿಂದ ಅಲೆಗಳು ಉಬ್ಬರದಲ್ಲಿದ್ದಾಗ ಈ ಗುಡ್ಡ ತೀರದಿಂದ ಬೇರೆಯಾಗಿ ಒಂದು ದ್ವೀಪದಂತೆ ಕಾಣುತ್ತದೆ. ದೇವಸ್ಥಾನದ ಮುಂದಿದ್ದ ಹುಂಡಿಯ ಮೇಲೆ "ಧನ ಪುಣಿಯಾ" (ಪುಣ್ಯ ಧನ?) ಅಂತ ಇತ್ತು.

ಆ ಸಂಜೆ ವಿಲ್ಲಾಗೆ ಹಿಂತಿರುಗಿದಾಗ ವಿಲ್ಲಾದ ಮುಖ್ಯದ್ವಾರದ ಮುಂದೆ ಒಂದು ಕಾಗದದ ತಟ್ಟೆಯ ಮೇಲೆ ಒಂದಷ್ಟು ಹೂವು, ಒಂದು ಊದುಕಡ್ಡಿ, ಒಂದು ಚಾಕಲೇಟು ಮತ್ತು ಒಂದು ಸಿಗರೇಟ್ ಇಟ್ಟಿದ್ದನ್ನು ಗಮನಿಸಿದೆ. ದೇವಿಗೆ

ಇದನ್ನು ತೋರಿಸಿ ಪ್ರಶ್ನಾರ್ಥಕವಾಗಿ ಹುಬ್ಬೇರಿಸಿದೆ. "ಇದು, ಚನ್ನಾ. ನಮ್ಮ ಸುತ್ತ ಒಳ್ಳೆಯ ದೇವತೆಗಳು ಹಾಗೂ ಕೆಟ್ಟ ಭೂತಗಳು ಸದಾ ಹೊಂಚು ಹಾಕುತ್ತಿರುತ್ತವೆ. ಈ ಚನ್ನಾದಲ್ಲಿರುವ ಸಿಗರೇಟು ಮತ್ತು ಚಾಕಲೇಟುಗಳಿಂದ ಕೆಟ್ಟಭೂತಗಳು ತೃಪ್ತರಾದರೆ, ಹೂವು ಊದುಬತ್ತಿಗಳು ಒಳ್ಳೆಯ ದೇವತೆಗಳಿಗೆ ಕಾಣಿಕೆಯಾಗುತ್ತವೆ. ಆಗ ಅವು ನಮಗೆ ಹಾನಿ ಮಾಡವು" ಅಂತ ದೇವಿ ವಿವರಿಸಿದಳು. "ಒಳ್ಳೆಯ ದೇವತೆಗಳಿಗೆ ಕಾಣಿಕೆ ಯಾಕೆ? ಅವು ಹೇಗಿದ್ದರೂ ಒಳ್ಳೆಯದನ್ನೇ ಮಾಡುಲ್ಲವೇ?" ನನ್ನ ಪ್ರಶ್ನೆ. ಅವಳು ನಕ್ಕು, " ಅದು ಹಾಗಲ್ಲ. ಕೆಟ್ಟ ಭೂತಗಳಿಗೆ ಕೊಟ್ಟು ಒಳ್ಳೆಯವಕ್ಕೆ ಏನೂ ಕೊಡದಿದ್ದರೆ ಅವು ಹೊಟ್ಟೆಕಿಚ್ಚಿನಿಂದ ಏನೂ ಹಾನಿ ಮಾಡುಲ್ಲ ಅಂತ ಯಾವ ನಂಬಿಕೆ " ಅಂತ ಉತ್ತರಿಸಿ ನನಗೆ ವಿದಾಯ ಹೇಳಿದಳು.

ನಮ್ಮ ಕಾಟೇಜನ್ನು ಪ್ರವೇಶಿಸಿದೆ. ಶರಲೇಖ ಆಗಲೇ ಬಂದು ಒಂದು ಚೀಟಿಯಲ್ಲಿ ಏನೋ ಗುರುತು ಹಾಕಿಕೊಳ್ಳುತ್ತಿದ್ದ. ನನ್ನನ್ನು ನೋಡಿ, " ಸರಿಯಾದ ಸಮಯಕ್ಕೆ ಬಂದೆ. ರಣತುಂಗನನ್ನು ಹಿಡಿಯಲು ನಮ್ಮ ಪ್ಲಾನ್ ಸಜ್ಜಾಗಿದೆ. ವಿಲ್ಲಾದ ಮ್ಯಾನೇಜರ್, ರಣತುಂಗನಿಗೆ ನಾವು ಭಾರತದಿಂದ ಬಂದಿರುವ ಭಾರಿ ವ್ಯಾಪಾರಿಗಳೆಂದು ತಿಳಿಸಿ, ಇನ್ನು ಸ್ವಲ್ಪ ಹೊತ್ತಿನಲ್ಲೇ ಅವನನ್ನು ಇಲ್ಲಿಗೆ ಕರೆತರುತ್ತಾನೆ. ಅವನು ಬರುಕ್ಕೆ ಮುಂಚೆ ಬಾಲಿಯಲ್ಲಿ ಸಿಗುವ ಆ್ಯಂಟೀಕ್‌ಗಳ ಬಗ್ಗೆ ತಿಳಿಸುವ ಪುಸ್ತಕವೊಂದನ್ನು ಕೆಟುಟ್ ನನಗೆ ಕೊಟ್ಟಿದ್ದಾನೆ. ನಾವು ಆ್ಯಂಟೀಕ್ ವ್ಯಾಪಾರಿಗಳೆಂದು ರಣತುಂಗ ನಂಬಿದರೆ ಅರ್ಧಕೆಲಸ ಮುಗಿದಂತೆಯೇ. " ಅಂದ ಶರಲೇಖ. ನಾನು ಒಳಕ್ಕೆ ಹೋದೆ. ಏನು ಗ್ರಹಚಾರ ಕಾದಿದೆಯೋ ಎಂಬ ಅಳುಕು ಒಳಮನಸ್ಸಿನಲ್ಲಿ ಕುಟುಕುತ್ತಲೇ ಇತ್ತು.

ಎಂಟು ಘಂಟೆಗೆ ವಿಲ್ಲಾ ಮ್ಯಾನೇಜರ್ ಅಲೆಡ್ ನಮ್ಮ ಕಾಟೇಜಿಗೆ ಬಂದ. ಅವನ ಜೊತೆಯಲ್ಲಿ ಒಬ್ಬ ಸಂಭಾವಿತನಂತಿದ್ದ ವ್ಯಕ್ತಿ. ಬಂದ ವ್ಯಕ್ತಿಯ ಗಾಂಭೀರ್ಯ ಗತ್ತು ನೋಡಿದರೆ ಯಾವುದೋ ಮಂತ್ರೀನೋ ಸೀಇಓನೋ ಇರಬೇಕು ಅನ್ನಿಸಿತು. ಮ್ಯಾನೇಜರ್ , ತನ್ನ ಸಂಗಡಿಗನನ್ನು "ಇವರು ರಣತುಂಗ" ಅಂತ ನಮಗೆ ಪರಿಚಯಿಸಿದ. ಲಘು ಸಂಭಾಷಣೆ ಸ್ವಲ್ಪ ಕಾಲ ನಡೆದ ನಂತರ ಶರಲೇಖ, " ರಣತುಂಗ ಅವರೇ, ನಿಮ್ಮ ಪರಿಚಯ ಆದದ್ದು ನನ್ನ ಸೌಭಾಗ್ಯ. ಮುಂಬೈನ ಸಿಂಧ್ವಾನಿ ನಿಮ್ಮ ಬಗ್ಗೆ ತುಂಬಾ ಹೇಳ್ತಾ ಇರ್ತಾರೆ." ಎಂದ ತಕ್ಷಣ, ರಣತುಂಗನ ಚರಹೆಯೇ ಬದಲಾಯಿತು.

"ಸಿಂಧ್ವಾನಿ ನಿಮಗೆ ಪರಿಚಯಾನೇ? ಹಾಗಾದರೆ ನಾವಿಬ್ಬರೂ ತೀರ ಹತ್ತಿರ ಆದಹಾಗಾಯಿತು. ಈ ದೂರದ ಊರಿನಲ್ಲಿ ನಿಮ್ಮ ಪರಿಚಯ ಆಗಿದ್ದು ಭಗವಂತನ ಕೃಪೆ ಅಲ್ಲದೇ ಬೇರೇನೂ ಅಲ್ಲ. ನಿಮ್ಮ ಅಭ್ಯಂತರವಿಲ್ಲದಿದ್ದರೆ ನಿಮ್ಮಿಬ್ಬರನ್ನೂ ನನ್ನ ಕಾಟೇಜಿಗೆ ಆಹ್ವಾನಿಸಬಹುದೇ? ಇಂದು ಸಂಜೆಯ ಆತಿಥ್ಯದ ಭಾರ ನನ್ನದು" ಎಂದು ಹೇಳಿ ರಣತುಂಗ ಎದ್ದು ನಿಂತು ತನ್ನ ಕಾಟೇಜಿಗೆ ಹೊರಟ. ನಾವೂ ಎದ್ದು ಅವನನ್ನು ಹಿಂಬಾಲಿಸಿದೆವು. "ಸಿಂಧ್ವಾನಿ" ಹೆಸರಿನಲ್ಲಿ ಯಾವ ಯಕ್ಷಿಣಿ ಇತ್ತೋ ಶರಲೇಖನೇ ಬಲ್ಲ. ನಮ್ಮ ಮಾತುಕತೆಗಳು ಬಹು ಆತ್ಮೀಯತೆಯಿಂದ ನಡೆದವು. ಶ್ರೀಲಂಕಾದ ಪೌರಾಣಿಕ ಚರಿತ್ರೆ, ಲಂಕಾಧೀಶನ ಔದಾರ್ಯ, ಸೀತೆಯ ಅದೃಷ್ಟ ಇವೆಲ್ಲದರ ಬಗ್ಗೆ ನಿರರ್ಗಳ ಮಾತು ರಣತುಂಗನಿಂದ ಹೊರಹೊಮ್ಮುತ್ತಿತ್ತು. " ರಾವಣ ಮಹಾ ಶಿವ ಭಕ್ತ. ಸೀತೆಯನ್ನು ಮಗಳಿನಂತೆ ಕಾಣುತ್ತಿದ್ದ ಅವಳ ರಕ್ಷಣೆಗಾಗಿಯೇ ಅವನು ಅವಳನ್ನು ಲಂಕೆಗೆ ತಂದದ್ದು...." ಎಂಬೆಲ್ಲಾ ಅವನ ಮಾತುಗಳಿಗೆ ನಾವಿಬ್ಬರೂ ಅತಿ ಉತ್ಸಾಹದಿಂದ ತಲೆದೂಗಿದೆವು. ಕೊನೆಗೆ ನಾವು

ಎದ್ದು ಹೊರಡುವಾಗ ಶರಲೇಖ, " ಲಂಕಾಧೀಶನ ವಿಗ್ರಹಕ್ಕೆ ನಮ್ಮ ಒಬ್ಬ ಹಿರಿಯ ಗಿರಾಕಿ ಆಸಕ್ತಿ ತೋರಿಸಿದ್ದರು. ಗೋದಾವರಿ ನದಿಯ ದಡದಲ್ಲಿನ ಲಂಕಾ ಪಟ್ಟಣದ ಜಮೀನ್ದಾರ ವಂಶದವರು..." ಅಂತ ಹೇಳಿದ್ದಕ್ಕೆ, ಆತ, " ನಿಮ್ಮ ಅದೃಷ್ಟ. ನಾಳೆಯೇ ನಿಮ್ಮ ಆಶೇನ ಪೂರೈಸೋ ಭರವಸೆ ನೀಡಬಲ್ಲೆ " ಅಂತ ಹೇಳಿದ ಮೇಲೆ ನಾವು ಅವನಿಗೆ ವಿದಾಯ ಹೇಳಿದೆವು.

ಮಾರನೆಯ ಬೆಳಗ್ಗೆ ರಣತುಂಗ ಹತ್ತು ಘಂಟೆಗೇ ನಮ್ಮ ಕಾಟೇಜಿಗೆ ಬಂದು ನಮ್ಮನ್ನು ಬಾಲಿಯ ಆ್ಯಂಟೀಕ್ ಮಳಿಗೆಗಳನ್ನು ತೋರಿಸಲು ಕರೆದುಕೊಂಡು ಹೋದ. ಅವನ ಸೌಜನ್ಯ, ನಡವಳಿಕೆಗಳನ್ನು ಗಮನಿಸಿದರೆ ಅವನು ನಿಜವಾಗಿ ಕಳುವು ಮಾಡುವಂತಹವನೇ ಎಂಬ ಸಂದೇಹ ಬರುವಂತಿತು. ದಿನವೆಲ್ಲಾ ಸುತ್ತಾಡಿ ಕೊನೆಗೆ ಶರಲೇಖ ಅವನಿಂದ ವಿಗ್ರಹ ಮಾರಾಟಕ್ಕಿರುವ ವಿಷಯದ ಬಗ್ಗೆ ಬಾಯಿಬಿಡಿಸಿ, ಅಂದು ಸಂಜೆ ಆ ವಿಗ್ರಹವನ್ನು ನಮ್ಮ ಕಾಟೇಜಿಗೆ ತಂದರೆ ವ್ಯಾಪಾರ ಕುದುರಿಸುವುದರ ಬಗ್ಗೆ ಆಶ್ವಾಸನೆ ನೀಡಿದ. ಏಳು ಘಂಟೆಗೆ ರಣತುಂಗ ದಶಾನನನ ವಿಗ್ರಹದೊಂದಿಗೆ ನಮ್ಮ ಕಾಟೇಜಿಗೆ ಬರುವುದೆಂದು ನಿರ್ಧರಿಸಿದೆವು. ಕೆಟುಟ್ ಗೆ ಈ ಮುಖ್ಯ ಮಾಹಿತಿ ತಕ್ಷಣ ರವಾನೆಯಾಯಿತು.

ಸಂಜೆ ಏಳು ಘಂಟೆ. ನಾವಿಬ್ಬರೂ ರಣತುಂಗನ ಬರುವಿಕೆಗೆ ಕಾದಿದ್ದೆವು. ಶರಲೇಖ, " ಈ ರಣತುಂಗ ಮಹಾ ಖದೀಮ. ಈ ಸಂಜೆ ಏನು ಬೇಕಾದರೂ ಆಗಬಹುದು. ತುಂಬಾ ಹುಷಾರಾಗಿರು. ಏನೇ ಪರಿಸ್ಥಿತಿ ಬಂದರೂ ನೀನು ಮಾತ್ರ ಬಾಯಿ ಬಿಡಬೇಡ" ಅಂತ ನನಗೆ ಸೂಚನೆ ಬೇರೆ ಕೊಟ್ಟಿದ್ದ. ಸ್ವಲ್ಪ ಹೊತ್ತಿನಲ್ಲೇ ರಣತುಂಗ ನಮ್ಮ ವೆರಾಂಡಾಗೆ ಬಂದ. ಕೈಯ್ಯಲ್ಲಿ ಒಂದು ಉದ್ದನೆಯ ಮರದ ಪೆಟ್ಟಿಗೆ. ಪೆಟ್ಟಿಗೆಯನ್ನು ನಮ್ಮ ಮುಂದಿನ ಮೇಜಿನ ಮೇಲಿಟ್ಟು. ಸೋಫಾದ ಮೇಲೆ ಕುಳಿತ. ತಕ್ಷಣ ಹೊಂಚು ಕಾದಿದ್ದ ಕೆಟುಟ್ ಎಲ್ಲಿಂದಲೋ ಪ್ರತ್ಯಕ್ಷನಾಗಿ " ಕೊನೆಗೂ ಮಾಲು ಸಹಿತ ಸಿಕ್ಕಿದೆಯಲ್ಲಾ. ನೀನೀಗ ದಸ್ತಗಿರಿಯಲ್ಲಿರುವೆ." ಎಂದು ಹೇಳಿದ. ರಣತುಂಗ ಸ್ವಲ್ಪವೂ ವಿಚಲಿತನಾಗಲಿಲ್ಲ. "ಯಾವ ಮಾಲು?" ಅಂತ ಕೇಳಿದ.

" ನೀನು ಲಪಟಾಯಿಸಿರೋ ರಾವಣನ ವಿಗ್ರಹ"

"ಸ್ವಾಮಿ ನೀವು ಯಾರೋ ನನಗೆ ತಿಳಿಯದು. ದಸ್ತಗಿರಿ ಬಗ್ಗೆ ಮಾತಾಡ್ತಿರೋದ್ರಿಂದ ಪೋಲಿಸಿನವರಿರಬೇಕು. ದಸ್ತಗಿರಿ ಮಾಡೋದಾದ್ರೆ ಅಲ್ಲಿ ಮುಂದೆ ಕೂತಿದಾರಲ್ಲ ಶರಲೇಖ, ಅವರನ್ನು ಮಾಡಿ. ನಿನ್ನೆಯಿಂದ ಅವರು ನನ್ನ ಸ್ನೇಹ ಬೆಳೆಸಿ ನನಗೆ ವಿಗ್ರಹ ಮಾರೋದಕ್ಕೆ ಪ್ರಯತ್ನ ಮಾಡ್ತಿದಾರೆ."

"ನಿನ್ನ ಆಟ ಇಲ್ಲಿ ನಡೆಯೋಲ್ಲ. ನೀನೇ ಪೆಟ್ಟಿಗೆ ಹಿಡಿದು ಬಂದದ್ದನ್ನ ನೋಡಿರೋ ಸಾಕ್ಷಿಗಳಿದ್ದಾರೆ" ಅಂತ ಹೇಳುತ್ತಾ ಕೆಟುಟ್ ಮೇಜನ್ನ ಸಮೀಪಿಸಿ ಪೆಟ್ಟಿಗೆ ತೆರೆದ. ಪೆಟ್ಟಿಗೆ ಖಾಲಿ ಇತ್ತು.

ರಣತುಂಗ, " ಪೆಟ್ಟಿಗೆ ನಾನು ತಂದದ್ದು ವಿಗ್ರಹಾನ ಯಾರಿಗೂ ಕಾಣದಂತೆ ಇಲ್ಲಿಂದ ಸಾಗಿಸೋಕ್ಕೆ. ವಿಗ್ರಹ ಅವರ ಕೋಣೆಯಲ್ಲೇ ಇರಬೇಕು. ಅವರು ತಾನೆ ನನಗೆ ವಿಗ್ರಹ ಮಾರುತ್ತಿರೋರು" ಅಂತ ಧೃಢವಾಗಿ ಹೇಳಿದ. ಕೆಟುಟ್ ತನ್ನ ಸಹಾಯಕನಿಗೆ ಶರಲೇಖನ ಕೊಠಡಿಯನ್ನು ಹುಡುಕಲು ಹೇಳಿದ. ಸಹಾಯಕ ಶರಲೇಖನ ಕೊಠಡಿಯನ್ನು ಪ್ರವೇಶಿಸಿ ಸ್ವಲ್ಪ ಸಮಯದ ನಂತರ ಹೊರಕ್ಕೆ ಬಂದ. ಅವನ ಕೈಯ್ಯಲ್ಲಿ ಒಂದು ಸುಂದರವಾದ ಲಂಕೇಶನ ವಿಗ್ರಹವಿತ್ತು.

ನನಗೋ ಹೃದಯ ಬಾಯಿಗೆ ಬಂದಂತಾಯಿತು. ಎಲ್ಲಿ ಬಂದು ಇಲ್ಲಿ ಸಿಕ್ಕಿಕೊಂಡೆನಪ್ಪಾ ಅಂದುಕೊಳ್ಳುತ್ತಿರುವಾಗಲೇ ವಿಲ್ಲಾದ ಮ್ಯಾನೇಜರ್ ಅಲೆಡ್ ಒಳಗೆ ಬಂದ. ಅವನ ಜೊತೆ ಒಬ್ಬ ತರುಣನನ್ನು ಹೆಡೆಮುರಿ ಕಟ್ಟಿ ಕರೆತಂದಿದ್ದ. ಅಲೆಡ್, ಕೆಟುಟ್‌ನನ್ನು ಕುರಿತು, " ಇವನು ರಣತುಂಗನ ಕಾಟೇಜಿನ ಪರಿಚಾರಕ. ಇಂದು ಮಧ್ಯಾಹ್ನ ಶರಲೇಖರು ಕಾಟೇಜಿನಲ್ಲಿ ಇಲ್ಲದಿರುವ ಸಮಯ ನೋಡಿ ಇವನು ರಣತುಂಗನ ಆಣತಿಯ ಮೇರೆಗೆ ವಿಗ್ರಹವನ್ನು ಇಲ್ಲಿ ಬಚ್ಚಿಟ್ಟದ್ದ. ನನಗೆ ಇದರ ಸುಳಿವು ಸಿಕ್ಕಿ ಅವನ ಬಾಯಿ ಬಿಡಿಸಿದೆ. ಅವನು ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾನೆ" ಅಂತ ಹೇಳಿದ.

ಕೆಟುಟ್‌ನ ಮುಖದಲ್ಲಿ ನಿರಾಳ ತುಂಬಿತು. ಮೊಬೈಲ್ ನಲ್ಲಿ ತನ್ನ ಡೆಪ್ಯುಟಿಯನ್ನು ಕರೆಸಿ ರಣತುಂಗ ಹಾಗೂ ಅವನ ಕಾಟೇಜಿನ ಪರಿಚಾರಕನನ್ನು ದಸ್ತಗಿರಿ ಮಾಡಿ ಠಾಣೆಗೆ ಕಳಿಸಿ, ನಮ್ಮ ಕಡೆ ತಿರುಗಿ, "ನಿಮ್ಮಿಬ್ಬರಿಗೂ ಧನ್ಯವಾದಗಳು. ನಿಮ್ಮ ಸಹಾಯದಿಂದ ಈ ಅಮೂಲ್ಯ ವಿಗ್ರಹ ಪುನಃ ದೊರಕಿತು. ನಾಳೆ ನೀವು ಊರಿಗೆ ಹಿಂತಿರುಗುವ ಮೊದಲು ಭೆಟ್ಟಿಯಾಗುವೆ" ಎನ್ನುತ್ತಾ ನಮಗೆ ವಿದಾಯ ಹೇಳಿ ಹೊರಟ.

" ಏನು ಇದೆಲ್ಲದರ ಅರ್ಥ?" ಅಂತ ನಾನು ಶರಲೇಖನನ್ನು ಕೇಳಿದೆ.

" ರಣತುಂಗ ಪಕ್ಕಾ ಖದೀಮ. ಈ ವಿಗ್ರಹ ಕೈಬದಲಾಗುವಾಗ ಪೋಲೀಸರು ಬಂದರೆ ತಪ್ಪಿಸಿಕೊಳ್ಳುವ ಹಂಚಿಕೆ ಹಾಕಿದ್ದ ಈ ರಣತುಂಗ. ನಾವು ನಿಜವಾದ ಗಿರಾಕಿಗಳೇ ಆಗಿದ್ದು ಮಾರಾಟದ ಸಮಯದಲ್ಲಿ ಪೋಲೀಸರು ಬಂದಿದ್ದರೆ ನಾವೇ ಕಳ್ಳರು ಎಂದು ಸಾಬೀತು ಪಡಿಸಲು ವಿಗ್ರಹಾನ ನನ್ನ ರೂಮಿಗೆ ವರ್ಗಾಯಿಸಿದ್ದ ಈ ದುರುಳ. ನನ್ನ ರೂಮಿನಿಂದ ಪಡೆದ ವಿಗ್ರಹ ಅವನು ಕದ್ದದ್ದೆಂದು ಹೇಗೆ ಹೇಳುಕ್ಕಾಗುತ್ತದೆ?" "

"ಪೋಲೀಸರು ಬರದೇ ಇದ್ದಿದ್ದರೆ?" ನಾನು ಪ್ರಶ್ನಿಸಿದೆ.

"ಪೋಲೀಸ್ ಟ್ರಾಪ್ ಇಲ್ಲದಿದ್ದರೆ, ಅವನು " ನಿಮ್ಮ ಒಪ್ಪಿಗೆ ಇಲ್ಲದೇ ನಿಮಗೊಂದು ಉಡುಗೊರೆಯನ್ನು ನಿಮ್ಮ ರೂಮಿನಲ್ಲಿ ಇಟ್ಟಿದ್ದೇನೆ" ಅಂತ ಬೆಣ್ಣೆ ಮಾತನಾಡಿ ನುಣುಚಿಕೊಂಡು ಬಿಡುತ್ತಿದ್ದ. ಇಂತಹ ಖದೀಮರು ನಮಗಿಂತ ಹತ್ತು ಹೆಜ್ಜೆ ಮುಂದಿರುತ್ತಾರೆ. ಅಲೆಡ್, ಪರಿಚಾರಕನ ಬಾಯಿ ಬಿಡಿಸಿದ್ದರಿಂದ ಎಲ್ಲ ಸರಿಹೋಯಿತು. " ಎಂದ ಶರಲೇಖ.

ಮಾರನೆಯ ಬೆಳಗ್ಗೆ ಕೆಟುಟ್ ಗೆ ವಿದಾಯ ಹೇಳಿದ ನಂತರ ದೇವಿ ನಮ್ಮನ್ನು ವಿಮಾನ ನಿಲ್ದಾಣಕ್ಕೆ ಬಿಡಲು ಬಂದಳು. ದಾರಿಯಲ್ಲಿ ಅವಳೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತಾ, ನಾನು " ನಿಮ್ಮ ಬಾಸ್ ನ ಹೆಸರು ನಮ್ಮ ಭಾಷೆಯಲ್ಲಿ ಆ್ಯಷ್ ಅಂತ ಅರ್ಥ ಬರುತ್ತದೆ. ಆ್ಯಷ್ ಗೆ ನಾವು ಬೂದಿ ಅನ್ನುತ್ತೇವೆ. ನಿಮ್ಮ ಬಾಲಿ ಭಾಷೆಯಲ್ಲಿ ಅದಕ್ಕೇನು ಅರ್ಥ ?" ಅಂತ ನಗುತ್ತಾ ಕೇಳಿದೆ.

"ನಮ್ಮ ಭಾಷೆಯಲ್ಲಿ ಬೂದಿಸಾಲಿ ಅಂದರೆ ಇಂಟೆಲಿಜೆಂಟ್ ಪರ್ಸನ್" ಅಂತ ದೇವಿ ಹೇಳಿದಳು.

ವಿಮಾನ ನಿಲ್ದಾಣ ಸೇರಿದ್ದೆವು. ಕಾರಿನಿಂದ ಇಳಿದು ದೇವಿಗೆ ವಿದಾಯ ಹೇಳಿ, ಡಿಪಾರ್ಚರ್ ಗೇಟ್ ಕಡೆ ನಡೆದೆವು.

■

# ಕರೊನ ಎಟ್ ಕ್ರೋಸ್ ರೋಡ್ಸ್!

**– ಇ.ಆರ್. ರಾಮಚಂದ್ರನ್**

ಕಾಗೆಗಳು ಕೆಇಬಿ ಹೈಟೆನ್ಷನ್ ವೈರಿನ ಮೇಲೆ ಕೂತಿದ್ದವು. ಮೀಟಿಂಗ್ ಟೈಮ್ ದಾಟಿ 10 ನಿಮಿಶಗಳಾದರೂ ಒಂದೆರೆಡು ಕಡೆ ಸೀಟು ಖಾಲಿಯಾಗಿತ್ತು. ಕೆಇಬಿಲಿ ಛೇರ್ಮನ್ ಮಾಡುವ ಹಾಗೆ ಛೇರ್ಮನ್ ಕಾಗೆ ಚಡಪಡಿಸಿ ಅಲ್ಲಿ ಇಲ್ಲಿ ನೋಡುತ್ತಿತ್ತು. ಅಷ್ಟರಲ್ಲಿ ಮಿಸ್ಸಿಂಗ್ ಆಗಿದ್ದ ಕಾಗೆಗಳು ಹಾರಿ ಬಂದು ತಮ್ಮ ತಮ್ಮ ಜಾಗದಲ್ಲಿ ಕೂತುಕೊಂಡವು. ಹುಬ್ಬಲ್ಲಿ ಅಸಮಾಧಾನ ತೋರಿಸಿದರೂ ಮೆಲ್ಲಗೆ ವೆಲ್ಕಮ್ ಶಬ್ದ ವ್ಯಕ್ತ ಪಡಿಸಿತು.

ಮೆಂಬರ್ ಸೆಕ್ರಟರಿ ಛೇರ್ಮನ್ ಕಿವಿಯಲ್ಲಿ ಪಿಸುದನಿಯಲ್ಲಿ ಕರಕರ ಶಬ್ದ ಕೇಳಿದ ಚೇರ್ಮನ್‌ರ ಮುಖ ದುಗುಡಗೊಂಡಿತು.

'ಎಲ್ಲರಿಗೂ ನಮಸ್ಕಾರ! ಎಮರ್ಜಂಸಿ ಮೀಟಿಂಗ್ಗೆ ಬಂದದಕ್ಕೆ ಕಮಿಟಿಯ ಮೆಂಬರ್ಸ್ಗೆ ಧನ್ಯವಾದ. ವಾರ್ಡ 19 ರಿಂದ ಸೀರಿಯಸ್ ವಿಷಯ ಬಂದಿದೆ ಅಂತ ನಮ್ಮ ಫೆಸ್ಟಿವಲ್ಸ್ ಸೆಕ್ರಟರಿ ತಿಳಿಸಿದಾರೆ. ವಾಟ್ ಈಸ್ ದ ಮ್ಯಾಟರ್ ದೇರ್?'

'ಥಾಂಕ್ಯೂ ಸರ್! ಫ್ರೆಂಡ್ಸ್, ಇದು ನಮಗೆಲ್ಲಾ ಭಯಾನಕ ನ್ಯೂಸ್. ಈ ತಿಂಗಳಲ್ಲಿ ನಡೆಯಬೇಕಾಗಿದ್ದ ವಿಶ್ವೇಶ್ವರಪುರದ ತೇರು, ಗವಿ ಗಂಗಾಧರ ದೇವಸ್ಥಾನದ ಶಂಕರಾಂತಿಯ ಹಬ್ಬ, ಮುಂದಿನ ತಿಂಗಳ ಒಡಕಟ್ಟೂರಿನ ಅಲಸೂರಿನ ತೇರುಗಳು ಕೋವಿಡ್–19 ನಿಂದ ಗವರ್ನಮೆಂಟ್ ಇದೀಗ ಕ್ಯಾನ್ಸಲ್ ಮಾಡಿದ್ದಾರೆ. ನಮ್ಮ ವೈರಲೆಸ್ ಕಿರಿಕಿರಿ ವಿಧಾನ ಸೌಧ ಗೋಪುರದ ಮೇಲಿಂದ ನಮ್ಮ ಟವರ್ಸ್ನ ಟೆರೇಸ್ಗೆ ಕಾಲ್ ಮಾಡಿ ಹೇಳಿದ್ಲು. ಇಮೀಡಿಯೆಟ್ ಎಫೆಕ್ಟ್ ಅಂತೆ. ನಿಮ್ಗೆ ತಿಳ್ದಿರೋ ಹಾಗೆ ಅಲ್ಲಿನ ಭೋಜನಕ್ಕೆ ಸಾವಿರಾರು ಜನ ಬಂದು ಅವರು ಎಸೆದ ಎಲೆಗಳಿಂದ ನಮಗೆ ಊಟ ಚೆನ್ನಾಗಿ ಸಿಗುತ್ತಿತ್ತು. ನಾವೂ ನಮ್ಮ ಆನ್ಯುಯಲ್ ಗ್ಯಾದರಿಂಗ್ ಆ ಟೈಮಿನಲ್ಲೇ ಆಚರಿಸುತ್ತಿದ್ದವು. ಒಂದು ಪಂಕ್ತಿಯಲ್ಲಿ 200–300 ಎಂಜಿಲೆಲೆಗಳು ಬೀಳುತ್ತೆ. ಮೂರು, ನಾಲ್ಕು ಪಂಕ್ತಿ ಆರಾಮವಾಗಿ ನಡೆಯೋದು. ನಮ್ಮವರು ಎಲ್ಲಾ ಕಡೆ ಹೋಗಿ ಕೂಗಿ ಕೂಗಿ ಎಲ್ಲರನ್ನು ಅಮಂತ್ರಿಸಿ ಬರೋವ್ರು. ಎಸೆದ ಎಲೆಗಳಿಂದ ನಮಗೆ ಭಕ್ಷ್ಯ ಭೋಜನ ಮಿಕ್ಸಾಗಿದ್ದರೂ ಚೆನ್ನಾಗಿ ಸಿಗೋದು. ಕೋವಿಡ್–19 ರಿಂದ ಈಗ ಈ ಜಾತ್ರೆ, ತೇರುಗಳನ್ನೆಲ್ಲಾ ನಿಲ್ಲಿಸಿದ್ದಾರೆ. ಹೀಗೇ ನಡೆಯುತ್ತಾ ಹೋದರೆ ನಾವು ಉಪವಾಸದಿಂದ ಸಾಯುವುದು ಖಂಡಿತ.'

ಕಾ ಕಾ ಅನ್ನುವ ಅವುಗಳ ರೋಧನ ಅರಣ್ಯದಲ್ಲೂ ಎಖೊ ಆಗಿ ಬಂತು.

'ರಿಲಾಕ್ಸ್! ಎರಡು ವರ್ಷದ ಹಿಂದೆ ಇದೇ ರೀತಿ ಒಂದು ಪ್ರಾಬ್ಲಂ ವಕ್ರಿಸಿತ್ತು. ಎಂಜಿಲು ಎಲೆಗಳಿಂದ ಜನರಿಗೆ ಸೋಂಕುರೋಗ ಹರಡುತ್ತೆ, ಖಾಯಿಲೆ ಬರುತ್ತೆ ಅಂತ ಬೀದಿಯಿಂದ ಹಾರಾಡುತ್ತಿರುವ ಎಲೆಗಳನ್ನು ತಕ್ಷಣ ಕಾರ್ಪೊರೇಷನ್ ವ್ಯಾನಿಗೆ ತುಂಬ ಬೇಕು ಎಂದು ಕಮಿಷನರ್ ಆಫೀಸಿನಿಂದ ಆಜ್ಞೆ ಬಂದಾಗ ನಾವು ಕೆಲವು ಕಾರ್ಪೊರೇಟರ್ಗಳ ಕೈಗಳನ್ನು ಅಗುಳು ಅಗುಳಾಗಿ ಮಂತ್ಲಿ ಬಿಸಿ ಮಾಡಿ ಅದನ್ನು ತಡೆ ಹಿಡಿದಿದ್ದೆವು. ಅ ಸಿಸ್ಟಮ್ ಸರಾಗವಾಗಿ ನಡೆದುಕೊಂಡು ಹೋಗುತ್ತಿದೆ. ಈ

ಕರೊನದಿಂದ ಬಂದ ಪ್ರಾಬ್ಲಂ ಬಹಳ ಗಂಭೀರವಾಗಿದೆ ಅದನ್ನು ಹೇಗೆ ನಿಭಾಯಿಸಬೇಕು? ಎನಿ ಸಜೆಷನ್ಸ್?'

'ನಾವುಗಳು ಇಲ್ಲಿಗೆ ಹೊಸಬ್ರು, ಯುಪಿಯಿಂದ ಟ್ಯೂರಿಸ್ಟಾಗಿ ಆಯ ಹೈ. ಕಾಗೆ ಗಳು ವೈರಿನ ಮೇಲೆ ನೋಡಿ ಹಮ್ ಆಯಾ. ಕಾಶಿ, ನಾಶಿಕ್, ಹರಿದ್ವಾರ, ಪ್ರಯಾಗದಲ್ಲಿ ಕುಂಭ ಮೇಳ ಶುರು ಹುವ ಹೈ. ಅಲ್ಲಿ 2,3 ತಿಂಗಳು ನಿತ್ಯ ಮೃಷ್ಟಾನ್ನ ಖಾನ ಮಿಲೇಗ. ಭಾರತದ ತುದಿ ಅಸ್ಸಾಮ್ ಸೆ ಬೆಂಗಾಲಿ, ಬೀಹಾರ್, ಎಂಪಿ, ಯುಪಿ ಇತ್ಯಾದಿ ಎಲ್ಲಾ ಸ್ಟೇಟ್ಗಳ  ಖಾನಾ ಟೇಸ್ಟ್ ಕರ್ನೇಕೇಲಿಯೆ ಮಿಲೇಗ. ನಾವು ದಕ್ಷಿಣ್ ಖಾನಾ ಟೇಸ್ಟ್ ಮಾಡಕ್ಕೆ ಇಲ್ಲಿ ಬಂದ್ವಿ. ನಿಮ್ಮ ಬಿಸಿ ಬೇಳೆ ಅನ್ನ ಅಚ್ಛಾ ಹೈ. ಆದರೆ ಎಲೆಯಲ್ಲಿ ಅದರ ಜೊತೆ ಪಾಯಸ, ಪಲ್ಯೆಲ್ಲಾ ಮಿಲಾವಟ್ ಹೋತ . ಆಪ್ ಸಬ್ ನಮ್ಮ ಜೊತೆ ಯುಪಿಗೆ ಬನ್ನಿ, ಅಲ್ಲಿಯ ಊಟದ ಟೇಸ್ಟ್ ಕರೊ.'

'ಈಗ ಅಲ್ಲಿ ಬಹಳ ಬಿಸಿಲಿರುತ್ತೆ ಅಲ್ವೆ ? ಗರ್ಮಿ? ಅಲ್ಲಿ ಕೊರೊನಾ ಗಲಾಟೆ ಇಲ್ವಾ?'

' ಗರ್ಮಿ, ಕರೊನ ಇದೆ ಮತ್ತು ಇದ್ದೇ ಇರುತ್ತೆ! ಅದಕ್ಕೆ ಹೆದರಿ ಕುಂಭಮೇಳ ಸ್ಟಾಪ್ ನಹಿ ಹೋಗ. ಹಮಾರ ಚೀಫ್ ಮಿನಿಸ್ಟರ್ ಠಫ್ ಹೈ. ಔರ್ ರೋಝ್ ಡಿಸಿಷನ್ ಉಲ್ಟ ನಹಿ ಮಾರ್ತ! ವೊ ಬಹಳ ಫರ್ಮ್.'

' ಅಚ್ಛ!'

'ಜನಗಳು ನಮಗೆ ಅಷ್ಟು ಕೇರ್ ಮಾಡ್ತಿಲ್ಲ, ಕ್ಯಾರೆ ಅನ್ನುವವರಿಲ್ಲ ಕಾಗೆಗಳಿಗೆ. ಸೈಬೀರಯಾದಿಂದ ಈ ವರ್ಷ ಪಕ್ಷಿಗಳು ಬರಲಿಲ್ಲ..ನ್ಯೂಜಿಲೆಂಡಿನಿಂದ ಕಿವಿ  ಬಂದಿಲ್ಲ ಅನ್ನೊ ಮಾತು ಎಲ್ಲೆಲ್ಲೂ ಕೇಳು ಬರುತಿದೆ. ಇಲ್ಲೆ ಇದ್ದ ನಮ್ಮ ಗತಿಯೇನು ಅನ್ನುವವರಿಲ್ಲ. ನಾವೂ ರೈತರ ಹಾಗೆ ಅಮರಣಾಂತ ಉಪವಾಸ ಮಾಡಿದರೆ ಹ್ಯಾಗೆ?' ಕೀರ್ಲು ಗಂಟಲಿನ  ಟ್ಯೂರಿಸಮ್ ಕಾಗೆ.

'ನಾವು ರೈತರ ಹಾಗೆ, ಬಸ್ಸಿನವರ ಹಾಗೆ ಎಮೊಷನಲ್ ಆಗ್ಬಾರ್ದು. ನಾವು ಉಪವಾಸಕ್ಕೆ ಹೋಗದೆ  ಉಪವಾಸ ತನಗೆ ತಾನೇ ನಮ್ಮ ಹತ್ತಿರ ಬರುತ್ತಿದೆ! ಈಗ ಗವರ್ನಮೆಂಟು ಯಾರಾದರೂ ಸತ್ತರೆ ವೈಕುಂಟ ಸಮಾರಾಧನೆಗೂ ಬ್ರೇಕ್ ಹಾಕಿದಾರೆ. ಅದನ್ನು 50 ಜನಕ್ಕೆ ಇಳಸಿದಾರೆ. ಅಲ್ಲೂ ನಮಗೆ ಖೋಥ!' ಮುದಿ ಕಾಗೆ ದನಿ ಸೇರಿಸಿತು.

' ಮುಂಚೆ ನಾನು ಮನೆ ಮುಂದೆ ಕೂಗಿದ್ರೆ  ಎಲ್ಲಾ ಯಾರೋ ನೆಂಟರು ಮನೆಗೆ ಬರ್ತಾರೆ ಅಂತ ಜನ ಖುಶಿಯಾಗಿ ಏನಾದ್ರೂ  ತಿನ್ನಕ್ಕೆ ಹಾಕೋವ್ರು..ಈಗ ಕೂಗಿದರೆ ಯಾವ ಶನಿನೂ ಬರೋದು ಬೇಡ ಅಂತ ನಮ್ಮನ್ನು ಓಡಿಸ್ತಾರೆ' ಯುವ ಕಾಗೆಯ ಪೇಚಾಟ.

'ಪಿಂಡ ಹಾಕಿ ಅದನ್ನು ತಿನ್ನಿ ತಿನ್ನಿ ಅಂತ ಮುಂಚೆ ಗೋಗರಿಯೋವ್ರು..ಈಗ ತಿಥಿನೇ ಮಾಡ್ತಿಲ್ವಲ್ಲಾ,.. ಏನಿದ್ರೂ 'ತಿಥಿ' ಈಗ ಸಿನಿಮದಲ್ ನಡೀತಿದೆ ಅಷ್ಟೆ'. ತಿಥಿ ಸ್ಪೆಷಲಿಸ್ಟ್ ಕಾಗೇಯ ಗೋಳು.

' ಬಹಳ ಕೂಗಿ ಕೂಗಿ ಉದ್ರುಕ್ತರಾಗಿ ಇನ್ನೊಂದು ವೈರ್ ಮುಟ್ಟೀರಿ ಜೋಕೆ!

ನಾನು ಹೇಳೋದನ್ನ ಚೆನ್ನಾಗಿ ಕೇಳಿಸಿಕೊಳ್ಳಿ.. ಈಗ ನಾವು ಸೇಫಾಗಿ ಸುರಕ್ಷಿತವಾಗಿ ಉಳಿಯಬೇಕೆಂದರೆ  ಪೊಲಿಟಿಕಲ್ ರ್‍ಯಾಲಿಗಳ ಜೊತೆ ಸೇರ್‍ಕೋಬೇಕು . ನಾಲ್ಕೈದು ಸ್ಟೇಟ್ಗಳಲ್ಲಿ ಹೇಗೂ ಎಲೆಕ್ಷನ್ ನಡೆಯುತ್ತೆ, ಈಗ ಒಂದೆರೆಡರಲ್ಲಿ ನಡೆಯುತ್ತಿದೆ. ಕ್ಯಾಂಪೇನಿಂಗ್ ಮಾಡೋ ಜಾಗದಲ್ಲಿ ಊಟಗಳು ಚೆನ್ನಾಗಿ ಇರುತ್ತೆ. ತಮಿಳುನಾಡಿನ ಬಾರ್ಡರ್‌ನಲ್ಲಿ ರ್‍ಯಾಲಿಗಳಾದಾಗ ಸಕ್ಕರೆ ಪೊಂಗಲ್, ಖಾರದ ಪೊಂಗಲ್, ರವಾ ಕೇಸರಿ,, ವಡೆ ಇದ್ದ ಊಟಗಳು ಇರುತ್ತೆ. ಕೇರಳದಲ್ಲಿ ಬಾಳೇಕಾಯಿಯ ಚಿಪ್ಸ್, ಗೋಬಿ ಮಂಚೂರಿಯನ್, ಕುಸುಬಲಕ್ಕಿ , ಪಪ್ಪಡಂ, ಅವೈಯಲ್ ಎಲ್ಲಾ ಸಿಗುತ್ತೆ. ನಾನ್– ವೆಜ್ ಕೂಡ ಚೆನ್ನಾಗಿರುತ್ತೆ. ಬೇಗ ಎಂಜಲೆಲೆಗಳು ಹಿಡೀಬೇಕು. ಗುಂಪಲ್ಲಿ ಗೋವಿಂದಾಂತ ಹೋಗಿ ಅಲ್ಲೇ ಯಾವುದಾದರೂ ಮರದಲ್ಲಿ ರಾತ್ರಿ ಇದ್ದು ಚೆನ್ನಾಗಿ ಮೇಯ್ದು ಬನ್ನಿ.'

'ಒಳ್ಳೆ ಐಡಿಯ ಕೊಟ್ಟಿದ್ದೀರಿ....ಥಾಂಕ್ಯೂ ಸರ್!'

'ಅದು ಬಿಟ್ಟರೆ ಯಾರಾದರೂ ಮಿನಿಷ್ಟರ್, ಎಮ್ಮೆಲೇ ಆಗಿರಲಿ.. ಅವರ ಮನೆಗಳಲ್ಲಿ ಮದುವೆ, ಮುಂಜಿ, ಸತ್ಯನಾರಾಯಣನ ಪೂಜೆ ಅದು ಯಾವಾಗ ನಡೆಯುತ್ತೋ ಅದಕ್ಕೆ ಕಾಯ್ತಾ ಇರಿ. ನಾನು ಸೆಕ್ರೆಟರಿಗೆ ಹೇಳ್ತಿನಿ.. ಅಡಿಯೋ ಮೆಸೇಜ್ ಕಳಿಸಲಿಕ್ಕೆ,, ಪಾರ್ಟಿಗಳಿಗೆ ಯಾವ ರೂಲ್ಸೂ ಅಪ್ಲೈ ಅಗಲ್ಲ. ಅವರ ಮನೆ ಎಂಜಿಲು ಎಲೆಗಳು ನಮ್ ಎಂಜಿಲು ಎಲೆಗಳಿಗೂ ಬಹಳ ವ್ಯತ್ಯಾಸವೇನೂ ಇರಲ್ಲ. ನಿಮಗೆ ಮನೇಲಿ ಊಟ ಮಾಡ್ದ ಹಾಗೆ ಇರುತ್ತೆ, ಮೈಗೂ ಒಗ್ಗತ್ತೆ.....'

ಕಾ ಕಾ  ಕಪ್ಪಾಳೆ.

'ನಾನು ಹೇಳುವುದು ಇನ್ನು ಮುಗಿದಿಲ್ಲ.. ನೀವು ಹಾರುವಾಗ ಹುಷಾರು..ಮಾಸ್ಕು ಹಾಕಿಕೊಳ್ಳಿ... ಅಲ್ಲಲ್ಲಿ ಸ್ಯಾನಿಟೈಝರ್  ಡ್ರಂ, ಡಬ್ಬಗಳಲ್ಲಿ ಇರುತ್ತೆ. ಅದನ್ನು ಉರುಳಿಸಿ ಅದರಲ್ಲಿ ಸ್ನಾನ ಮಾಡಿ. ಸೋಪ್ ಫ್ಯಾಕ್ಟರಿ ಹತ್ರ ಅವರ ಲ್ಯಾಬ್ನ ಪಕ್ಕ ಒಂದು ಸಣ್ಣ ಸೋಪಿನ ಕೊಳ ಇದ್ದೇ ಇರುತ್ತೆ. ಅದರಲ್ಲಿ ಎರಡು ಮೂರು ಮಳುಗು ಹಾಕಿ. ಉಸಿರಾಟದ ತೊಂದರೆ ಆದರೆ, ಆಯುರ್ವೇದದ ಫ್ಯಾಕ್ಟರಿಯ ಹತ್ರ ಹೋಗಿ. ಅಲ್ಲಿ ಒಂದೆರೆಡು ಬಾರಿ ದೀರ್ಘವಾಗಿ ಉಸಿರು ಎಳೆದುಕೊಳ್ಳಿ. ನಿಮಗೆ ಉಸಿರಾಟದ ತೊಂದರೆ ಇದ್ರೆ  ದೇವಸ್ಥಾನದ ಹತ್ರ ಕರ್ಪೂರದ ಬಿಲ್ಲೆಗಳು ಬಿದ್ದಿರುತ್ತೆ. ಅದನ್ನು ಮತ್ತೆ ಮತ್ತೆ ಮೂಸಿ ನೋಡಿ... ಉಸಿರಾಟದ ತೊಂದರೆ ಇದ್ರೆ ಅದು ಖಂಡಿತ ಹೋಗ್ಸುತ್ತೆ.. ಎಲ್ರೂ ಸೇಫಾಗಿ ಹಾರಿ. ಇರಿ..ಅದೇನು ಗದ್ದಲ ಮತ್ತು ಸೌಂಡು'? ಯಾರು ಅಷ್ಟು ಕರ್ಕಶವಾಗಿ ಕೂಗ್ತಿರೋದು? ಕಿವಿ ನೋವು ಬರುತ್ತೆ ಈ ಶಬ್ದ ಕೇಳಿದ್ರೇನೆ!'

'ಇಲ್ಲಿ ಉಪಚುನಾವಣೆಯ ಪ್ರಚಾವಣೆ ಶುರುವಾಗಿದೆ ಸಾರ್! ಎರಡು ಪಾರ್ಟಿಯವರೂ ಇಲ್ಲೇ ಕೂಗಿಕೊಂಡು ಹೋಗ್ತಿದಾರೆ! ಇನ್ನು ನಮ್ಮದೇ ಊಟ ಸಿಗುತ್ತೆ!'

' ಗ್ರೇಟ್! ಇನ್ನು  ಚೌ– ಚೌ  ಭಾತ್, ಬಿಸಿ ಬೇಳೆ ಭಾತ್ ಕಾಲ ಶುರುವಾಯಿತು! ನಮ್ಮ ಜಟಾಯು, ಶುಕ್ಲ, ಅವರಿಗೆ ನಮಸ್ಕಾರ ಮಾಡಿ ಕ್ಯಾಂಪೇನಿಗೆ ಇಳಿಯೋಣ. ನನ್ನ ಜೊತೆ ಮೂರು ಬಾರಿ ಹೇಳಿ.  ಜೈ ಕ್ರೊ!  ಜೈ ಕ್ರೋ!! ಝೈ ಖ್ರೋ !!!'

■

# ಕಾಗೆ ಸ್ವಗತ

**– ಗುಂಡುರಾವ್ ದೇಸಾಯಿ**

ನಾನು ಕಾಗೆ...ಬ್ರಾಹ್ಮಣರ ಮನೆಯಲ್ಲಿರುವ ಮಡಿಯಮ್ಮನ ಹಾಗೆ...ಅವಶ್ಯವಿದ್ದಾಗ ಹಾಡಿ ಹೊಗಳಿಸಿಕೊಳ್ಳುವ, ಬೇಡವಾದಾಗ ಸಿಕ್ಕಾಪಟ್ಟೆ ಬಯ್ಯಿಸಿಕೊಳ್ಳುವ ಪ್ರಾಣಿ ಅಲ್ಲ ...ಅಲ್ಲ... ಕ್ಷಮಿಸಿ ಪಕ್ಷಿ. ನೀವು ಏನೇ ಅನ್ನಿ ನಾನಂತೂ ಸೇಫ್ ಜೋನ್ ... ನನ್ನಂತಹ ಅದೃಷ್ಟದ ಪಕ್ಷಿ ಯಾವುದು ಇದೆ ಹೇಳಿ? 'ಇದಕ್ಕೇನು ತಲೆ ಕೆಟ್ಟಿದೆಯಾ?' ಅದೃಷ್ಟ ಹಾಗೆ ಹೀಗೆ ಅಂತ ಹೇಳುತ್ತಿರುವೆನೆಂದು ನೀವು ಅಂಡರ್ ಎಸ್ಟೀಮೇಟ್ ಮಾಡಬೇಡಿ..ಹಾಗೆ ಸುಮ್ಮನೆ ಕೇಳಿಸಿಕೊಳ್ಳಿ.

ನನ್ನ ಬಗ್ಗೆ ನೀವು ಹೊಂದಿರುವ ಮಿಶ್ರಭಾವನೆಗಳ ಗೊತ್ತಾಗುತ್ತಿಲ್ಲ. ನನ್ನನ್ನು ಕಂಡರೆ ಕೆಟ್ಟ ಕೋಪ...ಸಿಕ್ಕಾಂಗೆ ಬೈತಿರಿ ಆದರೂ ನಿಮಗ ನಾನು ಬೇಕು...ನಮ್ಮ ಮಹಾದೇವಿ ಅಕ್ಕನ ಹೇಳಿಲ್ಲವೆ? 'ಕಾಗೆಯೊಂದ ಅಗಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವನೆಲ್ಲಾ' ಎಂದು. ಹಾಗೆ ಕೂಡಿ ತಿನ್ನುವ ಪ್ರಸಂಗದ ಸಂದರ್ಭಕ್ಕೆ ನನ್ನನ್ನೆ ಉದಾಹರಣೆ ಕೊಡತೀರಿ... ಅಕ್ಕ ನನ್ನ ಹೇಗೆ ಗುರುತಿಸಿದ್ದಾಳೆ ನೋಡಿ....? ಎಂಟು ನೂರು ವರ್ಷದ ಹಿಂದೆ ಹೇಳಿದ್ದರೂ ಆಕೆಯ ವಚನದ ಮಾತಿನಂತೆ ಈಗಲೂ ನಡೆ ಶುದ್ಧಿಯಾಗಿ ನಿಮ್ಮ ಕಣ್ಮುಂದೆ ಆಗಾಗ ಸಾಕ್ಷಿಯಾಗುತ್ತಿರುವೆ. ಅಕ್ಕನ ಮಾತು ಹೇಳತೀರಿ, ನನ್ನ ನೋಡತೀರಿ ಆದರೆ ನೀವು ಮಾತ್ರ ಹಾಗೆ ಇದ್ದೀರಿ... ಜೊತೆಗೆ 'ಕಾಗಿ ಹಾಂಗ ಕರುಬ ಬೇಡ' ಅಂತ ಅಪವಾದನೂ ಕೊಡತೀರಿ. ಕರುಬೋರು...ಬಚ್ಚಿಟ್ಟುಕೊಂಡು ತಿನ್ನೋರು, ಚೆಲ್ಲಿದರೂ ಪರವಾಗಿಲ್ಲ ಇನ್ನೊಬ್ಬರಿಗೆ ಕೊಡಬಾರದೆನ್ನುವ ಮನೋಭಾವದವರು ಯಾರೊ? ನೀವೆ ಪ್ರಶ್ನೆ ಹಾಕಿಕೊಳ್ಳಿ.

ಇನ್ನೂ ನೀವೆ ಸರ್ಟಿಫೀಕೇಟ್ ಕೊಟ್ಟೀರಿ ನಾನು ಜಾಣ ಅನ್ನೊದಕ್ಕೆ....'ಯಾವುದೊ ಸಂದರ್ಭದಲ್ಲಿ ಬಾಯಾರಿಕೆಯಿಂದ ಬಳಲಿ ನೀರಿಗಾಗಿ ಹಂಬಲಿಸುತ್ತಿದ್ದಾಗ ಸಿಕ್ಕ ಗಡಿಗೆಯಲ್ಲಿ ಇದ್ದ ಅರ್ಧ ನೀರನ್ನು ಮೇಲೆಕ್ಕೆ ತರಲು ಕಲ್ಲು ರಾಶಿಯನ್ನು ತಂದು ಹಾಕಿ, ಹಾಕಿ...... ಮೇಲೆ ನೀರು ಬಂದ ಮೇಲೆ ಕುಡಿದು ಹೋಗಿದ್ದನ್ನು' ತಾವೆ ಮಕ್ಕಳಿಗೆ ನೀತಿ ಕಥೆಯಾಗಿ ಅಪತ್ತು ಬಂದಾಗ 'ಕಾಗೆ ತರಹ ಯೋಚಿಸಬೇಕು' ಅಂತ ಬುದ್ಧಿವಾದ ಹೇಳತೀರಿ.

ಅಲ್ಲದೆ ನನ್ನ ಬಂಧುವೊಬ್ಬರು ಮಾಂಸದ ತುಂಡನ್ನು ಬಾಯಲ್ಲಿಟ್ಟುಕೊಂಡು ಮರದ ಮೇಲೆ ಕುಳಿತಾಗ ನೋಡಿದ ನರಿಯೊಂದು ಅದನ್ನು ತಿನ್ನಲು ಹೊಂಚು ಹಾಕಿ ನನ್ನ ಬಂಧುವನ್ನು ಹೊಗಳಲು 'ನಿನ್ನ ಬಣ್ಣ ಎಷ್ಟು ಚೆಂದ..ನಿನ್ನ ಕಂಠ ಎಷ್ಟು ಚಂದ..ನನಗಾಗಿ ಒಂದು ಹಾಡು' ಎಂದು ನರಿಯ ಮೂಲಕ ಹೇಳಿಸಿ ಬಂಧುವು ಮೋಸ ಹೋಗಿ ಹಾಡಲು ಶುರು ಹಚ್ಚಿಕೊಂಡಾಗ ಮಾಂಸದ ತುಂಡು ಬಾಯಿಂದ ಬಿದ್ದು ನರಿ ಎತ್ತಿಕೊಂಡು ಹೋಗುವ ಸಂದರ್ಭದಲ್ಲೂ 'ನರಿಯ ಕೆಟ್ಟ ಬುದ್ಧಿ' ಎಂದು ಮರುಗಿ ನಮ್ಮ ಮೇಲೆ ಸಾಫ್ಟ ಕಾರ್ನರ್ ತೋರಿಸಿರುವಿರಿ. ಜೊತೆಗೆ ಇನ್ನೊಂದು ಕಥೆಯನ್ನು ಸೃಷ್ಟಿಸಿ.... ನರಿ ನನ್ನ ಬಂಧುವಿನ ಬಾಯಲ್ಲಿಯ ಮಾಂಸದ ತುಂಡನ್ನು ಕದಿಯಲು ಹೊಂಚು ಹಾಕಿದಾಗ ನಮ್ಮ ಮೇಲಿನ ಪ್ರೀತಿಗೆ ಅಭಿಮಾನಕ್ಕೋ ಯಾವುದಕ್ಕೊ.... ಸುಡುಗಾಡು ನಿಮಗೆ ಗೊತ್ತು... ಆಗ 'ಹಾಡು ಎಂದ ನರಿಗೆ' ನನ್ನ ಬಂಧು ಮಾಂಸದ ತುಂಡನ್ನು ಕಾಲಲ್ಲಿ ಇಟ್ಟುಕೊಂಡು ಹಾಡಿದ್ದನ್ನು..... ಬೆಪ್ಪಾದ

ನರಿ ತಲೆತಗ್ಗಿಸಿಕೊಂಡು ಓಡಿದ ಕಥೆಯನ್ನು ನೀವೆ ಸೃಷ್ಟಿಸಿದ್ದೀರಿ....ಶಬಾಶಗಿರಿನೂ ಕೊಟ್ಟೀರಿ.

ನಾನು ಮನೆ ಮುಂದ ಬಂದು ಕೂತ್ರ ಓಡಸಾಕ ಪ್ರಯತ್ನ ಮಾಡತೀರಿ.. ಅದೆ ಮನೆ ಮುಂದ ನಿಂತು ಒದರಾಕ ಸ್ಟಾರ್ಟ ಮಾಡಿದ್ರ " ಅಯ್ಯ ಇವತ್ತು ಕಾಗಿ ಕೂಗಾಕತ್ತಾದ...ಯಾರೊ ಮನಿಗೆ ಬರತಾರ" ಅಂತ ಅಂದಾಜಿಸ್ತಿರಿ. ಬಂದದ್ದ ಖರೆ ಆಯ್ತು ಅಂದ್ರ "ನಾನು ಹೇಳಲಿಲ್ಲ.... ಕಾಗೆ ಬೆಳಿಗಿಂದನೂ ಕೂಗಾಕತ್ತಿತ್ತು ಯಾರಾದರೂ ಬರತರಾ ಅಂತ ನೀವು ಬಂದ್ರಿ ನೋಡಿ" ಅಂತ ಹೇಳಿ ನನ್ನ ಬಗ್ಗೆ ಹೆಮ್ಮೆ ಪಡತಿರಿ ಒಮ್ಮೊಮ್ಮೆ "ಅನಕೊಂಡೆ ಬೆಳಿಗ್ಗಿಂದನೂ ಕಾಗಿ ಒಂದಾ ಸಲ ಒದರಾಕತ್ತಿತ್ತು..ಅಪಶಕುನ ಮುಂಡೆದು....ಸತ್ತ ಸುದ್ದಿ ಬಂದು ಬಿಡತಾ" ಅಂತ ನನ್ನ ಮೇಲೆ ಹಿಡಿಶಾಪನೂ ಹಾಕತೀರಿ....

ಇನ್ನೂ ನಿಮ್ಮ ಸಂಸಾರ ಹ್ಯಾಂಗೋ ಹಾಗೆ ನಮಗೂ ಸಂಸಾರವಿದೆ. ಪ್ರೀತಿಗೊ ಅಥವಾ ನಮ್ಮ ಚುಂಚಿನಲ್ಲಿ ಸಿಕ್ಕಿರೊ ನಿಮ್ಮ ಪ್ಲಾಸ್ಟಿಕ್ ವಸ್ತುಗಳನ್ನ ತೆಗೆಯಲಿಕ್ಕೊ ಕೊಕ್ಕು ಕೊಕ್ಕು ಕೂಡಸ್ತಿದ್ರೆ 'ನಿಮ್ಮನ್ನ ನೋಡಿ ಅಂತ ಹೇಳಿದೋರು ಯಾರು?' ಅದೇನೋ 'ಕಾಗೆಕೂಟನೊ ಗೂಟನೋ' ನೋಡಿದ್ರೆ ನೋಡಿದವರು 'ತಾನು ಸತ್ತ ಸುದ್ದಿನ ಬಂಧುಗಳಿಗೆಲ್ಲ ತಿಳಿಸಿ...... ಅವರ ಮನೆಗೆ ಬಂದ ಮೇಲೆ ಹಕಿಕತ್ತು ಗೊತ್ತಾಗಿ ಹೋಳಿಗಿ ಊಟ ಮಾಡಿ ಕಳಸಬೇಕು' ಅಂತ ಶಾಸ್ತ್ರ ಮಾಡಿಕೊಂಡಿರಲ್ರೀ ..ನಾವು ಎಲ್ಲಿ ಹೋಗೋಣ ಹೇಳಿ! ನಮಗ ವೈಯಕ್ತಿಕ ಬದುಕ ಇಲ್ಲನಾ...?

ನನ್ನ ಬಗ್ಗೆ ನಿಮ್ಮ ಮನದಲ್ಲಿ ಏನು ಇದೆಯೋ ಒಂದು ಗೊತ್ತಾಗುತ್ತಿಲ್ಲ....ನಾನು ಮನೆ ಹೊಕ್ಕರೆ ಅಪಶಕುನ ಅಂತ ಮನೆನೆ ಬಿಡುತೀರಿ...ಅದು ಬಿಡಿ, ನನ್ನ ಪಾಡಿಗೆ ನಾನು ಹೋಗುವಾಗ ಎದುರಿಗೆ ಬಂದ್ರೆ. ತಿನ್ನೊದನ್ನ, ನೀರು ಕುಡಿಯೋದನ್ನ ನೋಡಿದ್ರೆ, ಹಾರಿದ್ರೆ. ಕೂಗಿದ್ರೆ, ತಲಿಗೆ ಬಡದ್ರೆ, ಪ್ರಯಾಣದಲ್ಲಿ ಕಂಡ್ರೆ, ಒಟ್ಟಾರೆ ಹೊಸದಾಗಿ ಮನೆಗೆ ಬಂದ ಸೊಸೆಗೆ ಕೂತ್ರೂ,ನಿಂತ್ರೂ,ನಡದ್ರೂ,ಮಲಗಿದ್ರೂ ಮಾಡಿದ್ರೂ,ಮಾಡದೆ ಇದ್ದರೂ ಆರೋಪಕೊಟ್ಟು ನಡಿಸಿಕೊಳ್ಳೊ ಹಾಂಗೆ ನಮ್ಮಗ್ಯಾಕ್ರಿ ಕಾಡತೀರಾ? ಮೊನ್ನೆ ಮಾಜಿ ಮುಖ್ಯಮಂತ್ರಿಗಳ ಕಾರಿನ ಮೇಲೆ ಕುಳಿತಾಗ ಮಾಧ್ಯಮದವರು ನನ್ನ ಬಗ್ಗೆ ಇಲ್ಲ ಸಲ್ಲದ ಅಪಪ್ರಚಾರ ಕೊಟ್ರು....ನಿಮ್ಮ ಸಿಟಿಯಾಗ ಅಪ್ಪಿತಪ್ಪಿ ಹಾರಿ ಬಂದ ತಪ್ಪಿಗೆ ದಣಿವಾದಾಗ ಎಲ್ಲಿಯೂ ಗಿಡ ಕಾಣದ ಕಾರ್ ಮೇಲೆ ಕುಳಿತಿದ್ದೆ. ಅಷ್ಟೆಲ್ಲಾ ನನಗ ಅಪವಾದ ಕೊಡೋದಾ.....?

ನಮಗೆ ತೊಂದರೆ ಆಗತಿತ್ತು ಅಂದ್ರೆ ಅಥವಾ ನನ್ನ ಮಕ್ಕಳಿಗೆ ಯಾರಾದೂ ತೊಂದರೆ ಕೊಡೊಕೆ ನೋಡಿದ್ರ ನಾನು ಬಂದು ತಲಿಗೆ ಬಡದು ಕುಕ್ಕಿ ಹೋಗ್ತಿವಿ.... ನಿಮ್ಮಂಗ ಕೊಲೆಸುಲಿಗೆ ಕೆಲಸಂತೂ ಮಾಡಲ್ಲ... ನನ್ನ ವೈಯಕ್ತಿಕ ರಕ್ಷಣೆಗೆ ಆ ರೀತಿ ಮಾಡಿದ್ರು ಅದಕ್ಕೆ 'ನೂರೆಂಟು ಶಾಸ್ತ್ರ ಕೇಳ್ತಿರಲ್ರಿ...? ಬಡದ್ರ,ನೋಡಿದ್ರ,ಕೇಳಿದ್ರಾ ಏನೆಲ್ಲಾ ಮಾಡಬೇಕು!' ಅಂತ ಮೇಲೆ ಸಿಕ್ಕಾಪಟ್ಟೆ ಖರ್ಚು ಮಾಡ್ತೀರಿ...ಯಾವ ಪುರುಷಾರ್ಥಕ್ಕೆ.

ಇನ್ನು ನೀವು ನಮ್ಮನ್ನ ಹಿರಿಯರ ಪ್ರತಿರೂಪಾನು ಅಂತ ತಿಳಕೊಂಡಿರಿ. ಅವರಿಗೆ ಸದ್ಗತಿ ದೊರಕಬೇಕಾದರೆ 'ಕಾಗಿ ಪಿಂಡ ಆಗಲೆಬೇಕು' ಅಂತ ನನ್ನ ಬರುವಿಕೆಗಾಗಿ ತಡವರಸ್ತೀರಿ, ತವಕಸ್ತಿರಿ, ತಪಸ್ಸು ಮಾಡತೀರಿ. ತಾಸಾದ್ರೂ ಕತ್ತೆತ್ತಿ

ಅನಂತ ದೂರದವರೆಗೆ ದೃಷ್ಟಿ ಹಾಯಿಸುತ್ತೀರಿ. ಶಬರಿ ಹಾಂಗ ಹಂಬಲಗೊಳ್ಳುತ್ತೀರಿ. ಬದುಕಿದ್ದಾಗ ಅವರಿಗಾಗಿ ಸಮಯ ಕೊಟ್ಟಿರುತ್ತಿರೊ ಇಲ್ಲವೊ ಗೊತ್ತಿಲ್ಲ. ಎಂತಹ ನಾಟಕ ನಿಮ್ಮದು..ಪಿಂಡದ ಹತ್ತಿರಕ್ಕೆ ಬಂದು ನೀವು ಮಾಡಿದ ಪ್ರಮಾದಗಳಿಗೆಲ್ಲ ಪ್ರಾಯಶ್ಚಿತ್ತನೂ ಮಾಡಿಕೊಂತೀರಿ... 'ತಪ್ಪಾಯ್ತು ಬೇಗ ಬಂದು ತಿಂದು ಹೋಗಪಾ' ಅಂತ ಅವಲತ್ತುಕೊಳ್ಳುತ್ತಿರಿ ಅಲಲಲ...ಕಪಟ ನಾಟಕ ಸೂತ್ರಧಾರಿಗಳೆ? ಹೇಗೆ ಹೊಗಳಲಿ ನಿಮ್ಮ ಅತ್ಯುಗ್ರ ಅಭಿನಯವ!

ಆ ಹಿರಿಯರ ದಿನ ಹೈಲೈಟ್ ನಾವಾ! 'ಎಸ್ ಆರ್ ನೊ' ಪ್ರಶ್ನೆಗಳಂಗ ಆ ದಿನದ ಕಾರ್ಯಕ್ರಮಕ್ಕ ಬಂದೋರು ಕೇಳೊ ಮಾತು ಒಂದಾ....! 'ಕಾಗಿ ಪಿಂಡಾ ಆಯ್ತಾ?' ನಾನು ಬಂದು ತಿನ್ನಲಿಲ್ಲ ಅಂದ್ರ..... ಸತ್ತವನ ಆಸಿ ಹಾಂಗ ಉಳಿತು ಅಂತ ಮರಗತೀರಿ...... ಅಲ್ಲ ನಿಮ್ಮ ಸಂಪ್ರದಾಯಕ್ಕಷ್ಟು ಮಣ್ಣ ಹಾಕ....! ಸುಡಗಾಡು ಸಪ್ಪನೆ ಅನ್ನದ ಉಂಡಿ ಮೇಲೆ ಕುಂಕುಮ ಎಳ್ಳು ಹಾಕಿ ಮಾಂಸ ಕಾಣುವಾಂಗ ಮಾಡಿ ನನ್ನನ್ನ ಸೆಳಿತೀರಿ..ಅಬ್ಬಬ್ಬಾ.. ಅದರ ಬದಲು ನಿಮ್ಮ ಸಂಪ್ರದಾಯ ಏನೆ ಇರಲಿ ಅದರೊಟ್ಟಿಗೆ ಸಣ್ಣ ಮಾಂಸದ ತುಂಡು ಇಟ್ಟರ ಎಷ್ಟು ಉಪಕಾರ ಆಗುತ್ತಲ್ರಿ? ನಾವು ಬದುಕ್ಕೊಂತೀನಿ. ನಿಮ್ಮ ಮಡಿಗೆ ಅದು ಅಡ್ಡ ಬರುತ್ತ ಅಂದ್ರ ತಿನ್ನೊಕೆ ಬೇರೆ ಪದಾರ್ಥನಾದ್ರೂ ಇಡಬಾರದೇನ್ರಿ..? ಅದೂ ಬಿಡಿ ಈಗ ಊರೂರಿಗೆ ನಿಮ್ಮ ಮೊಬೈಲ ಸಲುವಾಗಿ ಸಿಕ್ಕಾಪಟ್ಟೆ ಟವರ್ ಹಾಕಿರಿ..ನಿಮಗೂ ಅದು ತೊಂದ್ರೆ ಅಂತ ಅನ್ನೋದು ಗೊತ್ತು ಆದ್ರೂ ಬಳಸ್ತೀದ್ದೀರಿ..ಆದರೆ ನಮ್ಮಂತಹ ಪುಟ್ಟ ದೇಹಕ್ಕೆ ಎಷ್ಟು ತೊಂದ್ರೆ ಕೊಡತಾವ ಅಂತ ನಿಮಗ ಗೊತ್ತಾ....? ನಮ್ಮ ಅನೇಕ ಪಕ್ಷಿ ಬಂಧುಗಳ ಸಂತತಿನ ಇಲ್ಲದಾಂಗ ಮಾಡಕತೀರಿ....ಆ ರೇಡಿಯೇಷನ್ ನಮ್ಮ ಮೈಯಾಗ ಹೊಕ್ಕು ನಮ್ಮ ಹೃದಯವನ್ನ ಕಿತ್ತಿಗೊಂತಾವ ಹಾಗಾಗಿ ನಮ್ಮ ಅವಾಸನ ಬದಲಾಯಿಸೀವಿ...ಹೀಂಗ ಮಾಡಿ ಕಾಗಿ ಬರತಾ ಇಲ್ಲ ಅನ್ನೋಕೆ ನಾವೇನೂ ನೀವು ದುಟ್ಟುಕೊಟ್ಟು ತಂದು ನಿತ್ಯ ಹೊಟ್ಟೆ ತುಂಬಾ ಹಾಕಿ ಖರ್ಚಿಗೆ ಮೂಲವಾಗಿರುವ ಸಾಕಿದ ನಾಯಿನಾ? ಎಲ್ಲಾವಕ್ಕೂ ರಕ್ಷಣೆ ಇದೆ...ಕಾಯ್ದಿಟ್ಟ ಪಕ್ಷಿಧಾಮ ಅದು ಇದೂ ಮಾಡಿರಿ... ಇಂತಹ ಕಾರ್ಯಕ್ಕೆ ನೆರವಾಗುವ ನಮಗೇನು ಮಾಡೀರಿ. ಪ್ರಾಣಿ ಪಕ್ಷಿ ಸಂಗ್ರಹಾಲಯದಾಗ ಎಲ್ಲರಿಗೂ ಜಾಗ ಕಲ್ಪಿಸಿರಿ...ನಮಗೆ? ಮೀಸಲಾತಿ ಎಲ್ಲರಿಗೂ ಮಾಡಿಕೊಂಡೀರಿ....ನಮ್ಮನ್ನು ಇನ್ನೂ ಅಸ್ಪೃಶ್ಯರಂಗ ನೋಡಾಕತಿರಲ್ರಿ.

ಇನ್ನೂ ಆಸಿ ಮಾಡತಿದ್ರ 'ಕಾಗಿ ಅಂತವನೆ ಅಂತ ಬಯ್ಯಿತಿರಿ...' 'ಕಾಗಿಗೆ ಅಧಿಕಾರ ಕೊಟ್ಟರ ಕಛೇರಿ ತುಂಬ ಹೇತೀತು' ಅಂತ ವ್ಯಂಗ ಮಾಡತೀರಿ.. ಹಸಿವಾದಾಗ ನಿಮ್ಮ ಮಕ್ಕಳ ಕೈಯಿಂದ ಕಸಿದುಕೊಂಡು ಹೋಗಿರಬೇಕು...ಅಥವಾ ಮಗುವಿನ ಕೈಯಿಂದ ಬಿದ್ದಾಗ ಎತ್ತಿಕೊಂಡು ಹೋಗಿರಬೇಕು...ಅದಕ್ಕೆ ಈ ಮಾತಾ..? ಅಲ್ಲದೆ ಅಧಿಕಾರ ಕೊಟ್ಟರೆ ಏನೆಲ್ಲ ಮಾಡತೀವಿ ಅಂತೀರಿ. ನಮಗೆ ಅಧಿಕಾರ ಯಾವಾಗ ಕೊಟ್ಟೀರಿ...ನನ್ನ ಹತ್ರಕ್ಕೆ ಕರಕೊಳ್ಳಲಾರದವರು ನೀವು. ಪಾರಿವಾಳ,ಗಿಳಿ,ಬಾತುಕೋಳಿಗಳಂಗ ಮುದ್ದಾಡತೀರಾ? ಕೋಳಿಗಳಂಗ ಸಾಕತೀರಾ? ಹ್ಞೂಂ.ಹ್ಞೂಂ ಅಪಶಕುನ ಅಂತ ಭಾವಸ್ತೀರಿ..ಏನೆಲ್ಲ ಅಪವಾದ ಕಟ್ಟತೀರಿ....ಇಷ್ಟೆಲ್ಲ ಅಪವಾದಗಳು ಧ್ವನಿ ಕರ್ಕಶಕವಾಗಿರೋದಕ್ಕೆ.. ಬಣ್ಣ ಕಪ್ಪಾಗಿರುವುದಕ್ಕೆ ತಾನೆ...? ಬಿಳುಪಿಗೆ ಬೆಲೆ ಇರೋದು ಕಪ್ಪಿದ್ದಾಗೆಲ..ಹಗಲಿಗೆ ಬೆಲೆ ಇರೋದು ಕತ್ತಲಿದ್ದಾಗಲೆ...ಧ್ವನಿ ಸರಿ ಇಲ್ಲ..ಬಣ್ಣ ಸರಿ ಇಲ್ಲಾ ಎಂದು ಹೆತ್ತ ಮಕ್ಕಳನ್ನು ದೂರ ಮಾಡ್ತೀರಾ?

ಗಾಂಧೀಜಿಯವರೂ ಹೋರಾಡಿದ್ದೂ ಇದೆ ಭಾವಕ್ಕಾಗಿಯೇ ಅಲ್ವಾ? ಅದೂ ಬಿಡಿ ಈ ಮಾಧ್ಯಮದವರು ಕೊಟ್ಟ ಅಪವಾದ ಎಂತಹದುರಿ...? ಮೋಸ ಮಾಡುವುದು, ವಂಚನೆ ಮಾಡುವುದು ಎನ್ನುವ ಪದಕ್ಕೆ 'ಕಾಗೆ ಹಾರಸೋದು' ಅಂತ ಸಂಭೋದಿಸೋದಾ? ಯಾವನೆ ಅಪರಾಧ ಮಾಡಿರಲಿ ...ಅವನ ತಪ್ಪು ಎಳಿರಿ ಅದು ಬಿಟ್ಟು 'ಕಾಗೆ ಹಾರಸ್ತಾನೆ ಕಾಗೆ ಹಾರಸ್ತಾನೆ' ಅಂದ್ರೆ ಏನ್ರಿ ಇದು. ಇಟ್ಸ್ ಟೂ ಮಛ್...

ಇರಲಿ ಏನೆ ಮಾಡಿ ನಾನು ಸೇಫ್..ಗಂಟಲಲ್ಲಿರೊ ಬಿಸಿತುಪ್ಪದಾಂಗ...ನೀವು ನನ್ನ ಹತ್ರ ಕರಕೊಳ್ಳಕ್ಕೂ ಆಗಲ್ಲ ದೂರಿಡಾಕೂ ಆಗಲ್ಲ  ಇತರ ಪಕ್ಷಿಗಳನ್ನ, ಅಲಂಕಾರಕ್ಕೊ, ಔಷಧಕ್ಕೋ ಊಟಕ್ಕೊ ಕೊಲ್ಲತೀರಿ..ನನ್ನ ಹಿಡಿಯೋಕೆ ಮನಸ್ಸು ಮಾಡಲ್ಲ ಅಂದ್ರ ಕೊಲ್ಲೊದಂತೂ ದೂರ ಉಳಿತು. ಮೇಲಾಗಿ ನಾನು ಶನಿ ದೇವರ ವಾಹನ..ಶನಿ ಅಂದ್ರ ಮೊದಲ ತತ್ತರಸ್ತೀರಿ..ನನ್ನ ಕೆಣಕುವುದಕ್ಕೆ ಸಾಧ್ಯವೇ? ಇಡಿ ನಮ್ಮ ಪಕ್ಷಿ ಪ್ರಾಣಿ ಸಂಕುಲನ ನೀವು ಒಮ್ಮೆಯಾದರೂ ಸಾಯಿಸಿರಬಹುದು ಆದರೆ ನನ್ನನ್ನ ಏನು ಮಾಡಾಕ ಆಗಿಲ್ಲ..ಆಗೋದು ಇಲ್ಲ..ಹಾಗಾಗಿ ನಾವು ನಿರ್ಭಯರು...ಹೌದಲ್ಲ...?ಹ್ಹ...ಹ್ಹ...ಹ್ಹ

ನೀವೆ ಏನೆ ಅನ್ನಿ ..ಅಗೊ ಅಲ್ಲೊ ನೋಡಿ ಆ ಮಗು


'ಕಾಗಿ ಕಾಗಿ ಕವ್ವಾ

ಯಾರಾ ಬಂದರಾ ಅವ್ವಾ,

ಮಾವ ಬಂದನಾ ಅವ್ವಾ....' ಅಂತ ಪ್ರೀತಿಯಿಂದ ನನ್ನ ಹೆಸರಿಲೆ ಹಾಡ್ತಿದೆ. ಬರಲಾ........

■

---



# ನಮ್ಮ ಪಾಡಿಗೆ ನಮ್ಮನ್ನು ಬಿಟ್ಟಿದ್ದರೆ

**– ಪ್ರಕಾಶ್. ಆರ್**

ನಾನು ಒಬ್ಬನೇ ವಾಕಿಂಗ್ ಹೋಗ್ತಿದ್ದೆ. ಗಿಡಗಳ ಮಧ್ಯದಲ್ಲಿ ಗುಸು ಗುಸು ಪಿಸು ಪಿಸು ಅಂತ ಕೇಳಿತು. ಯಾರೂ ಕಾಣಲಿಲ್ಲ, ಆದರೆ ಅವರ ಮಾತು ಮಾತ್ರ ಕೇಳಿಸ್ತಿತ್ತು ಸ್ಪಷ್ಟವಾಗಿ. ಅವರ ಮಾತಿನಿಂದ ಗೊತ್ತಾಗಿದ್ದು, ಇಬ್ಬರು ಕೊರೊನಾ ವೈರಸ್ ಸೋದರರು ಮತ್ತು ಒಬ್ಬ ಸೋದರಿ ಇದ್ದಾರೆ ಅಂತ. ಅಲುಗಾಡದೆ ಅಲ್ಲೇ ನಿಂತು ಆಲಿಸಿದೆ ಅವರ ಸಂಭಾಷಣೆ.

ಕೊರೊನಾ ಬ್ರದರ್ 1 : ಈ ಮಂಗಗಳ (ಮನುಷ್ಯರ) ಆರ್ಭಟ ಕೇಳ್ತಾ ಇದ್ದೀನಿ, ನೋಡ್ತಾನೂ ಇದ್ದೀನಿ, ಎಲ್ಲೆಡೆ ನಮ್ಮ ಹೆಸರೇ, ನಮ್ಮದೇ ಚರ್ಚೆ. ನಾವು ಒಂದು ದೊಡ್ಡ ವಿಲ್ಲನ್ ಆಗಿದಂತಿದೆ.

ಕೊಬ್ರ 2 : ಕರೆಕ್ಟ್, ನಾವೇನು ಕಾಲು ಕೆರಕೊಂಡು ಈ ಮಂಗ ನನ್ಮಕ್ಕಳ ಹತ್ತಿರ ಬಂದ್ವ? ಸುಮ್ನೆ ಇದ್ದ ನಮ್ಮನ್ನು ಅವರೇ ತೊಗೊಂಡು ಹೋಗಿ ಏನೋ ಮಾಡಬಾರದನ್ನೆಲ್ಲ ಮಾಡಕ್ಕೆ ಹೋಗಿ, ಈ ಅವಾಂತರ. ಏನಂತೀಯ ಸಿಸ್ಟರ್?

ಕೊರೊನಾ ಸಿಸ್ಟರ್: ಮಂಗ ನನ್ನ ಮಕ್ಕಳು ಅಂತ ಯಾಕಂತೀಯ. ನಮ್ಮ ಮಕ್ಕಳು ವೈನಾಗೆ ಇರ್ತಾರೆ, ಅವರ ಕೆಲಸ ಅವರು ನೋಡ್ಕೊಂಡಿರ್ತಾರೆ, ಈ ಮಂಗಗಳ ತರಹ ಆಡೊಲ್ಲ. ಈ ಮಂಗಗಳಿಗೆ, ನಮಗೆ ಒಂದು ಒಳ್ಳೆ ಹೆಸರು ಕೂಡ ಇಡೋಕಾಗಲಿಲ್ಲ, ಕೋವಿಡ್ 19 ಅಂತೆ. ಅವರಿಗಾದರೆ ರಾಮ, ಕೃಷ್ಣ, ಅರ್ಜುನ, ಲಕ್ಷ್ಮಿ, ಸರಸ್ವತಿ ಅಂತಿದ್ದೋರು ಆಮೇಲೆ ಪ್ರಕಾಶ, ಸುರೇಶ, ಸತೀಶ ಅಂತಾನೂ, ಈಗ ಆರಾವ್, ಆಹಾನ್, ಓಜಸ್, ಶ್ರೇಯ್ ಅಂತ ಇಡ್ತಾರೆ. ನಮಗೂ ಈ ತರಹ ಒಂದು ಮಾಡರ್ನ್ ಹೆಸರು ಇಡಕ್ಕೆ ಆಗಲಿಲ್ಲವ?

ಕೊ ಬ್ರ 1: 19 ಬೇರೆ ಸೇರಿಸಿದ್ದಾರೆ ನಮ್ಮ ಹೆಸರ ಜೊತೆ. ಇವರೇನು ಪ್ರಕಾಶ 60, ಆರವ್ 15 ಅಂತೇನಾದ್ರು ಇಟ್ಕೋತಾರ. ಎಲ್ಲಾ ಇವರ ಅನುಕೂಲಕ್ಕೆ ಮಾಡ್ಕೋತಾರೆ.

ಕೊ ಬ್ರ 1: ನಾವೂ ಸೃಷ್ಟಿಯ ಒಂದು ಅಂಗ ಅನ್ನುವುದೇ ಮರೆತು ಬಿಡುತ್ತಾರೆ ಈ ಮನುಷ್ಯರು. ತಾವೇ ಶ್ರೇಷ್ಠ ಎಂದು ಬೀಗುತ್ತಾರೆ.

ಕೊ ಸಿ: ಬಹಳಷ್ಟು ಮನುಷ್ಯರಿಗೆ ನಮಗೆ ಸಾವೇ ಇಲ್ಲ ಅಂತ ಗೊತ್ತಿಲ್ಲ. ಒಂದೆರಡು ತಿಂಗಳಲ್ಲಿ ನಮ್ಮನ್ನು ಕೊನೆಗಾಣಿಸುತ್ತೀವಿ ಅಂತಾರೆ. ನಾವು ಬದುಕಿದ್ದರೆ ತಾನೇ ಸಾಯೋಕೆ. ಏನಿದ್ದರೂ ಇನ್ನೊಂದು ಜೀವದಲ್ಲಿದ್ದರೆ ವೃದ್ಧಿ ಆಗೋದು ಅಷ್ಟೇ.

ಕೊ ಬ್ರ 1: ನಮ್ಮನ್ನು ಈ ಸ್ಥಿತಿಗೆ ತಂದಿದ್ದು, ಅವರಿಗೂ ಈ ಸ್ಥಿತಿ ತಂದುಕೊಂಡೋರು ಯಾರು? ಈ ಮನುಷ್ಯರೇ. ನಮಗೇನು ಓಡಾಡೋಕೆ ಪ್ಲೇನ್, ಕಾರ್, ಬಸ್, ರೈಲು ಎಲ್ಲಾ ಇದೆಯಾ. ನಮ್ಮನ್ನು ಮನುಷ್ಯರೇ ಹೊತ್ತುಕೊಂಡು ಓಡಾಡಿದ್ದು ಊರಿಂದ ಊರಿಗೆ, ದೇಶದಿಂದ ದೇಶಕ್ಕೆ.

ಕೊ ಬ್ರ 2: ನಾವು ದಿನ ದಿನಕ್ಕೆ ಬದಲಾಗುತ್ತಿದ್ದೀವಿ ಅಂತ ಮಾತಾಡ್ಕೋತಾರೆ.

ಬದಲಾಗಿರೋದಕ್ಕೆ ಒಂದೊಂದು ಹೆಸರು ಬೇರೆ, ಸೌತ್ ಆಫ್ರಿಕನ್ ವೇರಿಯಂಟ್, ಯುಕೆ ವೇರಿಯಂಟ್, ಬ್ರೆಝಿಲಿಯನ್ ವೇರಿಯಂಟ್ ಅಂತ. ಭಾರತದಲ್ಲಿ ಅದೇನೋ ಡಬಲ್ ಮ್ಯುಟಾಂಟ್ ವೇರಿಯಂಟ್ ಆಗಿದ್ದೀವಂತೆ. ನಾವು ಹೀಗೆ ಬದಲಾಗಬೇಕಾದರೆ ಒಂದೇ ಕಾರಣ. ನಮ್ಮ ಅಸ್ತಿತ್ವ ಕಾಪಾಡಿಕೊಳ್ಳೋಕೆ ಅಷ್ಟೇ.

ಕೊ ಬ್ರ 1: ನಾವು ಒಂದು ವರ್ಷದಲ್ಲಿ ಇಷ್ಟೊಂದು ವೇರಿಯಂಟ್ ಗಳಾದರೆ ಈ ಮನುಷ್ಯನ್ನ ನೋಡು. ಮೊದಲ ಮಾನವ ಇದದ್ದು 25 ಲಕ್ಷ ವರ್ಷಗಳ ಹಿಂದೆ ಅಂತೆ. ಇಷ್ಟು ಲಕ್ಷ ವರ್ಷಗಳಾಗಿದ್ದರೆ, ಅದೆಷ್ಟು ಪರಿವರ್ತನೆ, ಸುಧಾರಣೆ, ಪಕ್ವತೆ ಬರಬೇಕಿತ್ತು. ಏನೂ ಕಾಣಿಸೋಲ್ಲ. ಮೊನ್ನೆ ಎಲ್ಲೊ ಮನುಷ್ಯನಿಂದಲೇ ಕೇಳಿದ ಸುದ್ದಿ. 2060 ಸುಮಾರಿಗೆ ಮನುಷ್ಯರಲ್ಲಿ ಸಂತಾನೋತ್ಪತ್ತಿಯ ಶಕ್ತಿಯೇ ಇರುವುದಿಲ್ಲವಂತೆ. ಮಾನವನ ಅಳಿವಿಗೆ ಇದೂ ಒಂದು ಕಾರಣವಾಗಬಹುದು ಅಂತ.

ಕೊ ಸಿ: ಅದೇನೋ ಸರಿ. ಆದರೆ ಈ ಮನುಷ್ಯ ನೋಡು. ಒಬ್ಬನೇ ಮನುಷ್ಯ, ಅದೇ ಹೆಸರು, ನಿಮಿಷಕ್ಕೆ ಬದಲಾಗಬಲ್ಲ. ಮನುಷ್ಯರಂತ ಊಸರವಳ್ಳಿ ಈ ಸೃಷ್ಟಿಯಲ್ಲಿ ಇನ್ನೊಂದಿಲ್ಲ. ಹೇಳಿದ್ದನ್ನ ಹೇಳಿಲ್ಲಾ ಅಂತ, ನೋಡಿದ್ದನ್ನ ನೋಡಿಲ್ಲ ಅಂತ, ಮಾಡಿದನ್ನ ಮಾಡಿಲ್ಲಾಂತ ಹೀಗೆ ತನ್ನ ಅನುಕೂಲಕ್ಕೆ ಏನು ಬೇಕಾದರೂ ಮಾಡಬಲ್ಲ, ಹೇಳಬಲ್ಲ.

ಕೊ ಬ್ರ 1: ಅಲ್ಲ ಸಿಸ್ಟರ್, ನಾವು ನಮ್ಮನ್ನು ಕಾಪಾಡಿಕೊಳ್ಳೋಕೆ ಬದಲಾಗ್ತೀವಿ, ಆದರೆ ಈ ಮನುಷ್ಯ, ಅವನನ್ನ ಕಾಪಾಡಿಕೊಳ್ಳೋದು ಇರಲಿ, ಆಸ್ತಿ ಮಾಡೋದೇ ದೊಡ್ಡ ಕೆಲಸ ಅವನಿಗೆ, ಮಕ್ಕಳಿಗೆ, ಮೊಮ್ಮಕ್ಕಳಿಗೆ, ಇನ್ನೊಂದು ತಲೆಮಾರಿಗೆ ಆಗೋ ಅಷ್ಟು.

ಕೊ ಸಿ: ಈ ಮನುಷ್ಯನಿಗೆ ಬುದ್ದಿ ಬರೋಲ್ಲ ಬಿಡಿ. ನಮ್ಮ ಹೆಸರಿನಲ್ಲಿ, ಸಾವು ನೋವಿನ ಮಧ್ಯದಲ್ಲೂ ಅದೆಷ್ಟೋ ಜನಕ್ಕೆ ದುಡ್ಡು ಮಾಡುವುದೇ ಮುಖ್ಯ. ಯಾರು ಸತ್ತರೆ ಅವರಿಗೇನಂತೆ, ಅವರ ಕಿಸೆ ತುಂಬಿದರೆ ಸಾಕು.

ಕೊ ಬ್ರ 1 : ಔಷಧಿಯಲ್ಲಿ, ವ್ಯಾಕ್ಸೀನ್ ನಲ್ಲಿ, ಹಾಸ್ಪಿಟಲ್ ನಲ್ಲಿ, ಅಷ್ಟೇ ಅಲ್ಲ ಶವಾಗಾರದಲ್ಲೂ ಕೂಡ ದುಡ್ಡು ಅಂದ ಮೇಲೆ ಬದಲಾಗೋದು ಎಲ್ಲಿ ಹೇಳು.

ಕೊ ಸಿ: ನಮಗೆ ಸಾಕಾಗಿ ಹೋಗಿದೆ ಈ ಮನುಷ್ಯನ ಜೊತೆ ಇದ್ದು. ಯಾವಾಗ ಕಳೆಯುತ್ತೋ ಇದು ಅಂತ. ನಮಗೂ ನೆಮ್ಮದಿ, ಮನುಷ್ಯನಿಗೂ ನೆಮ್ಮದಿ. ಆದರೆ ನಮ್ಮಿಂದ ಒಂದಷ್ಟು ಪಾಠ ಕಲಿತರೆ ಒಳ್ಳೇದು.

ಕೊ ಬ್ರ 2: ನಾವು ಇವನಷ್ಟು ಕೆಟ್ಟವರಲ್ಲ. ನಮ್ಮ ಪಾಡಿಗೆ ಬಿಟ್ಟಿದ್ದರೆ, ಸುಮ್ನೆ ಇರ್ತಿದ್ದಿವಿ.

ಕೊ ಸಿ: ಈ ಮನುಷ್ಯರ ಜೊತೆ ಸಹವಾಸ ಮಾಡಿ ನಮಗೂ ಬರಿ ಕೆಟ್ಟದ್ದು ಮಾತಾಡೋದು ಬಂದು ಬಿಟ್ಟಿದೆ. ಬಿಡಿ ಅದನ್ನ. ನೋಡಿ, ಆಕಾಶ ಅದೆಷ್ಟು ನೀಲಿ ಇದೆ. ಅಲ್ಲಿಲ್ಲಿ ಬೆಳ್ಳಿ ಮೋಡ, ಹಕ್ಕಿಗಳು ನೋಡಿ ಅದೆಷ್ಟು ಚೆನ್ನಾಗಿ ಒಂದು ಗುಂಪಿನಲ್ಲಿ ಹಾರುತ್ತಾ ಹೋಗ್ತಿದೆ. ಇಲ್ಲಿ ನಮ್ಮ ಸುತ್ತ ಮುತ್ತ ನೋಡಿದರೆ ಎಷ್ಟೊಂದು ಗಿಡ, ಮರದಲ್ಲಿ ಎಷ್ಟು ಅಂದವಾದ ಹೂಗಳು ಬಿಟ್ಟಿವೆ, ಬಣ್ಣ ಬಣ್ಣದ್ದು. ಪ್ರಕೃತಿ ಸವಿಯೋಣ.

■

**● ದಂನಳ**

- ಗ್ಯಾಸ್ ನಿಂದ ಬಳಲುವ ವ್ಯಕ್ತಿಯನ್ನು ಗ್ಯಾಸ್ಟ್ರೊನಾಟ್ ಎಂದು ಕರೆಯಲಡ್ಡಿಯಿಲ್ಲ.
- ನಾನು ನನ್ನ ಕ್ಲಾಸ್ ರಿಯೂನಿಯನ್ ಸಮಾರಂಭಕ್ಕೆ ಹೋಗಲಿಲ್ಲ. ಏಕೆಂದರೆ ಅಲ್ಲಿ ಬರೀ ವಯಸ್ಸಾದವರೇ ಬಂದಿರುತ್ತಾರೆ.
- ಕನಸು ನನಸಾಗಲಿ; ಕೆಟ್ಟ ಕನಸು?
- ಯು ಗೆಟ್ ವಾಟ್ ಯು ಸೆಟಲ್ ಫಾರ್.
- 'ಪ್ರವೇಶ ನಿಷೇಧಿಸಿದೆ' ಎಂದು ಬಾಗಿಲಿನ ಮೇಲೆ ಬರೆದಿದ್ದರೆ ಆ ಬಾಗಿಲು ಇರಬೇಕಾದರೂ ಏಕೆ?
- ವೆನ್ ಒನ್ ಫೈಂಡ್ಸ್ ಹಿಮ್‌ಸೆಲ್ಫ್ ಇನ್ ಎ ಹೋಲ್ ಆಫ್ ಹಿಸ್ ಓನ್ ಮೇಕಿಂಗ್ ಇಟ್ ಈಸ್ ಎ ಗುಡ್ ಟೈಂ ಟು ಎಕ್ಸಾಮಿನ್ ದಿ ಕ್ವಾಲಿಟಿ ಆಫ್ ವರ್ಕ್‌ಮ್ಯಾನ್‌ಶಿಪ್.
- ನಾನು ನಿನಗಿಂತ ಹೆಚ್ಚು ಪ್ರಾಮಾಣಿಕ; ನಿನ್ನ ಮೇಲಿನ ಭ್ರಷ್ಟಾಚಾರದ ಆಪಾದನೆಗಳು ಎಂಟು. ನನ್ನ ಮೇಲಿರಿವುದು ಆರು ಮಾತ್ರ.
- ಹೋಟೆಲ್ ಊಟ ಬಯಸಿ ಹೋದರೆ ಅಲ್ಲಿ 'ಮನೆ ತರಹ ಅಡಿಗೆ ಇಲ್ಲಿ ಸಿಗುತ್ತದೆ' ಎಂಬ ಬೋರ್ಡ್ ಕಂಡರೆ?
- ಹೆಂಡತಿಯ ಪಿಸುಮಾತು: ನನ್ನ ಅತ್ತೆ ಮನೆಯಲ್ಲಿ ಇಲ್ಲದಾಗ ನನ್ನ ಗಂಡ ನನಗೆ ತುಂಬಾ ಸಹಾಯ ಮಾಡುತ್ತಾರೆ.
- ವಾಟರ್ ಈಸ್ ಎ ಗುಡ್ ಬಿವರೇಜ್ ಇಫ್ ಇಟ್ ಈಸ್ ಟೇಕೆನ್ ಇನ್ ದಿ ರೈಟ್ ಸ್ಪಿರಿಟ್.
- ನೀವು ಎಷ್ಟು ಸಣ್ಣವರು ಎಂದು ತಿಳಿಯಬೇಕಾದರೆ ನೀವು ತುಂಬ ಎತ್ತರಕ್ಕೆ ಬೆಳೆಯಬೇಕು.
- ಹೊಸ ಬುಸಿನೆಸ್ ಶುರು ಮಾಡುವಾಗ ಮೊದಲು ಯೋಚಿಸಬೇಕಾದುದು ಲಾಭ ಎಷ್ಟು ಬರುತ್ತದೆ ಎಂದಲ್ಲ; ಎಷ್ಟು ನಷ್ಟ ತಡೆದುಕೊಳ್ಳಲು ಸಾಧ್ಯ ಎಂದು.
- ಮಾಲ್‌ನಲ್ಲಿ ಕಂಡ ಫಲಕ: ಪ್ಲೀಸ್ ಫೀಡ್ ದಿ ಡಸ್ಟ್‌ಬಿನ್ಸ್. ದಿ ಫ್ಲೋರ್ಸ್ ಆರ್ ಆನ್ ಎ ಡಯಟ್.
- ನನ್ನನ್ನು ಹೊಗಳಿ, ನಾನು ನಂಬದಿರಹಬಹುದು; ಟೀಕಿಸಿ, ನಾನು ನಿಮ್ಮನ್ನು ದ್ವೇಷಿಸಬಹುದು; ನನ್ನನ್ನು ಕಡೆಗಣಿಸಿ, ನಾನು ನಿಮ್ಮನ್ನು ಕ್ಷಮಿಸದಿರಬಹುದು. ನನ್ನನ್ನು ಹುರಿದುಂಬಿಸಿ ನಾನು ನಿಮ್ಮನ್ನು ಮರೆಯುವುದೇ ಇಲ್ಲ.
- ನನ್ನ ಮೆಕ್ಯಾನಿಕ್ ತುಂಬ ಅನುಭವಸ್ಥ. ಅದಕ್ಕೆ ನಾನು ಅವನ ಬಳಿ ಪದೇ ಪದೇ ಹೋಗುತ್ತೇನೆ.
- ನಮ್ಮ ತಪ್ಪುಗಳಿಂದ ಪಾಠ ಕಲಿತರೆ ಅವು ಮಾಡಿದ್ದು ಸಾರ್ಥಕವಾಗುತ್ತದೆ.

# ಆಸ್ಪತ್ರೆಯಲ್ಲಿ

**– ಓಂ ಪ್ರಕಾಶ್**

ಮೆಡಿಕಲ್ ವಿದ್ಯಾರ್ಥಿಗಳಿಗೆ ಹೊರರೋಗಿ ವಿಭಾಗದಲ್ಲಿ ಕ್ಲಾಸ್ ನಡೀತಿತ್ತು. 30 ವರ್ಷದ ಮಹಿಳೆಯೊಬ್ಬಳು ಬಂದು ಡಾಕ್ಟ್ರೇ ನನಗೆ ಆತಂಕ, ಕೈನಡುಕ ಭಯ ಆಗುತ್ತೆ. ಪರೀಕ್ಷೆ ಮಾಡಿದರೆ ಯಾವ ಸಮಸ್ಯೆಯೂ ಇರಲಿಲ್ಲ. ನಾನು, ಸಂಸಾರದ ಬಗ್ಗೆ ವಿಚಾರಿಸೋದು ಮುಖ್ಯ; ಆಕೆಗೆ ಮದುವೆ ಆಗಿತ್ತು. ಇನ್ನೂ ಮಕ್ಕಳು ಇರಲಿಲ್ಲ, ನಾನು ನಿಮ್ಮ ಹಸ್ಬೆಂಡ್ ಕೆಲಸ ಏನು ಮಾಡ್ತಾರಮ್ಮ ಎಂದು ಕೇಳಿದೆ. ಅವಳು ಅವರು ಫೈರ್ ಫೈಟಿಂಗ್ ಇಲಾಖೆಯಲ್ಲಿ ಕೆಲಸ ಸರ್ ಅಂದಳು. ನಾನು, ವಿದ್ಯಾರ್ಥಿಗಳಿಗೆ, ನೋಡಿ ಈಗ, ಪಾಪ ಈಕೆಗೆ ಆತಂಕ ಆಗೋದರಲ್ಲಿ ಆಶ್ಚರ್ಯವೇನು ಎಂದು ಹಿಸ್ಟರಿ ತೆಗೆಯುವ ಬಗ್ಗೆ, ಅದರ ಪ್ರಾಮುಖ್ಯತೆ ಬಗ್ಗೆ ನಿರರ್ಗಳವಾಗಿ ಮಾತಿನ ಗೋಪುರ ಕಟ್ಟಿದೆ.

ಆಕೆಗೆ ನಾವು ಆಡುತ್ತಿದ್ದು ಅರ್ಥ ಆದಂತೆ ಕಂಡಿತು. ಸರ್, ನಮ್ಮ ಹಸ್ಬೆಂಡ್ ಆಫೀಸ್ನಲ್ಲಿ ಅಕೌಂಟ್ಸ್ ಆಫೀಸರ್ ಕೆಲಸ ಮಾಡ್ತಾರೆ ಅಂದುಬಿಟ್ಟಳು, ಸ್ಟೂಡೆಂಟ್ಸ್ ಜೊತೆ ನಾನೂ ನಕ್ಕೆ !!

* * *

ನಮ್ಮ ಆಸ್ಪತ್ರೆ ಓಪಿಡಿ ನಲ್ಲಿ ಹಲವಾರು ರೋಗಿಗಳು ಬರುತ್ತಾರೆ. ಎಲ್ಲರನ್ನೂ ನಿಧಾನವಾಗಿ, ಸಹನೆಯಿಂದ ನೋಡಬೇಕಾಗುತ್ತೆ. ಕೆಲವು ಸಲ ಆಸ್ಪತ್ರೆಗೆ ಬರಬೇಕಾದ ಅಗತ್ಯ ಇರುಲ್ಲ; ಆದರೆ ನಾವು ಹೀಗೆ ಹೇಳೋದು ಕಷ್ಟ. ಒಂದು ದಿನ ಓ ಪಿ ಡಿ ತುಂಬಿದ್ದಾಗ ಒಬ್ಬ ರೋಗಿ ಬಂದರು. ನಾನು ಕೂತಿದ್ದ ರೂಮಿನ ಬಾಗಿಲಿನಿಂದ ನೋಡುತ್ತಿದ್ದೆ; ಆತ ಸುಮಾರು ಒಂದು ಗಂಟೆ ಕಾದಿದ್ದ ಪಾಪ. ಅವರನ್ನ ಕೇಳಿದೆ. ಏನ್ರಿ, ನೆಗಡಿ ಕೆಮ್ಮು ಪುಟ್ಟ ಕಾಯಿಲೆಗೆ ಆಸ್ಪತ್ರೆಗೆ ಏಕೆ ಬರ್ತೀರಾ? ಆತ ಇಲ್ಲ ಡಾಕ್ಟರೇ, ನಾನು ಯಾವಾಗ್ಲೂ ಇದೇ ಆಸ್ಪತ್ರೆಗೆ ಬರೋದು, ಅಂದರು. ನಾನು ಹುಟ್ಟಿದ್ದೇ ಇಲ್ಲೆ ಸರ್ ಅಂತಲೂ ಸೇರಿಸಿದರು! ಏನು ಮಾಡೋದು, ಪ್ರಿಸ್ಕ್ರಿಪ್ಷನ್ ಸಹಿತ ಕಳಿಸಿದೆ.

* * *

ಒಂದು ದಿನ ಓ ಪಿ ಡಿ ಕೆಲಸ ನಡೀತಿತ್ತು, ನನ್ನ ಜೊತೆ ಇಬ್ಬರು ಜೂನಿಯರ್ ವೈದ್ಯರು ಕುಳಿತು ಕೆಲಸ ಮಾಡ್ತಾ ಇದ್ದರು. ಸುಮಾರು 50 ವರ್ಷದ ರೋಗಿ ಬಂದರು. ಅವರನ್ನ ಮೇಲೆ ಹೇಳಿದ ಹಾಗೆ ಕೇಳುವ ತಪ್ಪು ಮಾಡಿದೆ ಆತ ಪ್ರಿಪೇರ್ ಆಗಿ ಬಂದೋನ ತರಹ ಡಾಕ್ಟ್ರೇ, ಮಗು ಆಗಿದ್ದಾಗಲಿಂದ ಇಲ್ಲಿಗೇ ಬರ್ತಿದೀನಿ, ಬೇರೆಕಡೆ ಎಲ್ಲೂ ಸೆಟ್ ಆಗಲ್ಲ ಅಂದರು.

ಪ್ರತಿ ಸಲ ನಾನೇ ಸಿಕ್ಕುತ್ತೇನೆ ಅಂತ ಇಲ್ಲವಲ್ಲ ಅಂದೆ. ಅದೇ ಎರಡನೇ ತಪ್ಪು! ಆತ ನಿಧಾನವಾಗಿ, ನಾನು 15 ವರ್ಷ ದಿಂದ ಇದೇ ಈ ರೂಮ್ ನಂಬರ್ 9 ನಲ್ಲೆ ಯಾವುದೇ ಡಾಕ್ಟರ್ ಇರಲಿ, ತೋರಿಸೋದು ಅಂದುಬಿಡೋದೆ? ನನ್ನ ತೇಜೋವಧೆ ಮಾಡಿದವನನ್ನು ಬೇಗ ಸಾಗಹಾಕಿದೆ !

* * *

# ಕುಟುಂಬ ಯೋಚನೆ ಮತ್ತು ಆಶೀರ್ವಚನ

**– ಕೆ.ಎಸ್.ಸೋಮೇಶ್ವರ**

ಯಾವುದೇ ಶುಭ ಸಮಾರಂಭವಾಗಲೀ ಆಹ್ವಾನ ಪತ್ರಿಕೆಯಲ್ಲಿ ಸಕುಟುಂಬ ಪರಿವಾರ ಸಮೇತ ಬಂದು ಹಾರೈಸಿ ಎನ್ನುವ ವಾಕ್ಯ ಆದರದಿಂದ ಮುದ್ರಿಸಿರುತ್ತಾರೆ. ನಮ್ಮಲ್ಲಿ ನವ ವಿವಾಹಿತರು ಹಿರಿಯರ ಕಾಲಿಗೆ ನಮಸ್ಕರಿಸಿ ಅವರಿಂದ ಆಶೀರ್ವಾದ ಪಡೆಯುವುದು ಸಾಮಾನ್ಯ. ಬೇರಾವ ದಿನಗಳಲ್ಲಿ ಅಲ್ಲದಿದ್ದರೂ ಮದುವೆಯ ದಿನದಂದು ಮಾತ್ರ ಅದು ಕಡ್ಡಾಯ. ಆಗಿನ ಕಾಲದಲ್ಲಿ ಅಂದರೆ ನಾವೆಲ್ಲ ಹುಟ್ಟಿ ಬೆಳೆಯುವ ಮೊದಲೇ ಇರಬೇಕು. ಆ ನವ ವಿವಾಹಿತೆಗೆ ಸಿಗುತ್ತಿದ್ದುದು 'ಅಷ್ಟ ಪುತ್ರ ಸೌಭಾಗ್ಯವತಿ ಭವಃ' ಅದೇಕೆ  ಅಷ್ಟ ಪುತ್ರರೊ ನನಗೆ ತಿಳಿದಿಲ್ಲ. ಇನ್ನು ಮದುವೆಯಾಗದವರಿಗೆ ಶೀಘ್ರಮೇವ ಕಲ್ಯಾಣ ಪ್ರಾಪ್ತಿರಸ್ತು ಎಂಬುದಾಗಿತ್ತು . ಈಗ ಬಿಡಿ ಪ್ರತಿ ಭಾಷೆ, ಜಾತಿಗಳಿಗೇ ಮೀಸಲಾದ  ಮ್ಯಾಟ್ರಿಮೋನಿಯಲ್ ಬ್ಯೂರುಗಳು (ಬ್ಯೂರೊ) ಗಳು. ಇವರುಗಳ ಕೃಪಾ ಕಟಾಕ್ಷ ಆ ವಧೂ ವರರಾಗ ಬಯಸುವವರಿಗೆ  ಸದಾ  ಸಿದ್ಧ. ಏಕೆಂದರೆ, ಅವರುಗಳ ಕೃಪೆಯೇ ಇವರಿಗೆ ಲಕ್ಷ್ಮೀ ಕಟಾಕ್ಷ. ಇವರನ್ನು ತೀರ ಆಡು ಭಾಷೆಯಲ್ಲಿ ಮದುವೆ ದಲ್ಲಾಳಿಗಳು  ಅಥವಾ ಬ್ರೋಕರ್  ಭೀಷ್ಮಾಚಾರಿ ಎನ್ನಬಹುದು.

ಇನ್ನು ಅಷ್ಟಪುತ್ರ ಸೌಭಾಗ್ಯವತಿ. ಇದೇಕೆ ? ಪುತ್ರಿಯರು ಬೇಡವೇ? ಉತ್ತರ ಗೊತ್ತಿಲ್ಲ.ಆಗ ಸಂಸಾರದ ಏಲ್ಲ ಭಾಗ್ಯಗಳೂ  ನಮ್ಮ ಸರಕಾರದ ಭಾಗ್ಯಗಳಂತೆ ಪುತ್ರ ಭಾಗ್ಯಕ್ಕೇ ಕೇಂದ್ರೀಕೃತವಾಗಿತ್ತು ಎನಿಸುತ್ತದೆ. ಆಗ, ಈಗಿನ ಭ್ರೂಣ ಲಿಂಗ ಪತ್ತೆ, ಹತ್ಯೆ ಇವೆಲ್ಲ ಇರಲಿಲ್ಲ. ಪುರಾಣದ ಕಥೆಗಳಲ್ಲಿ ಏನೇನೋ ಇವೆ. ಅವರು ಏನೇ ಆಶೀರ್ವದಿಸಲಿ ಅಷ್ಟರಲ್ಲಿ ಅಷ್ಟಿಷ್ಟಾದರೂ ಹೆಣ್ಮಕ್ಕ ಳ  ಭೂಮಿಗೆ ಬಂದೇ ಬಿಡುತ್ತಿದ್ದರೇನೋ. ಇರಲೇ ಬೇಕು. ಇಲ್ಲದಿದ್ದರೆ ಇಂದಿನವರೆಗಿನ ಸಂತಾನ ಯೋಜನೆ, ಯೋಚನೆಗಳು ಎಲ್ಲಿ ಕಾಣಲು ಸಾಧ್ಯವಾಗುತ್ತಿತ್ತು

ಸಂಸಾರ ಅಥವಾ ಸಂತಾನ ಯೋಜನೆ  ಅಂದರೆ ಕುಟುಂಬ ಯೋಜನೆ ಸಂಬಂಧ ನಾಲ್ಕೈದು ದಶಕಗಳ ಹಿಂದಿನಿಂದಲೇ ನಮ್ಮ ಘನ ಸರಕಾರಗಳು ತೀರ್ಮಾನಗಳನ್ನು ತೆಗೆದು ಕೊಂಡಿದೆ. ನಮ್ಮ ನಮ್ಮ ಕುಟುಂಬಗಳ ಯೋಜನಾ ಬದ್ಧ ನಿಯಂತ್ರಣ ಅವುಗಳ  ಒಂದು ಕಾರ್ಯತವೇ ಆಗಿದೆ.  ಅದಕ್ಕೆ ಮುಂಚೆ, ಎಲ್ಲ ,'ನಮ್ಮ ಸಂಸಾರ ಆನಂದ ಸಾಗರ' ಎಂದು ಹಾಡುತ್ತ ಕುಣಿಯುತ್ತಲಿರುವ ಕೂಡು ಕುಟುಂಬಗಳಾಗಿದ್ದವು. ಅಣ್ಣ ತಮ್ಮಂದಿರ ಮಕ್ಕಳ ಆಟ, ತುಂಟಾಟ ಎಲ್ಲ ಸಂಖ್ಯಾಬಲವನ್ನು ಹೆಚ್ಚಿಸಿದ್ದವು. ಆ ಮನೆಯ ಹಿರಿಯರಿಗೆ ಯಾರ ಮಕ್ಕಳು  ಯಾರು ಎಂಬುದೇ ತಿಳಿಯುತ್ತಿರಲಿಲ್ಲವಂತೆ.   ಬಹುಶಃ  ಈ ಕುಟುಂಬ ಯೋಜನೆಯೇ ಈಗಿನ ಅಣು ಕುಟುಂಬಗಳಿಗೆ ನಾಂದಿ ಎನ್ನಹುದಾಗಿದೆ.


ಸರಕಾರದ  ಈ ಯೋಜನೆಗಳು ನಮಗೆ ಹಲವಾರು ಪ್ರಾಸ ಬದ್ಧ ಶೀರ್ಷಿಕೆಗಳನ್ನು ಕೊಡುಗೆಯಾಗಿ ನೀಡಿದೆ. ಅದರ ರಚನೆಕಾರರು ಯಾರೋ ತಿಳಿಯದು. ಭಾಷೆ ಬೇರೆ ಅರ್ಥ ಒಂದೇ.  'ಒಂದು ಬೇಕು ಎರಡು ಸಾಕು" ಅದರಲ್ಲೊಂದು.  ಇಲ್ಲಿ ಲಿಂಗ ಭೇಧವಿಲ್ಲ.  ಮುಂದುವರಿದಂತೆ, 'ಆರತಿಗೊಬ್ಬಳು, ಕೀರುತಿಗೊಬ್ಬ'. ಇಲ್ಲಿ ಲಿಂಗ ಸಮಾನತೆ ಆದರೆ, ಅವರವರ ಕೆಲಸ ಹುಟ್ಟುವುದಕ್ಕೇ ಮೊದಲೇ ಬ್ರಹ್ಮ ಲಿಖಿತವೆನ್ನುವಂತಿತ್ತು. ಇವೆಲ್ಲ ಅಂದಂದಿನ ಸರಕಾರಗಳ

ಸಮತಾಭಾವವನ್ನು ಸೂಚಿಸುತ್ತದೆ. ಮುಂದೆ, 'ನಾವಿಬ್ಬರು ನಮಗಿಬ್ಬರು' . ಇದೂ ಸಹ ಲಿಂಗ ಭೇದ ಸೂಚಿಸದೆ ಮುಂದಿನ ಸಣ್ಣ ಕುಟುಂಬಕ್ಕೆ ಶ್ರೀಕಾರವೆನ್ನವಂತಿದೆ. ಇದನ್ನು ಸ್ವಲ್ಪ ತಿಳಿಯಾಗಿ ನಮ್ಮನ್ನು ಅಂದಿನ ಹಾಸ್ಯ ಪಿತಾಮಹ / ಮಹಿಷಿಯರು 'ನಾವಿಬ್ಬರು ನಮಗೆ ಬರೇ ಮಕ್ಕಳು' ಎಂದುಸುರಿದರು. ಇದು ತಮಾಷೆಗಾಗಿ ಎನಿಸಿದರೂ ಕೆಲವೆಡೆ ಸತ್ಯವೆನಿಸುತ್ತದೆ. ಏಕೆಂದರೆ, ಕೆಲವು ಸಂಸಾರದಲ್ಲಿ ಸರಕಾರದ ಲಕ್ಷ್ಮಣ ರೇಖೆಯನ್ನು ಮೀರಿ ಮೂರು ಮತ್ತೊಂದು ಮಾಡಿ ಅತಿಕ್ರಮಣ ಮಾಡಿದ್ದರೆ, ಇನ್ನು ಕೆಲವರು ತಮ್ಮದೇ ಆದ ನಾನಾ ಕಾರಣಗಳಿಂದಾಗಿ ಸರಕಾರದ ಗಡಿಯನ್ನೂ ಮುಟ್ಟಲಾಗದೇ ಒಂದಕ್ಕೇ ಸೀಮಿತಗೊಳಿಸಿಕೊಂಡು ಅದನ್ನೇ ಆರತಿ ಮತ್ತು ಕೀರುತಿ ಎನ್ನುತ್ತ ಇರುತ್ತಾರೆ.

ಮೇಲೆ ಹೇಳಿದ ಪ್ರಾಸ ಪದಗಳು ಇನ್ನಷ್ಟು ಮುಂದುವರಿದು. ಸಾಕು ಸಾವಿತ್ರಿ ಬೇಕು ಬೆನಕಪ್ಪ' ಅಖಾಡಕ್ಕೆ ಇಳಿದರು. ಇಲ್ಲಿ ಸಾವಿತ್ರಿಯು ಹೆಚ್ಚಾಗಿ ಬೆನಕನನ್ನು ಕೇಳಿದರೋ ಹೇಗೆ ನಿರ್ಧರಿಸುವುದು? ಬಹುಶಃ, ಬೆನಕನಾದರೆ ಬ್ರಹ್ಮಚಾರಿ ಅದಲ್ಲದೇ, ಅವನಿಗೆ ಒಂದು ಮೂಷಿಕವನ್ನು ಸವಾರಿ ಮಾಡಲು ಕೊಡಿಸಿದರೆ ಮುಗಿಯಿತು ಎನ್ನುವ ಅಭಿಪ್ರಾಯ ಇರಬಹುದು. ಸಾವಿತ್ರಿ ಆದರೆ ಅಷ್ಟು ಸುಲಭವಲ್ಲ. ಆ ಮಹಾ ಪತಿವ್ರತೆ ತನ್ನ ಪತಿ ದೇವನಿಗಾಗಿ ಸುರಲೋಕದಿಂದ ಸಾಕ್ಷಾತ್ ಯಮ ಧರ್ಮರಾಯನನ್ನೇ ಬುಲ್ ಡೋಜರ್ ಗಾಡಿಯಲ್ಲಿ ಕರೆಸಿದಂತಹವಳು. ತನ್ನ ದಢೂತಿ ದೇಹದ ಮೇಲೆ ಅಷ್ಟೇ ತೂಕದ ಯಮನನ್ನು ಪದೇ ಪದೇ ಭೂಲೋಕಕ್ಕೆ ಹೊತ್ತು ತರುವುದು ಸಾಮಾನ್ಯದ ಸಂಗತಿಯಲ್ಲ. ಇಲ್ಲಿ ಯಮನನ್ನು ಏಕೆ ಧಢೂತಿ ಎಂದೆ ಏಂದರೆ ಅವನ ದರುಶನ ನನಗಾಗಿಲ್ಲ. ಆದರೆ, ನಮ್ಮ ಚಲನ ಚಿತ್ರಗಳಲ್ಲಿ ಆ ಪಾತ್ರಧಾರಿಗಳು ಯಾವಾಗಲೂ ಹಿರಿ ದೇಹದವರು. ನೋಡಿ ನಟ ದೊಡ್ಡಣ್ಣ ನವರು, ವಜ್ರಮುನಿ ಅವರು ಹೀಗೆ ( ಇಲ್ಲಿ ಆ ನಟರ ಕ್ಷಮೆಯೊಂದಿಗೆ) ಯಮನೆಂದರೆ ಹೀಗೆ ಎಂಬುದನ್ನು ಅವರುಗಳು ದೈತ್ಯಾಕಾರದ ಗಧೆಯೊಂದಿಗೆ ರಂಗ ಪ್ರವೇಶ ಮಾಡುತ್ತಿದ್ದರು. ಈಗೇನೊ ನಾವುಗಳು ಚಂದ್ರ ಅಥವಾ ಮಂಗಳನಲ್ಲಿಗೆ ಮಾರುತಿ ಕಾರಿನಲ್ಲಿ ಓಡಾಡಿ ಬಂದಷ್ಟೆ ಸಲೀಸಾಗಿ ಹೋಗಿ ಬರುತ್ತಿದ್ದೇವೆ. ಆದರೆ, ಅಲ್ಲಿಂದ ಇಲ್ಲಿಗೆ ಪಯಣ ಬೆಳೆಸಿದವರ ಉಲ್ಲೇಖ ಎಲ್ಲೂ ಇದ್ದಂತಿಲ್ಲ ಒನ್ ವೇ ಜರ್ನಿ. ಶುದ್ಧ ನೋ...ನೋ.

■

---



# ಕ್ಲೋಸ್ಪೇಟೆ ಅಯ್ಯನವರ ಇಂಗ್ಲಿಷ್ ಗೀಳು

**– ಕೆ. ಸತ್ಯನಾರಾಯಣ**

1960 ಮತ್ತು 70ರ ದಶಕದ ವರ್ಷಗಳಲ್ಲಿ ನಮ್ಮ ಮಂಡ್ಯಸೀಮೆಯಲ್ಲಿ ಕಾಲೇಜು ಓದುತ್ತಿದ್ದ ವಿದ್ಯಾರ್ಥಿಗಳಲ್ಲಿ ಯಾವ ಜಾತಿಬೇಧ ವರ್ಗಬೇಧವೂ ಇಲ್ಲದೆ ಬಹುಪಾಲು ಮಕ್ಕಳು ಇಂಗ್ಲಿಷ್ ಜೊತೆ ಮೂರು–ನಾಲ್ಕುವರ್ಷಗಳ ಗ್ರಹಚಾರ, ತಪ್ಪಿದರೆ ಏಳೆಂಟು ವರ್ಷಗಳ ಕಾಲಮಹಾಯುದ್ಧವನ್ನು ನಡೆಸುತ್ತಿದ್ದರು. ನಿಮಗೆ ತಿಳಿದಂತೆ ಮೊದಲನೆ ಮತ್ತು ಎರಡನೆ ಮಹಾಯುದ್ಧಗಳು ಕೇವಲ ನಾಲ್ಕೈದು ವರ್ಷಗಳಲ್ಲಿ ಮುಗಿದು ಹೋದವಷ್ಟೆ. ನಮ್ಮ ಮಹಾಯುದ್ಧವೋ, ಏಳೆಂಟು ಹತ್ತುವರ್ಷಗಳ ಕಾಲಾವಧಿಯದು. ಎಲ್ಲ ಹಂತದಲ್ಲೂ ಸೋಲು, ಹತಾಶೆ, ಖಿನ್ನತೆಯೇ! ನಾನು ನನ್ನ ಮಿತ್ರರು ಒಂದೆರಡು ತಲೆಮಾರು ಮುಂಚೆ ಹುಟ್ಟಿದ್ದರೆ, ನೇತಾಜಿಯವರ ಜೊತೆ ಸೇರಿ ಇಂಗ್ಲೆಂಡಿಗೆ ಹೋಗಿ ಅಲ್ಲಿಯ ಪಾರ್ಲಿಮೆಂಟ್, ಬಂಕಿಂಗ್ ಹ್ಯಾಂ ಅರಮನೆಗೇ ಬೆಂಕಿ ಹಾಕುತ್ತಿದ್ದೆವು.

ಪಿಯುಸಿ ಮತ್ತು ಪದವಿ ತರಗತಿಗಳಲ್ಲಿ, ಬೇರೆ ಎಲ್ಲ ವಿಷಯಗಳಲ್ಲೂ ಉತ್ತೀರ್ಣರಾದರೂ, ಒಳ್ಳೆಯ ಅಂಕಗಳು ಬಂದರೂ, ಇಂಗ್ಲಿಷಿನಲ್ಲಿ ಮಾತ್ರ ಬಡಪೆಟ್ಟಿಗೆ ಪಾಸಾಗುತ್ತಿರಲಿಲ್ಲ. ಪಾಸಾದವರಲ್ಲೂ ಬಹುಪಾಲು ವಿದ್ಯಾರ್ಥಿಗಳು ಕನಿಷ್ಠ ಅಂಕಗಳ ಆಸುಪಾಸಿನಲ್ಲೇ ಇರುತ್ತಿದ್ದರು. ನಮ್ಮ ಅಂಕಪಟ್ಟಿಗಳನ್ನು ನೋಡಿದ ಮೇಷ್ಟರುಗಳು ಹೇಳುತ್ತಿದ್ದರು. ಏನೋ ಪೂರ್ವಜನ್ಮದ ಪುಣ್ಯ, ಎರಡು–ಮೂರು ಅಂಕ ಆ ಕಡೆ, ಈ ಕಡೆ ಆಗಿದ್ದಿದ್ದರೆ, ಇನ್ನೂ ಒಂದೆರಡು ವರ್ಷ ಮಣ್ಣು ಹೊರುತ್ತಲೇ ಇರಬೇಕಾಗುತ್ತಿತ್ತು.

ಇದಕ್ಕೆಲ್ಲ ಕಾರಣವಾದದ್ದು ಕ್ಲೋಸ್ಪೇಟೆ ರಾಮನರಸಯ್ಯ. ಈತ ಕ್ಲೋಸ್ಪೇಟ್ ಪಟ್ಟಣದವನೂ ಅಲ್ಲ. ಪಕ್ಕದ ಶೇಷಗಿರಿ ಹಳ್ಳಿಯ ಕಿರಾಣಿ ಅಂಗಡಿ ಮಾಲೀಕನ ಮಗ. ಹತ್ತು–ಹದಿನೈದು ಗುಂಟೆ ಮಾತ್ರ ಜಮೀನು ಇದ್ದದ್ದು. ಕೆಂಗಲ್ ಹನುಮಂತಯ್ಯನವರ, ಮಹಾರಾಜರ, ನೆಹರೂ ಮನೆತನದವರ ಕೃಪಾದೃಷ್ಟಿಗೆ ಬಿದ್ದು, ಲಂಡನ್ಗೇ ಹೋಗಿ ಇಂಗ್ಲಿಷ್ ಕಲಿತು ಬಂದಿದ್ದನಂತೆ. ಭಾರತದ ಮಕ್ಕಳೆಲ್ಲ ಮುಂದೆ ಬರಬೇಕಾದರೆ, ಇಂಗ್ಲಿಷ್ ಒಂದೇ ಸ್ವರ್ಗಕ್ಕೆ ದಾರಿ, ಇಂಗ್ಲಿಷ್ ಓದಬೇಕು, ಬರೀಬೇಕು, ಉಸಿರಾಡಬೇಕು. ಅವರಂತೆಯೇ ಪ್ರತಿಕ್ಷಣವೂ ಜೀವಿಸಬೇಕು. ಮನೆ ಒಳಗೂ ಕೂಡ ಸೂಟು–ಬೂಟು ಹಾಕಿಕೊಂಡಿರಬೇಕು, ಚಮಚದಲ್ಲೇ ಊಟ ಮಾಡಬೇಕು. ಪ್ರಾರ್ಥನೆ, ಪೂಜೆ, ಪ್ರೀತಿ ಎಲ್ಲವನ್ನೂ ಇಂಗ್ಲಿಷಿನಲ್ಲೇ ಮಾಡಬೇಕು ಎಂಬುದು ಇವನ ಸಂವಿಧಾನವಾಗಿತ್ತು.

ಈ ಸಂವಿಧಾನಕ್ಕನುಗುಣವಾಗಿ, ಇಂಗ್ಲಿಷ್ ಪಠ್ಯ ಪುಸ್ತಕ ತಯಾರಾಗುತ್ತಿತ್ತು. ಎಂತಹ ಇಂಗ್ಲಿಷ್ ಅದು. ಹದಿಮೂರನೆ ಶತಮಾನದವರ ಇಂಗ್ಲಿಷನ್ನು ಓದಬೇಕು. ಹದಿನೆಂಟನೆ ಶತಮಾನದವರದ್ದನ್ನು ಓದಬೇಕು. ಅಮೆರಿಕಾ–ಆಸ್ಟ್ರೇಲಿಯಾಗಳಲ್ಲಿರುವವರು ಬರೆದಿರುವ ಇಂಗ್ಲಿಷನ್ನು ಕೂಡ ಓದಬೇಕು. ವಿದ್ಯಾರ್ಥಿಗಳಾದ ನಮಗಿರಲಿ, ಇಂಗ್ಲಿಷ್ ಪ್ರೊಫೆಸರ್ಗಳೇ ಪಾಠಮಾಡಲು ತಡಬಡಾಯಿಸುತ್ತಿದ್ದರು. ಅವರಾದರೂ ಏನು ಮಾಡಿ ಯಾರು ನಮ್ಮ ಇಡೀಪಟ್ಟಣದಲ್ಲಿದ್ದ ಎಲ್ಲ ನಿಘಂಟಗಳನ್ನು ಹುಡುಕಿದರೂ, ಪಠ್ಯದಲ್ಲಿದ್ದ ಇಂಗ್ಲಿಷ್

ಪದಗಳಿಗೆ ಅರ್ಥ, ಸಂದರ್ಭ ಸಿಗುತ್ತಿರಲಿಲ್ಲ. ಮೇಷ್ಟರು ಕೂಡ ತಮ್ಮ ಅಸಹಾಯಕತೆಯನ್ನು ತೋಡಿಕೊಂಡು ನರಸಯ್ಯನವರಿಗೆ ಶಾಪ ಹಾಕುತ್ತಿದ್ದರು. ಹಾಗೆಂದು ನಾವು ಸುಮ್ಮನೆ ಬಿಡಲಾಗುತ್ತದೆಯೇ? ನಿಮ್ಮ ಕಷ್ಟ ಏನೇ ಇದ್ದರೂ ನಿಮಗೆ ಸಂಬಳ ಸಿಗುತ್ತೆ, ಬಡ್ತಿ ಸಿಗುತ್ತದೆ, ಪಿಂಚಣಿ ಸಿಗುತ್ತೆ, ಸುಖವಾಗಿರುತ್ತೀರಿ ಎಂದು ಆಸೆ ತೋರಿಸುತ್ತಿದ್ದರು. ಹಾಗಾಗಿ ಈ ಇಂಗ್ಲಿಷನ್ನು ನಮಗೆ ಕನ್ನಡದಲ್ಲಿ ಪಾಠ ಮಾಡಿ, ಪರೀಕ್ಷೆಗೆ ಯಾವ ಪ್ರಶ್ನೆಗಳು ಬರುತ್ತವೆ, ಅಂತಹ ಪ್ರಶ್ನೆಗಳಿಗೆಲ್ಲ ಉತ್ತರ ಬರೆಸಿ, ತಪ್ಪದೆ ಅದೇ ಪ್ರಶ್ನೆಗಳು ಬರಬೇಕು ಎಂದು ಇದಕ್ಕಾಗಿ ನಾಲ್ಕು ಕಾಸು ಖರ್ಚಾದರೂ ಚಿಂತೆಯಿಲ್ಲ, ಮೈಸೂರಿಗೆ ಹೋಗಿ ನರಸಯ್ಯನವರ ಮನೆ ಸುತ್ತಮುತ್ತ ಪತ್ತೇದಾರರನ್ನು ನೇಮಿಸಿ, ಪ್ರಶ್ನೆಪತ್ರಿಕೆಗಳು ಅಚ್ಚಾಗುವ ಮುದ್ರಣಾಲಯದ ಸಿಬ್ಬಂದಿಗೆ ಲಂಚಕೊಡಿ, ಒಟ್ಟಿನಲ್ಲಿ ಪ್ರಶ್ನೆಗಳು ಮುಂಚಿತವಾಗಿ ನಮಗೆ ಸಿಗಬೇಕು.

ಮೇಷ್ಟರುಗಳಿಗೆ ನಮ್ಮ ಬಗ್ಗೆ ಪ್ರೀತಿ ಮತ್ತು ಅನುಕಂಪವಿತ್ತು. ಆದರೆ ರಾಮನರಸಯ್ಯನವರ ಬಗ್ಗೆ ಭಯವೂ ಇತ್ತು. ಸ್ವತಃ ನೆಹರೂರವರೇ ಅವರಿಗೆ ಗೊತ್ತೆಂದು, ಅವರು ಬರೆದ ಇಂಗ್ಲಿಷ್ ಪುಸ್ತಕಗಳನ್ನು ಕೂಡ ಮುದ್ರಣಾಲಯಕ್ಕೆ ಹೋಗುವ ಮುನ್ನ ಇವರು ಪರಶೀಲಿಸುತ್ತಾರೆಂದು, ಹಾಗೆಂದು ನೆಹರೂರವರೇ ಲೇಖಕರ ಮಾತುಗಳಲ್ಲಿ ಬರೆದು ನರಸಯ್ಯನವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆಂದು ಹೇಳುತ್ತಿದ್ದರು. ಇದೆಲ್ಲ ಕಟ್ಟುಕತೆಯಿರಬೇಕು ಎಂದು ವಾದಿಸಿದಾಗ, ಇಲ್ಲ, ಗ್ರಂಥಾಲಯಕ್ಕೆ ಹೋಗಿ ನೆಹರೂ ಪುಸ್ತಕಗಳ ಮೊದಲಪುಟಗಳನ್ನು ನೋಡಿ ಎಂದು ಬುದ್ಧಿಮಾತು ಹೇಳುತ್ತಿದ್ದರು. ಹಾಗೆ ಮಾಡಿದಾಗ ಮೇಷ್ಟರುಗಳು ಹೇಳುತ್ತಿದುದೇ ನಿಜವಾಗಿರುತ್ತಿತ್ತು. ಮೇಷ್ಟರುಗಳಿಗೆ ಇದ್ದ ಭಯ ಸಕಾರಣವಾದುದಾಗಿತ್ತು. ಏಕೆಂದರೆ, ಒಮ್ಮೆ ನೆಹರೂ ಮೈಸೂರಿಗೆ ಚುನಾವಣಾ ಭಾಷಣಕ್ಕೆ ಬಂದಿದ್ದರಂತೆ. ಭಾಷಣ ಮುಗಿಸಿ ಲಲಿತ್ ಮಹಲ್ ಅರಮನೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರಂತೆ. ಅವರನ್ನು ಭೇಟಿ ಮಾಡಲು ಹನುಮಂತಯ್ಯನವರಂತಹ ಹನುಮಂತಯ್ಯನವರು, ಸಾಹುಕಾರ್ ಚೆನ್ನಯ್ಯನವರಂತಹ ಚೆನ್ನಯ್ಯನವರೇ ಗಂಟೆಗಟ್ಟಲೆ ಕಾದು ಕುಳಿತಿದ್ದರಂತೆ. ಆಗ ಈ ಕ್ಲೋಸ್ಪೇಟೆನರಸಯ್ಯ ಎಲ್ಲಿಂದಲೋ ಅವತರಿಸಿ, ಇವರ್ಯಾರಿಗೂ ಕ್ಯಾರೆ ಅನ್ನದೇ ನೇರವಾಗಿ ನೆಹರೂಮಲಗಿದ್ದ ರೂಮಿಗೆ ಹೋಗಿ ಗಂಟೆಗಟ್ಟಲೆ ಮಾತನಾಡುತ್ತಾ ಕುಳಿತಿದ್ದರಂತೆ. ಅಷ್ಟೊಂದು ಪವರ್ಫುಲ್ ಆದ ಮನುಷ್ಯನಿಗೆ, ಕೇವಲ ಲೆಕ್ಚರ್ಗಳಾದವರು ವಿರೋಧಿಸೋದುಂಟೆ. ಇದನ್ನೆಲ್ಲ ನಾನು ಬೇಗ್ ಎನ್ನುವಇಂಗ್ಲಿಷ್ ಮೇಷ್ಟರ ಹತ್ತಿರ ಖುದ್ದಾಗಿ ಕೇಳಿ ತಿಳಿದಿದ್ದೆ. ಬೇಗ್ ಮೇಷ್ಟರು ಇನ್ನೂ ಒಂದು ಭಯ ಬೀಳುವ ಸಂಗತಿ ಹೇಳಿದರು. ನೆಹರೂ ಮಾತು ಬಿಡು, ನರಸಯ್ಯ ಇಂಗ್ಲೆಂಡಿನಲ್ಲಿ ಓದುತ್ತಿದ್ದಾಗ ಸ್ವತಃ ಎಲಿಯಟ್ರೆ ಪಾಠ ಮಾಡುತ್ತಿದ್ದರಂತೆ. ಪಾಠಮಾಡುವಾಗ ನರಸಯ್ಯನ ಮುಖ ನೋಡಿದರೆ, ಅವರಿಗೇ ನಡುಕ ಹುಟ್ಟುತ್ತಿತ್ತಂತೆ. ಪ್ರತ್ಯುತ್ಪನ್ನಮತಿಯಾದ ನರಸಯ್ಯ ಯಾವಾಗ, ಯಾವ ವಿಷಯದಲ್ಲಿ, ಯಾವ ಪ್ರಶ್ನೆ ಕೇಳಿ ಬಿಡುತ್ತಾನೋ ಎನ್ನುವ ಭಯವಂತೆ. ಎಲಿಯಟ್ರ ಈ ಮಾತು ಕೇಳಿದ ನನಗೂ ಕೂಡ ಭಯವಾಗಿತ್ತು. ಹೇಗೋ ಕಷ್ಟಪಟ್ಟುಪಾಸ್ ಮಾಡಿಕೊಂಡು ಈ ನರಸಯ್ಯನ ಸಹವಾಸದಿಂದ ದೂರವಾದರೆ ಸಾಕು ಎಂದು ಮನಸ್ಸಿನಲ್ಲೇ ಪ್ರಾರ್ಥಿಸುತ್ತಿದ್ದೆ.

[ಮುಂದೆ ತಿಳಿದಂತೆ, ಇದೆಲ್ಲ ದಂತಕತೆಯಾಗಿತ್ತು. ಎಲಿಯಟ್ ಎಂದೂ ಲಂಡನ್ನಲ್ಲಿ ಪಾಠ ಮಾಡಿರಲಿಲ್ಲವಂತೆ. ನರಸಯ್ಯ ಇಂಗ್ಲೆಂಡ್ಗೆ ಹೋಗುವ

ಎಷ್ಟೋವರ್ಷಗಳ ಮುಂಚೆ ಅವರು ತೀರಿಹೋಗಿದ್ದರಂತೆ. ಅದೂ ಅಲ್ಲದೆ, ಬೇಗ್ ಮೇಷ್ಟರು ಹೇಳಿದ್ದುದು ಟಿ.ಎಸ್. ಎಲಿಯಟ್ ಬಗ್ಗೆ. ನನಗೆ ಗೊತ್ತಿದ್ದುದು ಜಾರ್ಜ್ ಎಲಿಯಟ್ ಮಾತ್ರ. ಏಕೆಂದರೆ, ಆಕೆಯ Silas Marner ನಮಗೆ ಪಠ್ಯವಾಗಿತ್ತು. ತುಂಬಾ ದಿನ George Eliot ಎನ್ನುವುದು ಪುರುಷಲೇಖಕನ ಹೆಸರು ಎಂದು ತಿಳಿದಿದ್ದ ಪ್ರಭೃತಿ ನಾನು].

ನರಸಯ್ಯನವರಿಗೆ ನಡುಗಿಕೊಂಡೇ ಇಡೀ ಭೂಮಂಡಲದ ವ್ಯಾಪಾರ ನಡೆಯುತ್ತಿದ್ದರೂ ಯುವಕರ ಮೊಂಡು ಧೈರ್ಯ ಯಾವಾಗ ಯಾವ ದಿಕ್ಕಿನಲ್ಲಿ ಹರಿಯುತ್ತದೆ ಎಂದು ಹೇಳುವುದು ಯಾರಿಗೆ ಸಾಧ್ಯ? ನಮ್ಮ ನೆರವಿಗೆ ಬಂದವನು ಹರ್ಬರ್ಟ್ ರೀಡ್. ಓದುವ ರೀತಿ ಕುರಿತು ಆತನ ಪ್ರಬಂಧವೊಂದು ಪಠ್ಯದಲ್ಲಿತ್ತು. ಒಂದು ಪ್ಯಾರಾ ಇರಲಿ, ನಾಲ್ಕು ವಾಕ್ಯ ಓದಿದರೆ ಸಾಕು ತಲೆ ಸುತ್ತು ಬಂದು ವಾಂತಿಯಾಗುತ್ತಿತ್ತು, ಕಣ್ಣು ಮಂಜಾಗುತ್ತಿತ್ತು. ನಮಗೆ ಮಾತ್ರವಲ್ಲ, ಮೇಷ್ಟರುಗಳಿಗೂ ಕೂಡ ಹೀಗಾಗುತ್ತಿತ್ತು. ಹರ್ಬರ್ಟ್ ರೀಡ್ ಎನ್ನುವವನ ಜಾತಿಗೇ ಸೇರಿದ ಇನ್ನೂ ಕೆಲವರ ಪ್ರಬಂಧಗಳು ಪಠ್ಯದಲ್ಲಿತ್ತು. ಇದನ್ನು ಓದುವುದುಹೇಗೆ, ಇದರ ಬಗ್ಗೆ ಬರುವ ಪ್ರಶ್ನೆಗಳಿಗೆ ಉತ್ತರ ಬರೆಯುವುದು ಹೇಗೆ? ನಮ್ಮಂಥ ಪಾಪಿಗಳು ಜಗತ್ತಿನಲ್ಲಿ ಬೇರೆಲ್ಲೂ ಸಿಗುವುದಿಲ್ಲ. ಈ ನರಸಯ್ಯ ಎಲ್ಲಿಂದ ನಮಗೆ ಗಂಟು ಬಿದ್ದ?

ಕ್ಲೋಸ್ಪೇಟೆಯಿಂದ ಹುಡುಗರು ಪ್ರತಿದಿನ ರೈಲಿನಲ್ಲಿ ನಮ್ಮ ಕಾಲೇಜಿಗೆ ಬರುತ್ತಿದ್ದರು. ಬೆಂಗಳೂರೇ ಕ್ಲೋಸ್ಪೇಟೆಗೆ ಹತ್ತಿರವಾಗಿದ್ದರೂ, ಕಾಲೇಜಿನ ಸಮಯಕ್ಕೂ ರೈಲಿನ ಸಮಯಕ್ಕೂ ಹೊಂದಾಣಿಕೆಯಾಗುತ್ತಿರಲಿಲ್ಲ. ಅದೂ ಅಲ್ಲದೆ, ಬೆಂಗಳೂರು ವಿಶ್ವವಿದ್ಯಾಲಯ ಅದೇತಾನೇ ಶುರುವಾಗಿ ಇನ್ನೂ ಒಂದು ಸ್ಟಾಂಡರ್ಡ್‌ಗೆ ಬಂದಿರಲಿಲ್ಲ. ನರಸಯ್ಯನವರ ಮೇಲೆ ಇದ್ದ ಕ್ರೋಧ, ಅಸಹನೆಯೆಲ್ಲ ಕ್ಲೋಸ್ಪೇಟೆ ವಿದ್ಯಾರ್ಥಿಗಳ ವಿರುದ್ಧ ತಿರುಗಿತು. ಪಾಪ, ಅವರಾದರೂ ಏನು ಮಾಡುವರು? ನರಸಯ್ಯನವರ ಮನೆತನದಲ್ಲಿ ಈತನೊಬ್ಬನೇ ಪೊಗರಿನವ್ಯಕ್ತಿಯೆಂದು, ಮೆಟ್ರಿಕ್ನಿಂದಲೂ ಎಲ್ಲ ಪರೀಕ್ಷೆಗಳಲ್ಲೂ ಫಸ್ಟ್ ಕ್ಲಾಸ್ ಬರುತ್ತಿದ್ದುದರಿಂದ, ಈ ರೀತಿಯ ಪೊಗರೆಂದು, ಹನುಂತಯ್ಯ ಮುಂತಾದವರ ಕಣ್ಣಿಗೆ ಬಿದ್ದು, ಇಂಗ್ಲೆಂಡಿಗೆ ಓದಲು ಹೋದವನು ಹಾಳಾಗಿ ಯಕ್ಕುಟ್ಟಿಹೋದನೆಂದು, ಲೇವಾದೇವಿ ಮಾಡುವ, ನಾಟಿ ಔಷಧಿ ಕೊಡುವ, ಪೆಟ್ಟಿ ಅಂಗಡಿ ಇಟ್ಟುಕೊಂಡಿರುವ ನರಸಯ್ಯನ ಉಳಿದ ಸೋದರರೆಲ್ಲ ಜನಾನುರಾಗಿಗಳೆಂದು ತಿಳಿದುಬಂತು. ಇಷ್ಟೆಲ್ಲ ಮಾಹಿತಿಗಳನ್ನು ಸಂಗ್ರಹಿಸಿದ್ದ ಕ್ಲೋಸ್ಪೇಟೆ ಗೆಳೆಯರು ನಮ್ಮಗುಂಪಿಗೇ ಸೇರಿಕೊಂಡರು.

ನಮ್ಮ ಗುಸುಗುಸು, ಪ್ರತಿರೋಧ, ದಿನಕಳೆದಂತೆ, ವಿಶ್ವವಿದ್ಯಾಲಯಕ್ಕೂ ತಲುಪಿ, ಹರ್ಬರ್ಟ್ ರೀಡ್ ಮತ್ತು ಅವನಂಥವರ ನಿಬಂಧಗಳನ್ನು ಓದಿದರೆಸಾಕೆಂದು, ಆ ನಿಬಂಧಗಳ ಬಗ್ಗೆ ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ಕೇಳುವುದಿಲ್ಲವೆಂದು ವಿಶ್ವವಿದ್ಯಾಲಯ ಆದೇಶ ಹೊರಡಿಸಿತು. ಇದೇ ನಮಗೆ ದಿಗ್ವಿಜಯವಾಗಿತ್ತು. ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ಕೇಳದಿದ್ದ ಮೇಲೆ, ತರಗತಿಗಳಲ್ಲಿ ಅಂತಹ ನಿಬಂಧಗಳನ್ನು ಕುರಿತು ಪಾಠ ಮಾಡುವುದಾದರೂ ಏಕೆ ಎಂದು ವಾದಮಾಡಿ, ಮುಷ್ಕರ ಹೂಡಿ, ಕಷ್ಟಕರವಾದ ಪ್ರಬಂಧಗಳಿಂದ ತಪ್ಪಿಸಿಕೊಂಡೆವು.

ಇಷ್ಟಕ್ಕೇ ನಮಗೆ ನರಸಯ್ಯನವರು, ಅವರ ಪಠ್ಯದ ಬಗ್ಗೆ ಇದ್ದ ಪ್ರತಿರೋಧ

ಯಾವುದೇ ರೀತಿಯಲ್ಲೂ ಕಡಿಮೆ ಆಗುತ್ತಿರಲಿಲ್ಲ. ಸಾಹುಕಾರರ ಮಕ್ಕಳೆಲ್ಲ ಇಂಗ್ಲಿಷ್ನಲ್ಲಿ ಮನೆಪಾಠ ಹೇಳಿಸಿಕೊಳ್ಳಲು ಮೈಸೂರಿಗೆ ವಾರಕ್ಕೆ ಎರಡುಸಲ ಹೋಗಿಬರುತ್ತಿದ್ದರು. ಅವರುಗಳು ತರುತ್ತಿದ್ದ ಸುದ್ದಿಪ್ರಕಾರ, ಮಂಡ್ಯ, ಮದ್ದೂರುಗಳ ಕಾಲೇಜುಗಳ ಮೇಷ್ಟರಿಗೆ ಮಾತ್ರವಲ್ಲ, ಮಹಾರಾಜ, ಮಹಾರಾಣಿ, ಯುವರಾಜ ಕಾಲೇಜುಗಳಲ್ಲಿಇಂಗ್ಲಿಷ್ ಪಾಠಮಾಡಿಕೊಂಡು ಗುಟ್ಟೋಗುಟ್ಟಾಗಿ ಮನೆಪಾಠಹೇಳಿ ಸಾವಿರಾರು ರೂಪಾಯಿ ಕಳ್ಳಸಂಪಾದನೆ ಮಾಡುತ್ತಿದ್ದ ಮೇಷ್ಟರುಗಳು ಕೂಡ ನರಸಯ್ಯನವರು ಮತ್ತು ಅವರ ಇಂಗ್ಲಿಷ್ ಬಗ್ಗೆ ಒಂದು ರೀತಿಯ ಭಯದಿಂದಲೇ ವರ್ತಿಸುತ್ತಿದ್ದರು. ದೇವರಾಜ ಮಾರ್ಕೆಟ್, ಚಾಮುಂಡಿ ತಪ್ಪಲು, ನಂಜುಮಳಿಗೆ ಹತ್ತಿರವೆಲ್ಲ ಕಾಣಿಸಿಕೊಳ್ಳುತ್ತಿದ್ದ ನರಸಯ್ಯನವರು ಎಲ್ಲ ಕಡೆಯೂ ಸೂಟು-ಬೂಟು, ಟೈಸಮೇತವೇ ಕಾಣಿಸಿಕೊಳ್ಳುತ್ತಾರೆಂದು, ಅಷ್ಟು ಸುಲಭಕ್ಕೆ ಯಾರಜೊತೆಯೂ ಮಾತಾಡುವ ಪೈಕಿಯಲ್ಲವೆಂದು ತಿಳಿದ ಮೇಲಂತೂ ಭಯ ಮತ್ತು ನಿಗೂಢತೆಯ ಭಾವನೆ ಎರಡೂ ಹೆಚ್ಚಾಗುತ್ತಿತ್ತು.

ನಂತರ ಮೂರು ನಾಲ್ಕುವರ್ಷದಲ್ಲೇ ಮೈಸೂರಿಗೆ ಓದಲು ಹೋಗಿ ನರಸಯ್ಯನವರನ್ನು ದಿನಾ ನೋಡುವ ಅವಕಾಶ ಸಿಕ್ಕಿತು. ಸೂಟ-ಬೂಟು, ಟೈ ನಿಜವಾದರೂ, ಯಾವಾಗಲೂ ನರಸಯ್ಯನವರ ಮುಖದಲ್ಲಿ ವಿಶಾಲವಾದ ನಗೆಯಿರುತ್ತಿತ್ತು. ಯಾವಾಗಲೂ ಚುರುಕಾಗಿ ಮಾನಸಗಂಗೋತ್ರಿಯ ಕ್ಯಾಂಪಸ್ ತುಂಬಾ ಓಡಾಡುತ್ತಿದ್ದರು. ಬೇರೆ ವಿಭಾಗಗಳ ಅಧ್ಯಾಪಕರು, ವಿಶ್ವವಿದ್ಯಾಲಯದ ಸಿಬ್ಬಂದಿ, ತೋಟದ ಕೆಲಸಗಾರರು, ಎಲ್ಲರ ಹತ್ತಿರವೂ ಮಾತುಕತೆ. ಗ್ರಂಥಾಲಯದ ಮೂಲೆಮೂಲೆಯಲ್ಲೂ ಸಿಗುತ್ತಿದ್ದರು.

ಒಂದು ಸಂಜೆ ನಮ್ಮ ಹಾಸ್ಟೆಲ್ ಎದುರಿಗೇ ಅವರ ಕಾರು ಕೆಟ್ಟುಹೋಯಿತು. ಮೆಕ್ಯಾನಿಕ್ಗೆ ಕಾಯುತ್ತಾ, ಟೈ ಸರಿಪಡಿಸಿಕೊಳ್ಳುತ್ತಾ ನಿಂತಿದ್ದರು. ನಾನೇ ಹೋಗಿ ಧ್ವನಿಯನ್ನು ತುಂಬಾ ಸೊಫೆಸ್ಟಿಕೇಟ್ ಮಾಡಿಕೊಂಡು ಗುಡ್ ಇವ್ನಿಂಗ್ ಸರ್ ಎಂದು ಹೇಳಿದೆ. ಆಫ್ ಕೋರ್ಸ್, ಇಂಗ್ಲಿಷ್ನಲ್ಲೇ ಮಾತನಾಡಿಸಿದರು. ಆರ್ ಯು ಗೋಯಿಂಗ್ ಫಾರ್ ಆನ್ ಇವ್ನಿಂಗ್ ಸ್ಟ್ರಾಲ್? ಎಂದರು. ಸ್ಟ್ರಾಲ್ ಪದದ ಅರ್ಥವನ್ನು ಆಮೇಲೆ ನಿಘಂಟು ನೋಡಿ ತಿಳಿದುಕೊಂಡೆ. ಸ್ಕೈ, ವಾಸ್ಟ್, ಸನ್‌ಸೆಟ್ ಇಂತಹ ಪದಗಳನ್ನು ಅವರು ನನ್ನೊಡನೆ ಆಡಿದ ಎರಡುಮೂರು ವಾಕ್ಯಗಳ ಮಾತಿನಲ್ಲಿ ಪದೇಪದೇ ಪ್ರಸ್ತಾಪವಾಯಿತು. ಆ ಪದಗಳನ್ನು ಅವರು ಉಚ್ಚರಿಸಿದ ರಾಜಠೀವಿ ಈಗಲೂ ಕಣ್ಣುಮುಂದೆ ಕಟ್ಟಿದಂತಿದೆ, ಕಿವಿಯಲ್ಲಿ ರಿಂಗಣಗೊಳ್ಳುತ್ತದೆ. ಸಂಜೆ-ರಾತ್ರಿಯೆಲ್ಲಾ ನಾನು ಒಂದು ಉನ್ಮತ್ತ ಸ್ಥಿತಿಯಲ್ಲಿದ್ದೆ. ಪುನೀತಭಾವ ಕೂಡ. ನನಗೆ ತಿಳಿದದ್ದೆಂದರೆ, ನರಸಯ್ಯನವರ ಬಗ್ಗೆ ನನಗೆ ಯಾವ ರೀತಿಯ ದ್ವೇಷವೂ ಇರಲಿಲ್ಲ. ಆ ಸಂಜೆ ಅವರ ಜೊತೆ ಮಾತನಾಡಿದ ಮೇಲೆ, ಆತ್ಮೀಯ ಭಾವನೆ ಮೂಡಿ ಬಂತು. ಮಾನಸಗಂಗೋತ್ರಿಗೆ ಬರುತ್ತಿದ್ದ ಬಹುಪಾಲು ಗಣ್ಯರು, ವಿದೇಶೀಯರೆಲ್ಲರೂ ನರಸಯ್ಯನವರನ್ನು ಖಂಡಿತವಾಗಿ ಭೇಟಿ ಮಾಡುತ್ತಿದ್ದರು. ಹಾಮಾನಾಯಕರು ಕೂಡ ಕ್ಯಾಂಪಸ್ ತುಂಬಾ ಓಡಾಡುತ್ತಿದ್ದರು. ಅವರು ಕೂಡ ತುಂಬಾ ಪ್ರಭಾವಶಾಲಿಗಳು ಎಂದು ಗೊತ್ತಿದ್ದರೂ, ನಮ್ಮ ಇಂಗ್ಲಿಷ್ ನರಸಯ್ಯನವರೆಲ್ಲಿ, ಕನ್ನಡದ ಮಾನಪ್ಪನಾಯಕರೆಲ್ಲಿ; ಎಲ್ಲಿಂದ ಎಲ್ಲಿಗೆ ಹೋಲಿಕೆ ಎಂಬ ಭಾವನೆ ಬರುತ್ತಿತ್ತು.

ಮುಂದೆ ನಾನು, ನನ್ನ ಸಹಪಾಠಿಗಳು, ನನ್ನ ತಲೆಮಾರಿನವರೆಲ್ಲ ಕರ್ನಾಟಕದ, ಭಾರತದ ಬೇರೆಬೇರೆ ಭಾಗಗಳ ನಮ್ಮನಮ್ಮ ಮನೆಗಳಲ್ಲಿ ಕ್ಲೋಸ್ಪೇಟೆನರಸಯ್ಯನವರ ಪಾತ್ರವನ್ನು ವಹಿಸಲು ಪ್ರಾರಂಭಿಸಿದೆವು. ಅರ್ಥವಾಗಲೀ, ಅರ್ಥವಾಗದೇ ಇರಲಿ, ಪರೀಕ್ಷೆಯಲ್ಲಿ ಪ್ರಶ್ನೆಗಳು ಬರಲಿ, ಬರದೇ ಇರಲಿ, ಮಕ್ಕಳು ಇಂಗ್ಲಿಷ್ ಪತ್ರಿಕೆ, ಪುಸ್ತಕಗಳನ್ನು ಓದಲೇಬೇಕೆಂದು ದುಂಬಾಲು ಬೀಳುತ್ತಿದ್ದೆವು, ಆಗ್ರಹಪಡಿಸುತ್ತಿದ್ದೆವು. ಒಂದಲ್ಲ, ಎರಡಲ್ಲ, ಎಂದು ನಾಲ್ಕಾರು ಇಂಗ್ಲಿಷ್ ನಿಘಂಟುಗಳನ್ನು ಮನೆಗೆ ತಂದಿಟ್ಟುಕೊಂಡು ಮಕ್ಕಳ ಮುಂದೆ ಕುಳಿತು ಶಬ್ದಕ್ಕೆ ಅರ್ಥಗಳನ್ನು ಹುಡುಕುತ್ತಿದ್ದಾಗ, ಪುಟಪುಟಗಳಲ್ಲೂ ನರಸಯ್ಯನವರ ನಗುವ ಮುಖದ ಫೋಟೋನೇ ಕಾಣುತ್ತಿತ್ತು; ನನಗೆ ಗೊತ್ತಿತ್ತು, ಇದೆಲ್ಲ ಹೀಗೇ ಆಗುತ್ತೇ ಅಂತಾ. ಅದಕ್ಕೇ ನೀವೆಲ್ಲ ಆ ಕಾಲದಲ್ಲಿ ಎಷ್ಟೇ ತರಲೆ, ಎಷ್ಟೇ ಜುಲುಮೆ ಮಾಡಿದರೂ ನನ್ನ ಕೆಲಸವನ್ನು ನಾನು ಮಾಡುತ್ತಾ ಹೋದೆ. ಇಂಗ್ಲಿಷ್ ನನ್ನ ಕೈಬಿಡಲಿಲ್ಲ. ಬಲವಂತದಿಂದ ಕಲಿತ ನಿಮ್ಮನ್ನು ಕೂಡ ಇಷ್ಟು ಮುಂದೆ ತಂದಿದೆ. ಮಕ್ಕಳಿಗಾದರೂ ಈಗಲೇ ಇಷ್ಟು ಚೆನ್ನಾಗಿ ಇಂಗ್ಲಿಷ್ ಕಲಿಸುತ್ತಿದ್ದೀರಲ್ಲ, ಅದೇ ಸಂತೋಷ ಎಂದು ಹೇಳುವಂತಿತ್ತು. ■

---

## ಕ್ರಿಕೆಟಾವಳಿ

**ಸುಕೇಶವ**

( ನೀರದೇಕೆ ಹರಿವುದು – ಕುವೆಂಪು ಕ್ಷಮೆ ಕೋರಿ )

ಸಿಕ್ಸರೇಕೆ ಹೊಡೆವರು
ಹೊಡೆವರು
ಸಿಕ್ಸರ್ ಹೊಡೆಯಲೆಂದೇ ಬ್ಯಾಟ್ ಬೀಸಲಿಲ್ಲ
ಬ್ಯಾಟ್ ಬೀಸೆ ಸಿಕ್ಸರ್ ಹೋದುದಷ್ಟೆ ಬೇರೆಯಲ್ಲ

ಕ್ಯಾಚನೇಕೆ ಕೊಡುವರು
ಕೊಡುವರು
ಕ್ಯಾಚ್ ಕೊಡಲೆಂದೇ ಬ್ಯಾಟ್ ಬೀಸಲಿಲ್ಲ
ಬ್ಯಾಟ್ ಬೀಸೆ ಕ್ಯಾಚ್ ಹೋದುದಷ್ಟೆ ಬೇರೆಯಲ್ಲ

ವಿಕಟನೇಕೆ ಕೆಡವುವರು
ಕೆಡವುವರು
ವಿಕೆಟ್ ಕೆಡವಲೆಂದೇ ಬಾಲ್ ತೂರಲಿಲ್ಲ
ತೂರೆ ವಿಕೆಟ್ ಬಿದ್ದುದಷ್ಟೆ ಬೇರೆಯಲ್ಲ

# ನಿದ್ರಾಪಹರಣ

**ಗಾಯತ್ರಿ ಮೂರ್ತಿ**

ಹಣ, ಆಸ್ತಿ, ಚಿನ್ನದ ಆಭರಣಗಳು, ಬೆಳ್ಳಿ ಸಾಮಾನುಗಳು ಮುಂತಾದವುಗಳ ಅಪಹರಣ, ಹಣಕ್ಕಾಗಿ ಮನುಷ್ಯರ ಅಪಹರಣ ಇವೆಲ್ಲ ಎಲ್ಲರಿಗೂ ತಿಳಿದದ್ದೇ. ಪೌರಾಣಿಕವಾಗಿ ಹೇಳುವುದಾದರೆ ದ್ರೌಪದಿಯ ವಸ್ತ್ರಾಪಹರಣ, ಸೀತಾಪಹರಣಗಳು ಮಹಾಭಾರತ, ರಾಮಾಯಣಗಳಿಗೆ ಮಹಾನ್ ತಿರುವು ನೀಡಿದ ಪ್ರಸಂಗಗಳು ಎನ್ನುವುದರಲ್ಲಿ ಅತಿಶಯವೇನಿಲ್ಲ. ಆದರೆ ನಿದ್ರಾಪಹರಣ? ಎಲ್ಲಿಯೂ ಈ ಪದವನ್ನೇ ಕೇಳಿಲ್ಲವಲ್ಲ ಎಂದು ನೀವು ಹುಬ್ಬು ಹಾರಿಸುತ್ತಿದ್ದೀರಾ? ಈ ಪದವನ್ನು ಟಂಕಿಸಿದ್ದು ನಾನೇ ಎಂದು ನನ್ನ ಭಾವನೆ!!!

ಈ ಪದ ಯಾವಾಗ, ನನಗೆ ಏಕೆ ಹೊಳೆದಿದ್ದೆಂದು ಕೇಳಿದಿರಾ? ಹೀಗೇ, ಒಂದು ರಾತ್ರಿ ನಿದ್ದೆ ಬಾರದೆ ಹಾಸಿಗೆಯಲ್ಲಿ ಹೊರಳಾಡುತ್ತಿದ್ದಾಗ ನನಗೆ ನಿದ್ದೆ ಬಾರದಿರಲು ಕಾರಣವೇನು ಎಂದು ಯೋಚಿಸುತ್ತಿದ್ದೆ.ಆಗ ಬುದ್ಧನಿಗೆ ಜ್ಞಾನೋದಯವಾದಂತೆ ಥಟ್ಟನೆ ಹೊಳೆದ ಪದ ಇದು. ದಿಂಬಿನ ಮೇಲೆ ಇಟ್ಟ ಕೂಡಲೇ ನಿದ್ದೆ ಬರುತ್ತಿದ್ದ ನನಗೆ ಹೀಗೇಕಾಯಿತು? ನನ್ನ ನಿದ್ರಾಪಹರಣ ಮಾಡಿದ್ದು ಯಾರು? ಕಾರಣ ಏನು ಎಂದು ಚಿಂತಿಸುತ್ತಾ ಮಲಗಿದವಳಿಗೆ ಮಧ್ಯಾಹ್ನ ಗಡದ್ದಾಗಿ ಒಂದು ಗಂಟೆಗಿಂತಲೂ ಹೆಚ್ಚು ಕಾಲ ನಿದ್ದೆ ಮಾಡಿದ್ದೇ ಕಾರಣ ಎಂದು ಥಟ್ಟನೆ ಹೊಳೆಯಿತು. ಅಂದರೆ, ನಿದ್ದೆಯೇ 'ವಜ್ರಂ ವಜ್ರೇನ ಛಿದ್ಯತೆ' ಎಂಬಂತೆ ನಿದ್ದೆಯೇ ನನ್ನ ನಿದ್ದೆಯನ್ನು ಅಪಹರಿಸಿತ್ತು! ಇದೆಂತಹ ವಿಪರ್ಯಾಸ! ಇದಕ್ಕೆ ಪರಿಹಾರ? ಮಧ್ಯಾಹ್ನದ ನಿದ್ದೆಯನ್ನು ತ್ಯಜಿಸುವುದು! ಶಾಂತಂ ಪಾಪಂ! ಎಲ್ಲಾದರೂ ಉಂಟೆ? ಅದೆಷ್ಟೋ ವರ್ಷಗಳಿಂದ ಚಾಚೂ ತಪ್ಪದಂತೆ ಪ್ರತಿದಿನ ಮಧ್ಯಾಹ್ನದ ನಿದ್ದೆಯನ್ನು ಪವಿತ್ರವಾದ ಸಂಪ್ರದಾಯವೋ ಎಂಬಂತೆ ಬೆಳೆಸಿಕೊಂಡು ಬಂದಿರುವ ನನ್ನ ಅಭ್ಯಾಸ (ದುರಭ್ಯಾಸ)ವನ್ನು ತ್ಯಜಿಸುವುದುಂಟೇ? ಖಂಡಿತಾ ಸಾಧ್ಯವಿಲ್ಲ, ಸಾಧ್ಯವಿಲ್ಲಾ, ಸಾಧ್ಯವಿಲ್ಲ, ಅಷ್ಟೇ, ಎಂದು ನನ್ನ ಮಧ್ಯಾಹ್ನದ ನಿದ್ದೆಯ ಪರ ಖಡಕ್ಕಾಗಿ (ಮನಸ್ಸಿನಲ್ಲೇ) ವಾದಿಸಿ ನಿರ್ಧಾರ ಕೈಕೊಂಡಿದ್ದಾಯಿತೂನ್ನಿ. ಆದರೆ, ಒಂದು ಕಾಂಪ್ರೊಮೈಸ್ ಅಂತೂ ಮಾಡಿಕೊಂಡೆ, ಇನ್ನು ಮೇಲೆ ಮಧ್ಯಾಹ್ನ ಅರ್ಧ ಗಂಟೆಗಿಂತ ಹೆಚ್ಚು ನಿದ್ದೆ ಮಾಡಬಾರದೂಂತ. ಅದಕ್ಕಾಗಿ ಅಲಾರಂ ಇಟ್ಟು ಮಲಗಲು ಶುರು ಮಾಡಿದೆ. ನನ್ನ ಗಂಡ, ಮಕ್ಕಳು ಹಾಸ್ಯ ಮಾಡಿದರು. ಅದಕ್ಕೆಲ್ಲಾ ಸೊಪ್ಪು ಹಾಕುತ್ತ ಕೂರಲು ಸಾಧ್ಯವೇ? ನಾನೂ ಅವರೊಂದಿಗೆ ನಕ್ಕು ಸುಮ್ಮನಾದೆ. ಆದರೆ ಮಧ್ಯಾಹ್ನದ ನಿದ್ದೆಯನ್ನಾಗಲೀ, ಅಲಾರಂ ಇಟ್ಟು ಮಲಗುವುದಾಗಲೀ ಬಿಡಲಿಲ್ಲ, ಬಿಡುವುದೂ ಇಲ್ಲ.

ನನ್ನ ವಿಷಯ ಇರಲಿ, ಎಷ್ಟೋ ಜನರಿಗೆ ರಾತ್ರಿ ನಿದ್ರಾಪಹರಣವಾಗಿ, ಬೆಳಿಗ್ಗೆ ತಡವಾಗಿ ಏಳುವುದು, ಆಫೀಸಿನಲ್ಲಿ ನಿದ್ದೆ ಮಾಡುವುದು ಇವೆಲ್ಲ ಇದ್ದದ್ದೇ. ಹೀಗೆ ಜನರ ನಿದ್ರಾಪಹರಣ ಏಕಾಗುತ್ತದೆ? ಕಾರಣಗಳೇನಿರಬಹುದು? ಅದಕ್ಕೆ ಕಾರಣಗಳು ಒಂದೇ ಎರಡೇ? ಕೆಲವರಿಗೆ ಜಾಗ ಬದಲಾವಣೆಯೇ ನಿದ್ರಾಪಹರಣ ಮಾಡುತ್ತದೆ. ಇನ್ನು ಕೆಲವರ ನಿದ್ದೆಯಂತೂ ಎಷ್ಟು ಸೂಕ್ಷ್ಮವೆಂದರೆ ತಾವು ಮಲಗುವ

ಕೋಣೆಯಲ್ಲಿಯೇ, ಮಂಚವನ್ನು ಬೇರೊಂದು ಸ್ಥಾನದಲ್ಲಿರಿಸಿದರೆ ಸಾಕು, ನಿದ್ರಾಪಹರಣವಾಗಿಬಿಡುತ್ತದೆ! ಸಧ್ಯಕ್ಕೆ ನಾನಂತೂ ಈ ಕ್ಯಾಟಗರಿಗೆ ಖಂಡಿತಾ ಸೇರುವುದಿಲ್ಲ. ಅಲ್ಲ, ತಡರಾತ್ರಿಯವರೆಗೆ ಟಿವಿ ನೋಡುತ್ತ ಕೂರುವುದು ಕೂಡ ನಿದ್ರಾಪಹರಣಕ್ಕೆ ಮತ್ತೊಂದು ಕಾರಣ ಅಲ್ಲವೇ?

ಈ ಸಂದರ್ಭದಲ್ಲಿ ನನಗೆ ಸುಕುಮಾರಿ ರಾಜಕುಮಾರಿಯೊಬ್ಬಳ ಕಥೆ ಜ್ಞಾಪಕ ಬರುತ್ತಿದೆ. ರಾಜಕುಮಾರನೊಬ್ಬ ಅತ್ಯಂತ ಸುಕುಮಾರಿಯಾದ ರಾಜಕುಮಾರಿಯನ್ನೇ ತಾನು ಮದುವೆಯಾಗುವುದು ಎಂದು ತೀರ್ಮಾನಿಸಿದನಂತೆ. ಎಷ್ಟೇ ಹುಡುಕಿದರೂ, ಯಾವ ರಾಜಕುಮಾರಿಯೂ ಸುಕುಮಾರಿಯಲ್ಲ ಎಂದೇ ಅವನು ತೀರ್ಮಾನಿಸುತ್ತಿದ್ದನಂತೆ. ಆ ಹುಡುಕಾಟದಲ್ಲಿ ಒಂದು ದಿನ ಒಬ್ಬ ರಾಜಕುಮಾರಿ ಅರಮನೆಗೆ ಬಂದಳಂತೆ. ಅವಳನ್ನು ಪರೀಕ್ಷಿಸಲೋಸುಗ, ಮಹಾರಾಣಿ ನಾಲ್ಕೈದು ಸುಪ್ಪತ್ತಿಗೆಗಳನ್ನು ಹಾಸಿ, ಅವುಗಳ ಕೆಳಗೆ ಒಂದು ಒಣಗಿದ ಹುಲ್ಲು ಕಡ್ಡಿ ಇರಿಸಿದಳಂತೆ. ಮರುದಿನ, ರಾಜಕುಮಾರಿಯ ಕಣ್ಣುಗಳು ನಿದ್ದೆಯಿಲ್ಲದೆ ಕೆಂಪಾಗಿದ್ದವಂತೆ. 'ಯಾಕೆ, ನಿದ್ದೆ ಬರಲಿಲ್ಲವೇ?' ಎಂದು ಮಹಾರಾಣಿ ಕೇಳಿದಾಗ, ಹಾಸಿಗೆಯ ಕೆಳಗೆ ಅದೇನಿತ್ತೋ, ಒತ್ತಿ, ಒತ್ತಿ ನನ್ನ ಮೈ ಬಾಸುಂಡೆ ಬಂದಿದೆ. ಹೀಗಿರುವಾಗಿ ನಿದ್ದೆಯೆಲ್ಲಿಯದು?' ಎಂದಳಂತೆ ಆ ಸುಕುಮಾರಿ! ರಾಜಕುಮಾರಿಯ ಉತ್ತರ ಕೇಳಿ ಮಹಾರಾಣಿಯ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ಪರೀಕ್ಷಿಸಿದಾಗ ನಿಜವಾಗಿಯೂ ಅವಳ ಬೆನ್ನ ಮೇಲೆಲ್ಲಾ ಬಾಸುಂಡೆಯಿತ್ತಂತೆ. ರಾಜಕುಮಾರ ಇವಳೇ ನಿಜವಾದ ಸುಕುಮಾರಿ ಎಂದು ಅವಳನ್ನು ಮೆಚ್ಚಿ ಮದುವೆಯಾದನಂತೆ. ನೋಡಿದಿರಾ, ಈ ಸಂದರ್ಭದಲ್ಲಿ ಸುಕುಮಾರಿ ರಾಜಕುಮಾರಿಯ ನಿದ್ದೆಯನ್ನು ಅಪಹರಿಸಿದ್ದು ಒಂದು ಬಟಾಣಿ ಕಾಳು!!! ಆಹಾ, ಭಲೆ, ಹುಲ್ಲು ಕಡ್ಡಿ, ಅವಳ ನಿದ್ರಾಪಹರಣ ಮಾಡಿ ವಿವಾಹಕ್ಕೆ ನಾಂದಿ ಹಾಡಿದೆಯಲ್ಲ! 'ಕಲೆ ಒಳ್ಳೆಯದೇ' ಅಂತ ಹಿಂದೆ ಒಂದು ಸೋಪಿನ ಜಾಹಿರಾತು ನೋಡಿದ್ದೆ (ಅಯ್ಯೋ, ಬಟ್ಟೆಗಳಿಗೆ ಕಲೆಗಳಾಗದಿದ್ದರೆ, ಅವರ ಸೋಪಿನ ಪುಡಿ ಖರ್ಚಾಗುವುದಾದರೂ ಎಂತು?), ಅಂತೆಯೇ ಹುಲ್ಲು ಕಡ್ಡಿ ಒಳ್ಳೆಯದೇ, ರಾಜಕುಮಾರನ ವಿವಾಹಕ್ಕೆ ನಾಂದಿಯಾಯಿತು ಅಲ್ಲವೇ?

ಅಂದ ಹಾಗೆ, ಶಿವರಾತ್ರಿ ದಿನ ಲಕ್ಷಾಂತರ ಜನರ ನಿದ್ರಾಪಹರಣವಾಗುತ್ತದೆ. ಕಾರಣ, ಅಂದು ರಾತ್ರಿ ನಿದ್ದೆ ಮಾಡದೆ, ಶಿವನ ಧ್ಯಾನ ಮಾಡುತ್ತ, ಜಾಗರಣೆ ಮಾಡಿದರೆ, ಮಾಡಿದ ಪಾಪ ಪರಿಹಾರವಾಗುತ್ತದೆಂದು ಭಾವಿಸಿ, ಜನರು, ವರ್ಷವೆಲ್ಲಾ ಮಾಡಿದ ಪಾಪ ಕಾರ್ಯಗಳನ್ನು ಶಿವರಾತ್ರಿಯಂದು ಜಾಗರಣೆಯಿಂದಪರಿಹಾರವಾಯ್ತೆಂದು ತಿಳಿದು, ಮತ್ತೊಂದು ಪಾಪದ ಖೋಟಾಗೆ ತಯಾರಾಗುತ್ತಾರೆ. ಜನರ ನಿದ್ರಾಪಹರಣ ಮಾಡುವ ಶಿವರಾತ್ರಿಯಂದು, ಆ ಸತ್ಕಾರ್ಯಕ್ಕೆ ಇಂಬುಗೊಡಲು ಟಿವಿ ಮಾಧ್ಯಮದವರು, ಅರ್ಧ ರಾತ್ರಿ ಸಿನಿಮಾ ಕಾರ್ಯಕ್ರಮಗಳನ್ನುಹಮ್ಮಿಕೊಂಡು, ಜನರ ನಿದ್ರಾಪಹರಣ ಮಾಡಿ, ಪುಣ್ಯ ಕಟ್ಟಿಕೊಳ್ಳುತ್ತಾರೆ. ಆದರೆ ಅಂದು ರಾತ್ರಿ ಜಾಗರಣೆಯ ಸಲುವಾಗಿ, ಸಿನಿಮಾ ನೋಡುತ್ತ ಕೂರುವ ಜನರಿಗೆ ಶಿವನ ಧ್ಯಾನ ಮಾಡಲು ಬಿಡುವೆಲ್ಲಿರುತ್ತದೆ?

ಅಲ್ಲಾ, ಹಲ್ಲುನೋವಿನಿಂದ ಇಡೀ ರಾತ್ರಿ ನಿದ್ದೆಯಿಲ್ಲದೆ ಇರುವವರ್ಯಾರೋ, 'ಹಲ್ಲು ನೋವು ಸಹ ನಿದ್ರಾಪಹರಣ ಮಾಡತ್ತಲ್ಲವೇ' ಎಂದು ಗೊಣಗಿದ ಹಾಗಾಯ್ತು.

ಖಂಡಿತಾ ಹೌದು ಮಾರಾಯ್ರೆ, ಜುವ, ಜುವ ಜುವಾಂತ ಹಲ್ಲು ಜುವಗುಟ್ಟತೊಡಗುವುದು ರಾತ್ರಿ ಹತ್ತು ಗಂಟೆಯ ಮೇಲೆ–ದಂತ ವೈದ್ಯರು ತಮ್ಮ ಕ್ಲಿನಿಕ್ ಮುಚ್ಚಿ ಮನೆಗೆ ಹೋದ ಎಷ್ಟೋ ಹೊತ್ತಿನ ನಂತರ. ನೋವು ನಿವಾರಕ ಮಾತ್ರೆ ತೆಗೆದುಕೊಳ್ಳೋಣ ಎಂದು ನೋಡಿದರೆ, ಮಾತ್ರೆ ಮುಗಿದರೂ ಅಕಸ್ಮಾತ್ತಾಗಿ ಎಸೆಯದೆ ಬಿಟ್ಟಿದ್ದ ನೋವು ನಿವಾರಕ ಮಾತ್ರೆಯ ಖಾಲಿ ಪಟ್ಟಿ ನಿಮ್ಮತ್ತ ನೋಡಿ ನಕ್ಕಂತೆನಿಸುತ್ತದೆ! 'ಸಂಕಟ ಬಂದಾಗ ವೆಂಕಟರಮಣ'ಅಂತ ಗಾದೆಯೇ ಇದೆಯಲ್ಲವೇ? ನೋವಿದ್ದಾಗ ಮಾತ್ರವೇ ನೋವು ನಿವಾರಕ ಮಾತ್ರೆಯ ನೆನಪು! ಇಲ್ಲವಾದರೆ, ಉಹುಃ, ಅದರ ಬಗ್ಗೆ ಗಮನವೇ ಇರುವುದಿಲ್ಲ. ಹಾಳು ಹಲ್ಲು ನೋವಿಂದ ರಾತ್ರಿ ಹೇಗಪ್ಪಾ ಕಳೆಯೋದು ಅಂತ ಯೋಚಿಸುತ್ತಾ, ಉಸ್ಸಪ್ಪಾ ಅಂತ ಮಲಗಿದ ಮೇಲೆ, ಅದು ನಿದ್ದೆ ಮಾಡಲು ಬಿಟ್ಟೀತೇ?ಈ ಮಧ್ಯೆ, ನಮ್ಮ ನಾಲಿಗೆಗೋ ನೋವುತ್ತಿರುವ ಹಲ್ಲಿನ ಬಗ್ಗೆ ವಿಪರೀತ ಕಾಳಜಿಯುಂಟಾಗಿ, ಅದನ್ನು ಸಾಂತ್ವನ ಮಾಡಲು ಆಪ್ತ ಮಿತ್ರನಂತೆ ಪದೇ ಪದೇ ಅದರ ಬಳಿಸಾರಿ ಮೆಲ್ಲನೆ ಅದನ್ನು ಸವರುತ್ತದೆ. ನಾಲಿಗೆಯ ಈ ಆಪ್ತಮಿತ್ರನ ಕಾರ್ಯವಂತೂ ಇಡೀ ರಾತ್ರಿ ಭರದಿಂದ ಸಾಗತೊಡಗಿದರೆ, ನಿದ್ದೆಯೆಲ್ಲಿಂದ ಬಂದೀತು? ಈ ಮಧ್ಯೆ ಮೆಲ್ಲನೆ ಆರಂಭವಾದ ಹಲ್ಲುನೋವಿನ ಭರಾಟೆ ಜಾಸ್ತಿಯಾಗಿ ನಿದ್ರೆ ಮೈಲಿ ದೂರ ಹಾರಿ ನಿಲ್ಲುತ್ತದೆ. ಅಂತೂ ಹಲ್ಲು ನೋವು ನಿಮ್ಮ ಸುಖ ನಿದ್ದೆಯನ್ನು ಅಪಹರಿಸಿ, ಇಡೀ ರಾತ್ರಿ ಕಾಡುತ್ತದೆ.

ಮನೆಯವರೆಲ್ಲ ಸುಖನಿದ್ದೆಯಲ್ಲಿ ಮುಳುಗಿರುವಾಗ ರಾತ್ರಿಯಿಡೀ ನರಳುತ್ತಾ ಒಂದು ಗಳಿಗೆ ನಿದ್ದೆ ಮಾಡಲು ಬಿಡದೆ ತನ್ನ ನಿದ್ರಾಪಹರಣ ಮಾಡಿದ ಹಲ್ಲುನೋವನ್ನು ಹಳಿಯುತ್ತಾ, ನೋವುನಿವಾರಕ ಮಾತ್ರೆ ಮುಗಿದಿರುವುದು ತಿಳಿದರೂ ಔಷಧಿಯಂಗಡಿಯಿಂದ ತರಲು ಮರೆತಿದ್ದ ತನ್ನನ್ನು ತಾನೇ ಶಪಿಸುತ್ತಾ ರಾತ್ರಿ ಕಳೆಯುವುದಾಗುತ್ತದೆ. ಇದೆಲ್ಲವೂ ಬಹುಶಃ ನಿಮ್ಮ ಅನುಭವವೂ ಇರಬಹುದು ಅಲ್ಲವೇ?

ಹಲ್ಲು ನೋವು ಮಾತ್ರವೇನು? ಶರೀರದ ಯಾವುದೇ ಭಾಗದಲ್ಲಿನ ನೋವು, ಉದಾಹರಣೆಗೆ ತಲೆನೋವು, ಮಂಡಿನೋವು, ಕೀವು ತುಂಬಿದ ಗಾಯದ ನೋವು, ಹೀಗೆ ನೋವಿಗೆ ಒಂದೇ ಎರಡೇ ಕಾರಣಗಳು, ಎಲ್ಲವೂ ತಮ್ಮ ಸಾಮ್ರಾಜ್ಯ ಸ್ಥಾಪಿಸಿ ಆಯಾ ವ್ಯಕ್ತಿಯ ನಿದ್ರಾಪಹರಣ ಮಾಡುವುದು ರಾತ್ರಿಯಲ್ಲೇ.ಅದಕ್ಕೆ ಪರಿಹಾರವೆಂದರೆ ನೋವು ನಿವಾರಕ ಮಾತ್ರೆ! ಇಲ್ಲದಿದ್ದರೆ ನಿದ್ದೆಯೆಲ್ಲಿಯದು?

ಇತ್ತೀಚೆಗೆ ನನ್ನ ಕಸಿನ್ ಫೋನ್ ಮಾಡಿದ್ದಳು. ಹೇಗಿದಿಯೇ? ನಿನ್ನ ಮೊಮ್ಮಗು ಹೇಗಿದೆ? ಎಂದೆ. 'ಹೇಗಿದಾಳೆ ನಿನ್ನ ಮುದ್ದಿನ ಮೊಮ್ಮಗಳು? ಬಾಣಂತಿ ಹುಷಾರಾಗಿದಾಳಾ?' ಎಂದು ನಾನು ಕೇಳಿದೆ. ಅವಳು ಮಗು, ಬಾಣಂತಿ ಚೆನ್ನಾಗಿದಾರೆ. ರಾತ್ರಿಯೆಲ್ಲ ಅತ್ತು, ಅತ್ತೂ ಎಲ್ಲರ ನಿದ್ದೆ ಕೆಡಿಸಿ, ಬೆಳಗಾದ ಕೂಡಲೇ ಏನೂ ಗೊತ್ತಿಲ್ಲದವಳಂತೆ ನೆಮ್ಮದಿಯಾಗಿ ನಿದ್ದೆ ಮಾಡಿದಾಳೆ. ಬಾಣಂತಿನೂ ಈಗ್ಲೇ ಮಲಗಿದ್ದು ಅವರಿಬ್ಬರೂ ಈಗ ನೆಮ್ಮದಿಯಾಗಿ ಮಲಗಿದಾರೆ, ಆದರೆ, ನನಗೋ ಮನೆಕೆಲಸ ಬಿಟ್ಟು ಮಲಗಕ್ಕೆ ಹೇಗೆ ಸಾಧ್ಯ ಹೇಳು?' ಎಂದು ಅಲವತ್ತುಕೊಂಡಳು.

'ಬೆಳಿಗ್ಗೆ ಹುಟ್ಟಿದ ಮಕ್ಕಳು ಒಂದೆರಡು ತಿಂಗಳು ರಾತ್ರಿ ನಿದ್ದೆ ಮಾಡಲ್ವಂತೆ! ಅದ್ಯಾವ ಲಾಜಿಕ್ಕೋ ತಿಳೀದು, ಆಮೇಲೆ ಅವರ 'ಸ್ಲೀಪ್ ಸೈಕಲ್' ಒಂದು ಹದಕ್ಕೆ

ಬಂದು, ರಾತ್ರಿ ಸರಿಯಾಗಿ ನಿದ್ದೆ ಮಾಡ್ತಾರೆ. ಕಳೆದ ವರ್ಷ ತಾನೇ ನಾನೂ ಮಗಳ ಬಾಣಂತನ ಮಾಡಿದ್ನಲ್ಲ. ನಮ್ಮ ಮಗೂನೂ ಇದೇ ಸಮಾಚಾರ. ಎರಡು ತಿಂಗಳು ತುಂಬುವಷ್ಟರಲ್ಲಿ, ಅದಕ್ಕೆ 'ಎಲ್ಲರೂ ರಾತ್ರಿ ನಿದ್ದೆ ಮಾಡ್ತಾರೆ, ನಾನೂ ಹಾಗೇ ಮಾಡ್ಬೇಕು ಅಂತ ಅರ್ಥ ಆಯ್ತೇನೋ?'ಎಂಬಂತೆ ರಾತ್ರಿ ನೆಮ್ಮದಿಯಾಗಿ ನಿದ್ದೆ ಮಾಡತೊಡಗಿತು.ಎಂದೆ. 'ಇನ್ನೂ ಒಂದು ತಿಂಗಳು ರಾತ್ರಿ ನಿದ್ದೆಯಿಲ್ಲದೆ ಕಳೀಬೇಕಾ,' ಎಂದು ಕಣ್ಣರಳಿಸಿ ಕೇಳಿದಳು. ನೋಡಿದ್ರಾ...ಹುಟ್ಟಿದ ಮೊದಲೆರಡು ತಿಂಗಳುಮಗು ಮನೆಯವರ ನಿದ್ರಾಪಹರಣಮಾಡಿ ಎಲ್ಲರನ್ನೂ ಕಂಗೆಡಿಸಿದರೂ, ಮುಂದೆ ಅದು ತನ್ನ ಆಟಗಳಿಂದ ಎಲ್ಲರನ್ನೂ ಆಕರ್ಷಿಸಿ ತನ್ನತ್ತ ಸೆಳೆಯುವುದು, ಮನರಂಜಿಸುವುದು ಎಲ್ಲರ ಅನುಭವ ಅಲ್ಲವೇ.

ಅಲ್ಲಾ, ಸೊಳ್ಳೆಗಳಕಾಟದಿಂದ ನಿದ್ದೆ ಬರತ್ತಾ? ಮಲಗಿದ ಕೂಡಲೇ ಕಿವಿಯ ಬಳಿ ಬಂದು ಗುಂಯ್‌ಗುಡುತ್ತಾ, ನಿನ್ನ ರಕ್ತ ಹೀರಲು ಬಂದಿದೀವಿ, ನಮ್ಮನ್ನೇನು ಮಾಡ್ತೀಯಾ ಎಂದು ಸವಾಲೆಸೆಯುತ್ತಾ ನಮ್ಮ ಮೇಲೆ ಆಕ್ರಮಣ ಮಾಡಿ ರಕ್ತ ಹೀರುವ ಸೊಳ್ಳೆಗಳನ್ನು ಹಿಡಿಯಲು ವಿಫಲ ಪ್ರಯತ್ನ ನಡೆಸುತ್ತಲೇ ಇಡೀ ರಾತ್ರಿ ಕಳೆದುಹೋಗುತ್ತದೆ ಎನ್ನುವುದು ಎಲ್ಲರ ಅನುಭವ. ಅಲ್ಲಾ, ಸೊಳ್ಳೆಗಳು ನಿದ್ರಾಪಹರಣ ಮಾಡುವುದರಲ್ಲಿ ಪ್ರಾವೀಣ್ಯತೆ ಪಡೆದೇ ಹುಟ್ಟುತ್ತವೇನೋ? ಈ ಸೊಳ್ಳೆ ಕಾಟ ನಿವಾರಿಸಲು ಹುಟ್ಟಿಕೊಂಡಿರುವ ಅನೇಕಾನೇಕ ಕಂಪೆನಿಗಳು ಉದ್ಧಾರವಾಗಿರುವುದು ಸೊಳ್ಳೆಗಳಿಂದಲೇ ಅಲ್ಲವೇ.ಸೊಳ್ಳೆ ಸಂಗೀತದಿಂದ ನಿಮ್ಮ ಗಮನ ಸೆಳೆದರೆ, ತಿಗಣೆ ಮೌನವಾಗಿಯೇ ನಿಮ್ಮ ರಕ್ತ ಹೀರಿ, ನಿದ್ರಾಪಹರಣ ಮಾಡಿಬಿಡುತ್ತದೆ. ಅಂತೂ ಇವುಗಳ ಕಾಟದಿಂದ ಮುಕ್ತಿ ಸಿಕ್ಕ ಹೊರತು ನಿದ್ದೆ ಹತ್ತಿರ ಸುಳಿಯುವುದಿಲ್ಲ.

ಚಿಂತೆಗೂ ಚಿತೆಗೂ ಹತ್ತಿರದ ನಂಟು ಎಂಬ ಮಾತಿದೆ. ಆದರೆ, ನಿದ್ದೆಗೂ ಚಿಂತೆಗೂ 'ಎಣ್ಣೆ, ಸೀಗೇಕಾಯಿ ಸಂಬಂಧ' ಎನ್ನುವ ಮಾತು ಏಕಿಲ್ಲವೋ ತಿಳಿಯದು. ಚಿಂತೆಗೆ ಕಾರಣಗಳು ಒಂದೇ ಎರಡೇ? ಮೊದಲಿನಿಂದಸರಿಯಾಗಿ ಪರೀಕ್ಷೆಗೆ ತಯಾರಿ ನಡೆಸದಿದ್ದರೆ, ಪರೀಕ್ಷೆ ಹಿಂದಿನ ದಿನ ಹೇಗೆ ತಾನೇ ನಿದ್ದೇ ಬಂದೀತು? ಪರೀಕ್ಷೆ ಆತಂಕವೇ ಇಲ್ಲಿ ನಿದ್ರಾಪಹರಣಕ್ಕೆ ಕಾರಣವಾಗುತ್ತದೆ. ಪ್ರತಿ ತಿಂಗಳೂ ಕಟ್ಟುವ ಮನೆ ಬಾಡಿಗೆ ಹೊಂದಿಸಲಾಗದಿದ್ದರೆ, ಮನೆಯ ಯಜಮಾನನಿಗೆ ಚಿಂತೆ. ನಾಳೆ ಮನೆ ಮಾಲಿಕ ಮನೆ ಮುಂದೆ ನಿಂತು ಗಲಾಟೆ ಮಾಡಿದರೆ ಏನು ಹೇಳುವುದು? ಮೂರು ತಿಂಗಳಿಂದ ಬಾಡಿಗೆ ಕಟ್ಟಿಲ್ಲ. ನಾಳೆ ಒಂದು ತಿಂಗಳ ಬಾಡಿಗೆನಾದ್ರೂ ಬಿಸಾಕಿ ಅವನನ್ನು ಸಾಗ ಹಾಕೋಣಾಂದ್ರೆ, ಕೈಯಲ್ಲಿ ಕಾಸಿಲ್ಲ. ಎಲ್ಲಿಂದ ಹೊಂದಿಸಲಿ? ಎನ್ನುವ ಚಿಂತೆಯಲ್ಲೇ ರಾತ್ರಿ ಕಳೆದುಹೋಗಿರುತ್ತದೆ. ಮಗಳ ಮದುವೆ ತಡವಾದರೆ ಅದೇ ನಿದ್ರಾಪಹರಣಕ್ಕೆ ಕಾರಣವಾಗುತ್ತದೆ. ಇಲ್ಲವೇ, ಮಗಳ ಮದುವೆ ಹಿಂದಿನ ದಿನ–ನಾಳೆಯ ದಿನ ಬರುವ ಬೀಗರು ಹೇಗೋ ಏನೋ? ಹೊಂದಿಕೊಂಡು ಹೋಗ್ತಾರೋ ಅಥವಾ ಸಣ್ಣಪುಟ್ಟ ವಿಷಯಗಳಿಗೆ ಕೊಂಕು ತೆಗದು ಗಲಾಟೆ ಮಾಡ್ತಾರೋ ಅನ್ನೋ ಆತಂಕವೇ ಸಾಕು ಮದುಮಗಳ ತಂದೆತಾಯಿಯ ನಿದ್ರಾಪಹರಣಕ್ಕೆ! ಇನ್ನು ಮದುಮಗಳಿಗೆ ನಿದ್ದೆ? ಉಹೂಃ, ಭವಿಷ್ಯದ ಬಗ್ಗೆ ಸುಮಧುರ ಕನಸು, ನಿರೀಕ್ಷೆ, ಹೇಗೋ ಏನೋ ಎಂಬ ಆತಂಕ ಎಲ್ಲವೂ ಮೇಳೈಸಿ ಅದು ಅವಳ ನಿದ್ದೆ ಅಪಹರಿಸಿಬಿಡುತ್ತದೆ! ಪರೀಕ್ಷಾ ಫಲಿತಾಂಶದ ಹಿಂದಿನ ದಿನ ಅದೆಷ್ಟು ಮಂದಿ ವಿದ್ಯಾರ್ಥಿಗಳ ನಿದ್ರಾಪಹರಣವಾಗುತ್ತದೋ ತಿಳಿಯದು! ವಿರಹ

ವೇದನೆ ನಿದ್ರಾಪಹರಣ ಮಾಡತ್ತಲ್ವಾ? ರಾತ್ರಿಯೆಲ್ಲಾ ಪ್ರಿಯಕರನ/ಪ್ರೇಯಸಿಯ ನೆನಪಿನಲ್ಲಿ ನಿದ್ದೆಯಿಲ್ಲದೆ ಕಳೆಯುವ ಯುವಪ್ರೇಮಿಗಳದೆಷ್ಟು ಮಂದಿಯೋ? ಅಂತೂ, ನಿದ್ರಾಪಹರಣ ಮಾಡೋ ಹತ್ತಾರು ಕಾರಣಗಳಿಲ್ಲದೆ, ಎಲ್ಲರೂ ನೆಮ್ಮದಿಯಿಂದ ನಿದ್ದೆ ಮಾಡುವಂತಿದ್ದರೆ, ನಿದ್ರೆ ಮಾತ್ರೆಗಳ ಉದ್ಯಮ ತಲೆಯೆತ್ತುತ್ತಿತ್ತೇ? ಖಿನ್ನತೆ, ನೋವು, ಚಿಂತೆ, ಹೀಗೆ ಒಬ್ಬ ವ್ಯಕ್ತಿಯ ನಿದ್ರಾಪಹರಣಕ್ಕೆ ಹಲವಾರು ಕಾರಣಗಳಿದ್ದು, ಜನರು ನಿದ್ದೆಯಿಲ್ಲದೆ ಹಾಸಿಗೆಯಲ್ಲಿ ಹೊರಳಾಡಿ, ಬೇಸರದಿಂದ ಕೊನೆಗೆ ನಿದ್ದೆ ಮಾತ್ರೆಗೆ ಶರಣಾಗುವುದು ಅಪರೂಪವೇನಲ್ಲ. ಓ...ಈ ನಿದ್ದೆ ಮಾತ್ರೆಗಳು ಮನುಷ್ಯನನ್ನು ತನ್ನ ಹತೋಟಿಗೆ ತೆಗೆದುಕೊಂಡು, ಅದಿಲ್ಲದಿದ್ದರೆ, ನಿದ್ದೆ ಹತ್ತಿರವೂ ಸುಳಿಯುವುದಿಲ್ಲ ಎಂಬ ಸನ್ನಿವೇಶ ಸೃಷ್ಟಿಸಿ ಬಿಡುತ್ತವೆ. ಈ ನಿದ್ದೆ ಮಾತ್ರೆಗಳನ್ನು ಅಪರಿಮಿತ ಸಂಖ್ಯೆಯಲ್ಲಿ ಒಮ್ಮೆಗೇ ತೆಗೆದುಕೊಂಡು ಎಷ್ಟೋ ಆತ್ಮಹತ್ಯೆಗಳಿಗೂ ಕಾರಣವಾಗಿವೆ ಎಂಬುದು ಎಲ್ಲರಿಗೂ ತಿಳಿದ ಸಂಗತಿಯೇ.

ಹೀಗೆ ನೆಮ್ಮದಿಯ ನಿದ್ದೆಗೆ ದೈಹಿಕ ಹಾಗೂ ಮಾನಸಿಕ ನೆಮ್ಮದಿಯೇ ಕಾರಣವಾದರೆ, ಚಿಂತೆಯಿಂದ ನಿದ್ರಾಪಹರಣಕ್ಕೆ ಹಲವಾರು ಕಾರಣಗಳು ಹುಟ್ಟಿಕೊಳ್ಳುತ್ತವೆ.

ಒಂದು ಕತೆ ಓದಿದ್ದೆ. ಫೈವ್ ಸ್ಟಾರ್ ಹೋಟೆಲಿನ ಎದುರು ಫುಟ್‌ಪಾತ್ ಮೇಲೆ ಮಲಗಿ ನಿದ್ರಿಸುತ್ತಿದ್ದ ವ್ಯಕ್ತಿಯನ್ನು ಕಂಡ ಶ್ರೀಮಂತನೊಬ್ಬ ಅವನು ಫೈವ್ ಸ್ಟಾರ್ ಹೋಟೆಲಿನ ಕೋಣೆಯಲ್ಲಿ ಇನ್ನೆಷ್ಟು ಸುಖನಿದ್ರೆ ಮಾಡಿಯಾನು ಎಂದು ಯೋಚಿಸಿ, ಒಂದು ದಿನದ ಮಟ್ಟಿಗೆ ಆ ಹೋಟೆಲಿನ ಕೋಣೆಯಲ್ಲಿ ಮಲಗುವ ಏರ್ಪಾಡು ಮಾಡಿದನಂತೆ. ಮರುದಿನ ಆ ವ್ಯಕ್ತಿ ಬಂದು, 'ಹೇಗಿತ್ತು ನಿನ್ನ ರಾತ್ರಿ? ಚೆನ್ನಾಗಿ ನಿದ್ರಿಸಿದೆಯಾ,' ಎಂದಿದ್ದಕ್ಕೆ ಅವನು ಕೊಟ್ಟ ಉತ್ತರ ಮಾರ್ಮಿಕವಾಗಿದೆ, 'ಪ್ರತಿದಿನ ಒಂದಿಲ್ಲೊಂದು ದಿನ ಈ ಹೋಟೆಲಿನ ಕೋಣೆಯಲ್ಲಿ ನಿದ್ರಿಸುವ ಕನಸು ಕಾಣುತ್ತಾ ಸುಖನಿದ್ದೆ ಮಾಡುತ್ತಿದ್ದೆ. ಆದರೆ, ನಿನ್ನೆ ರಾತ್ರಿ ಮಾತ್ರ ಮರುದಿನದಿಂದ ಮತ್ತೆ ಫುಟ್‌ಪಾತ್ ವಾಸ ಎಂಬ ಕಟು ಸತ್ಯ ನನ್ನ ನಿದ್ದೆಯನ್ನು ಅಪಹರಿಸಿತು,' ಎಂದನಂತೆ. ಅವನ ಕೆಂಪಾದ ಕಣ್ಣು ಆ ಮಾತು ಸತ್ಯ ಎಂದು ಸಾಬೀತುಪಡಿಸಿತ್ತು. ಆಗ ಆ ವ್ಯಕ್ತಿ ಆಶ್ಚರ್ಯಚಕಿತನಾಗಿ, 'ಓಹ್, ನಾನು ಈ ನಿಟ್ಟಿನಲ್ಲಿ ಯೋಚಿಸಿರಲಿಲ್ಲ. ಕ್ಷಮಿಸು,' ಎಂದನಂತೆ. ಅಂತೂ ನನಸಾದ ಕನಸೇ ಆ ಬಡವನ ನಿದ್ದೆಯನ್ನು ಅಪಹರಿಸಿತ್ತು ಅಲ್ಲವೇ?

ಒಟ್ಟಿನಲ್ಲಿ ಸುಖನಿದ್ದೆಗೆ ನೆಮ್ಮದಿಯೇ ಸೂತ್ರಧಾರಿಯಾದರೆ, ನಿದ್ರಾಪಹರಣಕ್ಕೆ ಹಲವಾರು ಕಾರಣಗಳು ಕಣ್ಣಿಗೆ ಬೀಳುತ್ತವೆ. ನಾನು ಹೇಳಿರುವುದು ಕೇವಲ ಕೆಲವು ಮಾತ್ರ. ಇನ್ನು ನಿಮ್ಮ ಅನುಭವದ ಮೇರೆಗೆ ಮತ್ತೂ ಕಾರಣಗಳನ್ನು ಸೇರಿಸಿಕೊಳ್ಳಬಹುದು.

■

---

## ಇತ್ತೀಚೆಗೆ ಬಂದಿರುವ ಪುಸ್ತಕ


ದಿ ಬೆಸ್ಟ್ ಆಫ್

ಸುಖ ಸಂಸಾರಕ್ಕೆ ಹತ್ತು ಸೂತ್ರಗಳು

ಬೀಚಿ ಪ್ರಕಾಶನದ

ಜನರು ಕೇಳಿದ
ಪ್ರಶ್ನೆಗಳಿಗೆ ಬೀಚಿ
ಅವರು ಸ್ವಾರಸ್ಯವಾಗಿ
ಉತ್ತರ ನೀಡಿದ್ದಾರೆ.

ಉತ್ತರಭೂಪ
ಪ್ರಶ್ನೋತ್ತರಗಳ
ಸಂಗ್ರಹ




# ಉತ್ತರಭೂಪ

"ತಾಯಿ" ಎಂಬ ಎರಡು ಅಕ್ಷರಗಳ ಬಗ್ಗೆ ನಿಮ್ಮ ಅಭಿಪ್ರಾಯ?

"ಜಗತ್ತು" ಎಂಬ ಮೂರು ಅಕ್ಷರಗಳ ಶಬ್ದಕ್ಕಿಂತಲೂ ಇದು ಬಹಳ ದೊಡ್ಡದು.

–ಬೀchi

ಭರತನಾಟ್ಯ ಹಾಗೂ ಕ್ಯಾಬರೆ ನೃತ್ಯಗಳಲ್ಲಿ ಕಲಿಯಲು ಸುಲಭ ಯಾವುದು ಸಾರ್?

ಭರತನಾಟ್ಯ ಕಲಿಯುವುದು ಕಷ್ಟ, ಕ್ಯಾಬರೆ ನೃತ್ಯವನ್ನು ಮರೆಯುವುದು ಕಷ್ಟ.

ಬೀchi

ವಿದೇಶಿಯರಂತೆ ನಾವೂ ಸಹ ತುಟಿಗೆ ತುಟಿ ಜೋಡಿಸಿ. .....

ಈ ಮಹಾ ಕಾರ್ಯಕ್ಕೆ ವಿದೇಶಿಯರೇ ಬೇಕೇ? ಅಮ್ಮ ಅನ್ನಿ, ಈಗ ತುಟಿಗೆ ತುಟಿ ಜೋಡಣೆ ಆಗಲಿಲ್ಲವೇ?

ಬೀchi

ಬೆಲೆ : **299/-** ನಮ್ಮ ಅಪರಂಜಿ ಬಳಗಕ್ಕೆ ವಿಶೇಷವಾಗಿ
10% ರಿಯಾಯಿತಿ ಹಾಗೂ ಅಂಚೆ ಉಚಿತ.

ಆಸಕ್ತರು ಸಂಪರ್ಕಿಸಿ: **M: 9845264304**

**Phonepay, Google pay** ಜೊತೆಯಲ್ಲಿ ತಮ್ಮ ವಿಳಾಸವನ್ನು
ಈ ನಂಬರಿಗೆ ಕಳುಹಿಸಿ **9845264304**

ಇತರ ಪುಸ್ತಕಗಳ ಮಾಹಿತಿ ಪಡೆಯಲು ನಮ್ಮ ಅಂತರ್ಜಾಲ www.beechi.in

# ಈ ನರಮನುಷ್ಯರ ಸ್ವಭಾವವೇ ಬಹಳ ವಿಚಿತ್ರ!

**–ಶಂಸ ಐತಾಳ**

ಮಂಜುನಾಥರಾಯರು ಮೊದಲು ಬೆಳಿಗ್ಗೆ ನಾಲ್ಕು – ನಾಲ್ಕೂವರೆಗೇ ಏಳುತ್ತಿದ್ದರಂತೆ; ತಾವೇ ಗೀಜ್ಹರಿಗೆ ಸ್ವಿಚ್ ಹಾಕಿ, ಸ್ನಾನ–ಗೀನ, ಪೂಜೆ – ಗೀಜೆ ವಗೈರೆ ಮುಗಿಸಿ, 'ನಂದಿನಿ'ಗೆ ಹೋಗಿ 'ಶುಭಂ' ಹಾಲನ್ನು ಅದೇ ಬೀದಿಗೆ ಆಗಷ್ಟೇ ಬಂದು ಬಿದ್ದಿದ್ದ ಪತ್ರಿಕೆಗಳ ಗುಡ್ಡೆಯಲ್ಲಿರುವ 'ಉದಯವಾಣಿ'ಯ ಒಂದು ಬಿಡಿ ಪ್ರತಿಯನ್ನೂ ತೆಗೆದುಕೊಂಡು ಬಂದು, 'ರೆಡ್‌ಲೇಬಲ್' ಗರಮ್ ಮಸಾಲಾ ಚಹಾ ಮಾಡಿ, ಕುಡಿದು, ಅಕ್ಕಪಕ್ಕದ ಮನೆಗಳಿಗೆ ಹುಡುಗರು ಪತ್ರಿಕೆ ಎಸೆದು ಹಾಕುವಷ್ಟರಲ್ಲಿ ಪತ್ರಿಕೆಯನ್ನು ಕೊನೆಯವರೆಗೆ ಓದಿಮುಗಿಸುತ್ತಿದ್ದರಂತೆ. ನಿಜವೋ, ಸುಳ್ಳೋ, ದೇವರಾಣೆ! ನನಗಂತೂ ತಿಳಿದಿಲ್ಲ. ಏಕೆಂದರೆ ಈಗ ಅವರು ಸೂರ್ಯವಂಶೀಯರಾಗಿದ್ದಾರೆ. ಆದುದರಿಂದ ನಾನೇ ಬೆಳಿಗ್ಗೆ ಐದು – ಐದೂವರೆಗೆ ಎದ್ದು, ಅವರ ಚರಣ–ಕಮಲಗಳಿಗೆ ತುಟಿಯೊತ್ತಿ, 'ಎದ್ದೇಳು ಮಂಜುನಾಥಾ' ಎಂದು ಎಬ್ಬಿಸಬೇಕು ಈಗ ಹಾಲು ಮತ್ತು ಪೇಪರ್‌ಗಳೆರಡೂ ಮನೆಗೇ ಬರುತ್ತವೆ. ಅವರಿಗೆ ಗಾಳಿ ಸಂಚಾರ ಮಾಡಿ ಬರುವುದೊಂದೇ ಕೆಲಸ. ಅದೂ ಕೋಲನ್ನು ಅವರ ಕೈಗೆ ಕೊಟ್ಟು ನಾನೇ ಕರೆದುಕೊಂಡು ಹೋಗಬೇಕು. ಅವರಿಗೆ ಫುಟ್‌ಪಾತ್ ಮೇಲೆ, ಆಚೆ–ಈಚೆ ನೋಡದೆ, ನೇರಾನೇರ ಮುನ್ನಡೆಯುವ ಆಸೆ. ನಡುವೆ ಎಲ್ಲಿಯೂ ನಿಲ್ಲಕೂಡದು. ಆದರೆ ನನಗೆ? ಹಲವಾರು ಸ್ನೇಹಿತರು ಸಿಗುತ್ತಾರೆ; ಅವರಿಗೆ ಗುಡ್‌ಮಾರ್ನಿಂಗ್ ಹೇಳಿ ವಿಷ್ ಮಾಡಬೇಕು. ಹೊಸಬರು ಸಿಕ್ಕರೆ, ಅವರೊಂದಿಗೆ ಕೂಡ ಮಾತನಾಡಿ ಸ್ನೇಹ–ಪರಿಚಯ ಬೆಳೆಸಿಕೊಳ್ಳಬೇಕು. ಅವರು ಆಗಾಗ 'ಬೇಗ ಬಾ ಬೇಗ ಬಾ' ಎಂದು ಕೂಗುತ್ತಾರೆ. ನಾನೇ ಅವರ ಕೈಗೆ ಕೊಟ್ಟ, ನನ್ನ ಕೋಲನ್ನೇ ತೋರಿಸಿ ನನ್ನನ್ನೇ ಹೆದರಿಸುತ್ತಾರೆ. ವಾಕಿಂಗ್ ಮುಗಿಸಿಬರಲು ಕೂಡ ಸರಿಯಾಗಿ ತಿಳಿಯದ ಈ ನರಮನುಷ್ಯರ ಸ್ವಭಾವವೇ ನನಗೆ ಅರ್ಥವಾಗುತ್ತ ಇಲ್ಲ.

ತಣ್ಣನೆಯ ಗಾಳಿಯನ್ನು ಕುಡಿದು ಮನೆಗೆ ಬಂದಮೇಲೆ ಅರ್ಧ–ಮುಕ್ಕಾಲು ಗಂಟೆ ಆಟ–ವಾಡೋಣವೆಂದರೆ ಅದಕ್ಕೂ ಮನೆಯವರು ಕಲ್ಲುಹಾಕುತ್ತಾರೆ. ಬಿಸಿ ಚಪಾತಿ ಮತ್ತು ತುಪ್ಪವನ್ನೋ ದೋಸೆ, ಅಥವಾ ಇಡ್ಲಿ ಮತ್ತು ಬೆಣ್ಣೆಯನ್ನೋ ಬ್ರೆಡ್–ಬಿಸ್ಕತ್‌ಗಳನ್ನೋ ಪ್ಲೇಟಿಗೆ ಹಾಕಿ ತಂದು, ನನ್ನ ಮುಂದಿಟ್ಟು. 'ತಿನ್ನು, ತಿನ್ನು' ಎಂದು ದಬಾಯಿಸುತ್ತಾರೆ; ತಿನ್ನದಿದ್ದರೆ ಯದ್ವಾತದ್ವಾ ಬಯ್ಯುತ್ತಾರೆ, 'ಹೊಟ್ಟೆ ನೋವೇ?' ಎಂದು ಹರ್ಮಾಯಕ ರಾಗ ಮಾಡುತ್ತಾ 'ಮೊಚಡು' ತಂದು ಬಲವಂತದಿಂದ ತಿನ್ನಿಸುತ್ತಾರೆ. 'ನನಗೆ ಇಷ್ಟು ಬೇಗ ಬ್ರೇಕ್‌ಫಾಸ್ಟ್ ಬೇಡ. ಸ್ವಲ್ಪ ಆಟ ಆಡಿ ಸುಸ್ತಾದ ಮೇಲೆ ತಿನ್ನುತ್ತೇನೆ, ದಮ್ಮಯ್ಯ' ಎಂದು ಗೋಗರೆದರೂ ನನ್ನ ಮಾತಿಗೆ ಸೊಪ್ಪು ಹಾಕುವುದಿಲ್ಲ 'ಇಡೀ ದಿನ ಆಟ, ಆಟ, ಆಟ! ಆಟವಾಡಿದ್ದು ಸಾಕು ರಿಲ್ಯಾಕ್ಸ್, ರಿಲ್ಯಾಕ್ಸ್' ಎಂದು ಉಪದೇಶಿಸುತ್ತಾರೆ, ಎಷ್ಟೋ ಸಲ ನಡುಹಗಲಿನಲ್ಲಿಯೇ 'ಗುಡ್‌ನೈಟ್ ಮಾಡು' ಎಂದು ಒತ್ತಾಯಿಸುತ್ತಾರೆ. ಹಸಿವೆಯೆಂಬೋ ಹಸಿವೆಯಾಗಿ, ತಿಂಡಿಯೆಂಬೋ ತಿಂಡಿಗಾಗಿ ರಿಕ್ವೆಸ್ಟ್ ಮಾಡಿದಾಗ, ಯಾರೂ ನನ್ನತ್ತ ಗಮನವನ್ನು ಹರಿಸುವುದಿಲ್ಲ. 'ಸುಮ್ಮ ಸುಮ್ಮನೆ ಏಕೆ ಕೂಗುತ್ತೀ? ಎಂದು ಸುಮ್ಮ ಸುಮ್ಮನೆ ಕೂಗುತ್ತಾರೆ. ಈ ನರಮನುಜರ

ಬುದ್ಧಿಯೇ ನನಗೆ ಅರ್ಥವಾಗುತ್ತ ಇಲ್ಲ.

ನೆರೆಹೊರೆಯ ಮಕ್ಕಳಿಗೆಲ್ಲ ನಾನು ಮುದ್ದಿನ ಅಪ್ಪಿ, ಪಾಪದ ಪಪ್ಪಿ'– ನನಗೂ ಚಿಕ್ಕಮಕ್ಕಳೆಂದರೆ ಕಂಡಾಪಟ್ಟೆ ಪ್ರೀತಿ. ನನ್ನನ್ನು ಒಬ್ಬೊಬ್ಬರು ಒಂದೊಂದು ಹೆಸರಿನಿಂದ ಕರೆಯುತ್ತಾರೆ. 'ಪುಟ್ಟ ಪುಟ್ಟಣ್ಣ, ಪುಟ್ಟಮರಿ, ಪುಟ್ಟಾಭಟ್ಟ, ಕಿಟ್ಟಣ್ಣ, ರಾಜಾ, ಟೈಗರ್, ರಾಜಾಹುಲಿ. ಪೆದ್ದಂಭಟ್ಯಂ ಶತಪೆದ್ದು' ಇತ್ಯಾದಿ ಇತ್ಯಾದಿ ಕೆಲವೊಮ್ಮೆ 'ನೀನು ಯೂಸ್‌ಲೆಸ್, ವೇಸ್ಟ್' ಎಂದು ನನ್ನ ಜನ್ಮ ಜಾಲಾಡುವುದೂ ಉಂಟು. ಗಲೀಜು ಕಸದ ಮೂಲೆಗೆ ಹೋದಾಗ 'ಕೊಳಕು ಹಂದಿ' ಎಂದು ಬಯ್ಯುತ್ತಾರೆ. ಬಾಲ್ಯ ಸಹಜವಾದ ತಂಟೆ, ತರಲೆ, ಕೀಟಲೆ ಮಾಡಿದಾಗ 'ಕೋತಿ' ಎಂದು ಹೊಗಳುತ್ತಾರೆ. ಪಕ್ಕದ ಮನೆಯ ಪಾಪದ ಕನ್ನಡ ಮಾಸ್ತ್ರು ನನಗಿಟ್ಟ ಮುದ್ದಾದ ಹೆಸರೇ 'ಸುಂದರಾಂಗ ಜಾಣ'. ಈ ಮನೆಯ ಯಜಮಾನರಾಗಿರುವ ಮಂದಾರಾ ಮಾತ್ರ ನನ್ನನ್ನು 'ಮರಿರಾಯರೇ' ಎಂದು ಗೌರವದಿಂದ ಸಂಬೋಧಿಸುತ್ತಾರೆ. ಹೀಗೆ ದೇವರಿಗಿರುವಂತೆ ನನಗೆ ಅನೇಕ ಹೆಸರುಗಳು: 'ಏಕಮ್ ಸದ್ವಿಪ್ರಾ ಬಹುಧಾನದಂತಿ' ಎನ್ನುತ್ತಾರಲ್ಲಾ– ಹಾಗೆಯೇ ನಾನು ಈ ಮನೆಗೆ ದತ್ತು ಪುತ್ರನಾಗಿ ಬರುವ ಮೊದಲು ನನಗೆ ನಾಮಕರಣವಾಗಿತ್ತಂತೆ. ಆ ಮೂಲ ಹೆಸರು ಈಗ ನನ್ನ ನೆನಪಿನಲ್ಲಿಲ್ಲ. ಮಮ್ಮಿಗೆ ನೆನಪಿದ್ದರೂ ಇರಬಹುದೋ ಏನೋ? ಈಗ ಯಾರು ನನ್ನ ಮುಖನೋಡಿ ಯಾವ ಹೆಸರಿನಿಂದ ಕರೆದರೂ ನಾನು ತಲೆಯನ್ನು ಅಲ್ಲಾಡಿಸಬೇಕು; ಅವರ ಮಾತಿಗೆ ಕಿವಿಗೊಡಬೇಕು. ನನ್ನ ಖರ್ಮ! ಈ ನರ ಮನುಷ್ಯರಿಗೆ ಇಂತಹ ಸೂಕ್ಷ್ಮಗಳೆಲ್ಲ ಅರ್ಥವಾಗುವುದಿಲ್ಲವಲ್ಲ!

ಬೆಳಿಗ್ಗೆ–ಸಂಜೆ ಮತ್ತು ರಾತ್ರಿ– ಹೀಗೆ ದಿನಕ್ಕೆ ಮೂರು ಸಲ ಮಾತ್ರ ನನಗೆ ಹೊಸಿಲು ದಾಟಿ ಮನೆಯಿಂದ ಹೊರಗೆ ಹೋಗಿ ಜನದಟ್ಟಣೆಯಲ್ಲಿ, ಟ್ರ್ಯಾಫಿಕ್ ಜ್ಯಾಮಿನಲ್ಲಿ ನ(ಹೊ)ಡೆದಾಡುವ ಸದವಕಾಶ– ಅದೂ ಅವರ ಬಿಗಿನಿಯಂತ್ರಣದಲ್ಲಿ. ಉಳಿದೆಲ್ಲ ಸಮಯ ನಾನು ನಾಲ್ಕು ಗೋಡೆಗಳ ನಡುವಣ ತಿಹಾರ್ ಅಥವಾ ಪರಪ್ಪನ ಅಗ್ರಹಾರದ ಒಳಗೇ ಠಿಕಾಣಿ ಹೂಡಿರಬೇಕು. ಸೆರೆಮನೆಯಿಂದ ಹೊರಗೆ ಹೆಜ್ಜೆಯಿಡುವ ಹಾಗೆಯೇ ಇಲ್ಲ. ಸ್ವೇಚ್ಛೆಯಿಂದ ತಿರುಗಾಡುವಂತಹ ಸಾಂವಿಧಾನಿಕವಾದ ಮೂಲಭೂತ ಹಕ್ಕೂ ನನಗಿಲ್ಲವೆಂದರೆ? ನನ್ನನ್ನು ಹೊರಗೆ ಬಿಟ್ಟರೆ ಬಾಗಿಲು ತೆರೆದಿರುವ ಮನೆಗಳಿಗೆಲ್ಲ ನಾನು ನುಗ್ಗುವೆನಂತೆ; ಮನೆಯೊಳಗಾದರೂ ನನಗೆ ಸಂಪೂರ್ಣ ಸ್ವಾತಂತ್ರ್ಯವಿದೆಯೇ? ಊಹುಂ, ಅಡಿಗೆ ಮನೆಗೆ ಹೋಗಬೇಡ', 'ದೇವರ ಕೋಣೆಯಲ್ಲಿ ನಿನಗೇನು ಕೆಲಸ?' 'ಕಸದ ಮೂಲೆಗೆ ಏಕೆ ಹೋಗುತ್ತೀಯಾ?', 'ಬಾಗಿಲಿಗೆ ಅಡ್ಡವಾಗಿ ನಿಲ್ಲಬೇಡ', 'ಹಾಲಿನ ನಡುವೆ ಮಲಗಬೇಡ' – ಹೀಗೆ ಎಷ್ಟೊಂದು ಸುಗ್ರೀವಾಜ್ಞೆಗಳು, ಹಿತೋಪದೇಶಗಳು! ಏನು ಮಾಡಬೇಕು, ಏನು ಮಾಡಕೂಡದು ಎಂದು ವಿವೇಚಿಸುವಷ್ಟು ಬುದ್ಧಿ ನನಗೆ ಬಂದಿಲ್ಲವೇ? ಈ ನರಮನುಜರಿಗೆ ಯಾವಾಗ ಬುದ್ಧಿ ಬರುತ್ತದೆಯೋ ಅಥವಾ ಎಂದೂ ಬರುವುದೇ ಇಲ್ಲವೋ.

ನಾನು ಈ ಮನೆಗೆ ಬರುವಾಗ ಹತ್ತಿಯ ಚಿಕ್ಕ ಮುದ್ದೆಯಂತೆ ಇದ್ದೆನಂತೆ; ಕಾಲು ಬಾಲ ಕಣ್ಣು ಬಾಯಿ ಮೂಗು ಕಿವಿಗಳನ್ನು ಸ್ಪಷ್ಟವಾಗಿ ಗುರುತಿಸಲು ಕೂಡ ಸಾಧ್ಯವಾಗುವಂತೆ ಇದ್ದಿರಲಿಲ್ಲವಂತೆ– ನನ್ನ ಸ್ವರೂಪ. ನನ್ನ ಅಂದಿನ ತೂಕ

ಕೇವಲ ಎರಡೂಮುಕ್ಕಾಲು ಕೆಜಿ ಆಗಿತ್ತಂತೆ. 'ಒಂದು ವರ್ಷದೊಳಗೆ ಹನ್ನೊಂದೂವರೆ ಕೆಜಿ ಆದ್ನಲ್ಲ ಇವನು!' ಎಂದು ಎಲ್ಲರೂ ಈಗ ಆಶ್ಚರ್ಯೋದ್ಗಾರ ಮಾಡುತ್ತಾರೆ. ಇದೇ ತಿಂಗಳ ಇಪ್ಪತ್ತೆಂಟಕ್ಕೆ ನನಗೆ ಒಂದು ವರ್ಷ ತುಂಬುತ್ತದೆಯಂತೆ. ನನ್ನ ಬರ್ತ್‌ಡೇಯನ್ನಾದರೂ ಮನೆಯವರು ಸೆಲೆಬ್ರೇಟ್ ಮಾಡುತ್ತಾರೆಯೋ ಅಥವಾ ಇಲ್ಲವೋ. ನನಗಂತೂ ಕೇಕ್ ಎಂದರೆ ಪಂಚಪ್ರಾಣ–ಕಾದು ನೋಡುವುದೊಂದೇ ದಾರಿ ಏಕೆಂದರೆ ಈ ನರ ಮನುಷ್ಯರ ಸ್ವಭಾವವನ್ನು ಅರ್ಥಮಾಡಿಕೊಳ್ಳುವುದು ತುಂಬ ಕಷ್ಟ ತುಂಬಾ ಕಷ್ಟ, ತುಂಬಾ ತುಂಬಾ ಕಷ್ಟ.

■

---

